24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 24 | ಸಂಚಿಕೆ 98 | ನವದೆಹಲಿ | ಬೆಲೆ ₹ 10 | ಅಕ್ಟೋಬರ್ 3 2026 ಶನಿವಾರ

# ಜನಕಪುರಿ ಕನ್ನಡ ಕೂಟ (ರಿ), ನವದೆಹಲಿ




## ಸ್ಮರಣ ಸಂಚಿಕೆ ಬಿಡುಗಡೆ ಹಾಗೂ ಸನ್ಮಾನ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು

ದಿನಾಂಕ: 04.10.2026, ಭಾನುವಾರ
ಸಮಯ: ಬೆಳಗ್ಗೆ : 10 ರಿಂದ ರಾತ್ರಿ 9 ಗಂಟೆಯವರೆಗೆ
ಸ್ಥಳ: ದೆಹಲಿ ಕರ್ನಾಟಕ ಸಂಘದ ಸಭಾಂಗಣ, ಆರ್.ಕೆ.ಪುರಂ, ಸೆಕ್ಟರ್ 12, ನವದೆಹಲಿ–110 022

### ಬೆಳಗ್ಗೆ 10 ಗಂಟೆಗೆ ಉದ್ಘಾಟನಾ ಸಮಾರಂಭ

**ಉದ್ಘಾಟಕರು**
**ಡಾ.ಜಯತೀರ್ಥ ಆರ್.ಜೋಶಿ**
ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಹಾಗೂ ಡೈರೆಕ್ಟರ್
ಜನರಲ್ ಬ್ರಹ್ಮೋಸ್ ಏರೋಸ್ಪೇಸ್

**ಮುಖ್ಯ ಅತಿಥಿಗಳು**
**ಶ್ರೀಬಸವರಾಜ ಎಸ್.ದೇಸಳ್ಳಿ**
ಜನರಲ್ ಮ್ಯಾನೇಜರ್, ಕರ್ನಾಟಕ ಬ್ಯಾಂಕ್ ಲಿ.
ಪ್ರಾದೇಶಿಕ ಕಚೇರಿ, ನವದೆಹಲಿ

**ಅಧ್ಯಕ್ಷತೆ**
**ಡಾ.ಅಶೋಕ ಎಂ.ಈಟಿ**
ಅಧ್ಯಕ್ಷರು
ಜನಕಪುರಿ ಕನ್ನಡ ಕೂಟ

### ಸಂಜೆ 5.30ಕ್ಕೆ ಸಮಾರೋಪ ಸಮಾರಂಭ

ಮುಖ್ಯ ಅತಿಥಿಗಳು | ಗೌರವ ಉಪಸ್ಥಿತಿ | ವಿಶೇಷ ಆಹ್ವಾನಿತರು


**ಶ್ರೀ ಟಿ.ಬಿ.ಜಯಚಂದ್ರ**
ಮಾಜಿ ಕಾನೂನು ಮಂತ್ರಿಗಳು ಹಾಗೂ ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿ, ನವದೆಹಲಿ


**ಶ್ರೀ ರೇಣುಕುಮಾರ್**
ಅಧ್ಯಕ್ಷರು
ದೆಹಲಿ ಕರ್ನಾಟಕ ಸಂಘ, ನವದೆಹಲಿ


**ಶ್ರೀರಾಧ ಕೃಷ್ಣ**
ಪ್ರಧಾನ ಕಾರ್ಯದರ್ಶಿಗಳು
ದೆಹಲಿ ಕರ್ನಾಟಕ ಸಂಘ, ನವದೆಹಲಿ


**ಶ್ರೀ ಪ್ರದ್ಯುಮ್ನ ರಾಜಪುತ್**
ಶಾಸಕರು –ದ್ವಾರಕ , ದೆಹಲಿ ಹಾಗೂ ಚೇರ್ಮನ್ ಡಿಸ್ಟ್ರಿಕ್ಟ್ ಡೆವಲಪ್ಮೆಂಟ್, ಸೌತ್‌ವೆಸ್ಟ್ ದೆಹಲಿ


**ಸಮೀರ್ ಶುಕ್ಲ, ಐಎಎಸ್**
ನಿವಾಸಿ ಆಯುಕ್ತರು, ಕರ್ನಾಟಕ ಭವನ, ನವದೆಹಲಿ, ಕರ್ನಾಟಕ ಸರ್ಕಾರ

### ಬೆಳಗ್ಗೆ 11.30 ಘಂಟೆಗೆ ‘ಸಾಂಸ್ಕೃತಿಕ ಕಾರ್ಯಕ್ರಮ

ಜನಕಪುರಿ ಮಹಿಳಾ ಮಂಡಳಿಯಿಂದ ಹಾಗೂ ದೆಹಲಿ ಎನ್‌ಸಿಆರ್‌ನ ವಿವಿಧ ಸಂಘ ಸಂಸ್ಥೆಗಳ ಕಲಾವಿದರಿಂದ

### ನಾಟಕ: ಅಮ್ಮಾವ್ರ ಗಂಡ

ಚಲನಚಿತ್ರ ನಟ ಮೂಗ್ ಸುರೇಶ್ ತಂಡದವರಿಂದ

### ಸಂಜೆ 4.30 ಘಂಟೆಗೆ ಸನ್ಮಾನ ಕಾರ್ಯಕ್ರಮ

ದೆಹಲಿಯ ಸ್ಥಳೀಯ ಕನ್ನಡ ಸಂಘ–ಸಂಸ್ಥೆಗಳ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳಿಗೆ ಸನ್ಮಾನ ಮತ್ತು ಜನಕಪುರಿ ಕನ್ನಡ ಕೂಟದ ಮಾಜಿ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳಿಗೆ ಸನ್ಮಾನ

### ಜನಕಪುರಿ ಕನ್ನಡಕೂಟದ ಸುವರ್ಣ ಮಹೋತ್ಸವ ವರ್ಷದ ಕಾರ್ಯಕಾರಿ ಸಮಿತಿ


**ಡಾ.ಅಶೋಕ್ ಎಂ.ಈಟಿ**
ಅಧ್ಯಕ್ಷರು, ಜನಕಪುರಿ ಕನ್ನಡಕೂಟದ ಸುವರ್ಣ ಮಹೋತ್ಸವ ಕಾರ್ಯಕಾರಿ ಸಮಿತಿ


**ಡಾ.ಎಸ್.ಎಲ್.ಭಂಡಾರಕರ್**
‘ಉಪಾಧ್ಯಕ್ಷರು, ಜನಕಪುರಿ ಕನ್ನಡಕೂಟದ ಸುವರ್ಣ ಮಹೋತ್ಸವ ಕಾರ್ಯಕಾರಿ ಸಮಿತಿ


**ಡಾ.ಬಸವರಾಜ್**
ಕಾರ್ಯದರ್ಶಿಗಳು, ಜನಕಪುರಿ ಕನ್ನಡಕೂಟದ ಸುವರ್ಣ ಮಹೋತ್ಸವ ಕಾರ್ಯಕಾರಿ ಸಮಿತಿ


**ಎಂ.ವಿ.ವೆಂಕಟೇಶ್**
ಖಜಾಂಜಿಗಳು, ಜನಕಪುರಿ ಕನ್ನಡಕೂಟದ ಸುವರ್ಣ ಮಹೋತ್ಸವ ಕಾರ್ಯಕಾರಿ ಸಮಿತಿ


**ಕೃಷ್ಣರಾಜ್**
ಜಂಟಿ ಕಾರ್ಯದರ್ಶಿ, ಜನಕಪುರಿ ಕನ್ನಡಕೂಟದ ಸುವರ್ಣ ಮಹೋತ್ಸವ ಕಾರ್ಯಕಾರಿ ಸಮಿತಿ


**ಬಿ.ಕೆ.ಬಸವರಾಜ್**
ಸಂಚಾಲಕರು, ಜನಕಪುರಿ ಕನ್ನಡಕೂಟದ ಸುವರ್ಣ ಮಹೋತ್ಸವ ಕಾರ್ಯಕಾರಿ ಸಮಿತಿ


**ಡಾ.ರೂಪಾಶ್ರೀ ಈಟಿ**
ಅಧ್ಯಕ್ಷರು, ಜನಕಪುರಿ ಮಹಿಳಾ ಮಂಡಳಿ


**ಶ್ರೀಮತಿ ರೂಪಾ ತಮ್ಮಣ್ಣಕರ್**
ಕಾರ್ಯದರ್ಶಿಗಳು, ಜನಕಪುರಿ ಮಹಿಳಾ ಮಂಡಳಿ

**ಕಾರ್ಯಕ್ರಮಕ್ಕೆ ಶುಭಕೋರುವವರು:**
ಜನಕಪುರಿ ಕನ್ನಡ ಕೂಟದ ಕಾರ್ಯಕಾರಿ ಸಮಿತಿ, ಸುವರ್ಣ ಮಹೋತ್ಸವ ಸಮಿತಿ ಹಾಗೂ ಜನಕಪುರಿ ಮಹಿಳಾ ಮಂಡಳಿ ಹಾಗೂ ಕೂಟದ ಸರ್ವ ಸದಸ್ಯರು

## ನಿತ್ಯ ಪಂಚಾಂಗ 3.10.2026 ಶನಿವಾರ



ಶ್ರೀಶಕ 1949 ಶ್ರೀ ಪರಾಭವ ನಾಮ ಸಂವತ್ಸರ, ದಕ್ಷಿಣಾಯಣ ಶರದ್ ಋತು, ಚಾಂದ್ರಮಾನ ಶ್ರಾವಣ–ಆಶ್ವಯುಜ ಮಾಸ

ಭಾದ್ರಪದ ಬಹುಳ, ಸಪ್ತಮಿ, ಆರ್ದ್ರಾ ನಕ್ಷತ್ರ, ವಿಶ್ವ ಅವಾಸಸ್ಥಾನ ದಿನ, ತಲಕಾಡು ಭಾರತೀಸ್ವಾಮಿ ಆರಾಧನೆ, ಚಿಕ್ಕೋಡಿ ಡೋಣಿವಾಡಿ ಮಹಾರಾಜ ಪುಣ್ಯದಿನ

| ದಿನ | ರಾಹುಕಾಲ | ಯಮಗಂಡ | ಗುಳಿಕಕಾಲ |
|---|---|---|---|
| ಭಾನು | ಸ. 5.04– 6.33 | 12.00– 1.30 | 3.00– 4.00 |
| ಸೋಮ | ಬೆ. 7.20– 9.04 | 10.30–12.00 | 1.30– 3.00 |
| ಮಂಗಳ | ಮ. 3.25– 4.59 | 9.00–10.30 | 12.00– 1.30 |
| ಬುಧ | ಮ.12.16– 1.50 | 7.30– 9.00 | 10.30– 12.00 |
| ಗುರು | ಮ. 1.50– 3.29 | 6.00– 7.30 | 9.00– 10.30 |
| ಶುಕ್ರ | ಬೆ.10.42–12.16 | 3.00– 4.30 | 7.30– 9.00 |
| ಶನಿ | ಬೆ. 9.07–10.41 | 1.30– 3.00 | 6.00– 7.30 |



ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮಹಾತ್ಮಗಾಂಧೀಜಿ ಅವರ ಜನ್ಮದಿನದ ಅಂಗವಾಗಿ ಶುಕ್ರವಾರ ಅಂಬೇಡ್ಕರ್ ವೀದಿಯ ಕಲಾ ಕಾಲೇಜಿನಲ್ಲಿ ಮಹಾತ್ಮ ಗಾಂಧಿ ಸ್ಮಾರಕ ಸ್ತಂಭ ಅನಾವರಣಗೊಳಿಸಿದರು. ಈ ಸಂದರ್ಭದಲ್ಲಿ ಕಲಾವಿದರಾದ ಅರುಣ್ ಯೋಗಿರಾಜ್ ಅವರನ್ನು ಸನ್ಮಾನಿಸಲಾಯಿತು.

# ಸ್ವಾಮಿ ರಾಮಾನಂದ ತೀರ್ಥರ ಜನ್ಮಸ್ಮಾರಕ ಅಭಿವೃದ್ಧಿಗೆ ಶ್ರಮಿಸಿದ ಅಧಿಕಾರಿಗಳ ಕಾರ್ಯ ಶ್ಲಾಘನೀಯ

ಸಿಂದಗಿ, ಅ.2: ಹೈದ್ರಾಬಾದ್ ವಿಮೋಚನಾ ಚಳುವಳಿ ಪಿತಾಮಹ ಸ್ವಾಮಿ ರಾಮಾನಂದ ತೀರ್ಥರ ಜನ್ಮದಿನವಾದ ಅಕ್ಟೋಬರ್ 3 ರಂದು ಸರಕಾರಿ ಜಯಂತಿ ಆಚರಣೆ ಹಾಗೂ ಅವರ ಜನ್ಮ ಸ್ಮಾರಕ ವೀರಸೌಧ ಅಭಿವೃದ್ಧಿಪಡಿಸಲು ಆಗ್ರಹಿಸಿ ವಿಜಯಪುರ ಜಿಲ್ಲಾ 371 (ಜೆ) ಹೋರಾಟ ಸಮಿತಿ ಹಾಗೂ ಜಿಲ್ಲಾ ಸಂಘ ಸಂಸ್ಥೆಗಳ ಒಕ್ಕೂಟದಿಂದ ವಿಜಯಪುರ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಲಾಗಿತ್ತು



ನಮ್ಮ ಮನವಿಗೆ ಸ್ಪಂದಿಸಿ ಸ್ಮಾರಕ ಭವನ ಅಭಿವೃದ್ಧಿ ಪಡಿಸಿದ್ದಕ್ಕೆ ವಿಜಯಪುರ ಜಿಲ್ಲಾಧಿಕಾರಿ ಡಾ ಆನಂದ ಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಂತೋಷ ಭೋವಿ ಸಿಂದಗಿ ತಹಸೀಲ್ದಾರ ಕರೆಪ್ಪ ಬೆಳ್ಳಿ ನಗರಸಭೆ ಆಯುಕ್ತ ರವಿ ಶಿರಗುಪ್ಪಿ, ವಿಜಯಪುರ ಜಿಲ್ಲಾಡಳಿತ ಹಾಗೂ ತಾಲೂಕಾ ಆಡಳಿತದ ಎಲ್ಲ ಅಧಿಕಾರಿಗಳು ಹಾಗೂ ಸಿಬ್ಬಂಧಿಗಳ ಕಾರ್ಯ ಶ್ಲಾಘನೀಯ ಎಂದು ವಿಜಯಪುರ ಜಿಲ್ಲಾ ಸಂಘ ಸಂಸ್ಥೆಗಳ ಒಕ್ಕೂಟ ಹಾಗೂ ವಿಜಯಪುರ ಜಿಲ್ಲಾ 371(ಜೆ ) ಹೋರಾಟ ಸಮಿತಿಯ ವಿನೋದ ಖೇಡ, ಲಾಯಪ್ಪ ಇಂಗಳೆ, ಸಿದ್ದನಗೌಡ ಪಾಟೀಲ, ಅನಿಲ ಇಕ್ಕಡೆ, ಎನ್ ಸುರೇಶಕುಮಾರ, ಸ್ವಾಮಿ ರಾಮಾನಂದ ತೀರ್ಥರ ವಂಶಸ್ಥ ರಂಗರಾವ ಖೇಡಗಿಕರ ರಾಮಾನಂದ ತೀರ್ಥರ ಸೇವಾ ಸಮಿತಿಯ ಪ್ರದೀಪ ದೇಶಪಾಂಡೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಜ್ಯ ಚುನಾವಣಾಧಿಕಾರಿ ಕಚೇರಿ ಎದುರು ಪ್ರತಿಭಟನೆ: ಹೈಕೋರ್ಟ್ ಆದೇಶ ಉಲ್ಲಂಘನೆ

### ಸಿಎಂ, ಸಚಿವರು ಹಾಗೂ ಕೈನಾಯಕರ ವಿರುದ್ಧ ಪೊಲೀಸ್ ಆಯುಕ್ತರಿಗೆ ಬಿಜೆಪಿ ದೂರು

ಬೆಂಗಳೂರು, ಅ.2: ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿ ಆವರಣದಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರು ಹಾಗೂ ಕಾಂಗ್ರೆಸ್ ನಾಯಕರು ಪ್ರತಿಭಟನೆ ನಡೆಸಿದ್ದಕ್ಕೆ ಬಿಜೆಪಿ ಆಕ್ಷೇಪ ವ್ಯಕ್ತಪಡಿಸಿದೆ. ಈ ಸಂಬಂಧ ಬೆಂಗಳೂರು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಅವರಿಗೆ ಶುಕ್ರವಾರ ದೂರು ಸಲ್ಲಿಸಿದೆ.

ಹೈಕೋರ್ಟ್ ಆದೇಶ ಉಲ್ಲಂಘನೆ ಆರೋಪದಡಿ ಪ್ರಕರಣ ದಾಖಲಿಸಿ, ಸಿಎಂ ಹಾಗೂ ಸಚಿವರನ್ನು ಬಂಧಿಸಬೇಕು ಎಂದು ಒತ್ತಾಯಿಸಿದೆ.ಎಸ್‌ಐಆರ್ ಪ್ರಕ್ರಿಯೆ ವಿರೋಧಿಸಿ ಅ.1ರಂದು ಸಿಎಂ ಮತ್ತು ಅವರ ಸಂಪುಟದ ಸಹೋದ್ಯೋಗಿಗಳು ರಾಜ್ಯ ಮುಖ್ಯ ಚುನಾವಣಾಧಿಕಾರಿಗಳ ಕಚೇರಿ ಆವರಣದಲ್ಲಿ ಧರಣಿ ನಡೆಸಿರುವುದು ಅತ್ಯಂತ ಗಂಭೀರ ವಿಚಾರವಾಗಿದೆ. ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ವೇಳೆ, ಫ್ರೀಡಂ ಪಾರ್ಕ್ ಹೊರತಾಗಿ ನಗರದ ಇತರ ಭಾಗಗಳಲ್ಲಿ ಧರಣಿ ಅಥವಾ ಪ್ರತಿಭಟನೆ ನಡೆಸುವುದನ್ನು ನಿಷೇಧಿಸಿ ಹೈಕೋರ್ಟ್ ಆದೇಶಿಸಿದೆ. ಈ ಆದೇಶವನ್ನು ಮೀರಿ, ಯಾವುದೇ ಪೂರ್ವಾನುಮತಿಯಿಲ್ಲದೆ ಚುನಾವಣಾ ಕಚೇರಿಯಂತಹ ಸಂವಿಧಾನಾತ್ಮಕ ಸಂಸ್ಥೆಯ ಆವರಣದಲ್ಲಿ ಪ್ರತಿಭಟನೆ ನಡೆಸಿರುವುದು ನ್ಯಾಯಾಲಯದ ಆದೇಶದ ನೇರ ಉಲ್ಲಂಘನೆಯಾಗಿದೆ ಎಂದು ಬಿಜೆಪಿ ನಾಯಕರು ತಮ್ಮ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಚುನಾವಣಾ ಆಯೋಗ ಯಾವುದೇ ರಾಜಕೀಯ ಪಕ್ಷ ಅಥವಾ ಸರ್ಕಾರದ ಅಧೀನದಲ್ಲಿ ಕಾರ್ಯನಿರ್ವಹಿಸುವ ಸಂಸ್ಥೆಯಲ್ಲ, ಬದಲಿಗೆ ಸ್ವತಂತ್ರ ಹಾಗೂ ಸಂವಿಧಾನಾತ್ಮಕ ಸಂಸ್ಥೆಯಾಗಿದೆ. ಇಂತಹ ಪ್ರಮುಖ ಕಚೇರಿ ಆವರಣವನ್ನು ರಾಜಕೀಯ ಪ್ರತಿಭಟನೆಗೆ ಬಳಸಿಕೊಳ್ಳಲು ಅವಕಾಶ ಮಾಡಿಕೊಟ್ಟಿರುವುದು ಚುನಾವಣಾ ವ್ಯವಸ್ಥೆಯ ಸ್ವಾಯತ್ತತೆ ಹಾಗೂ ಸಾರ್ವಜನಿಕರ ವಿಶ್ವಾಸಾರ್ಹತೆಯ ಮೇಲೆಯೇ ಪ್ರಶ್ನೆ ಮೂಡಿಸುವಂತೆ ಮಾಡಿದೆ ಎಂದು ಪೊಲೀಸ್ ಆಯುಕ್ತರ ಮುಂದೆ ಹಲವು ಪ್ರಶ್ನೆಗಳನ್ನು ಇಟ್ಟ ಬಿಜೆಪಿ ನಾಯಕರು, ಸ್ಪಷ್ಟನೆ ನೀಡುವಂತೆ ಆಗ್ರಹಿಸಿದ್ದಾರೆ.

ಮುಖ್ಯಮಂತ್ರಿ ಹಾಗೂ ಸಚಿವರು ಪ್ರತಿಭಟನೆ ನಡೆಸಲು ಅನುಮತಿ ನೀಡಿದ್ದು ಯಾರು?, ಈ ಪ್ರತಿಭಟನೆಗೆ ಲಿಖಿತ ಅನುಮತಿ ಇತ್ತೇ? ಇದ್ದರೆ ಆ ಪ್ರತಿಯನ್ನು ಸಾರ್ವಜನಿಕಗೊಳಿಸಬೇಕು ಎಂದು ಆಗ್ರಹಿಸಲಾಗಿದೆ.

ಸಾಮಾನ್ಯ ನಾಗರಿಕರು ಅಥವಾ ಪ್ರತಿಪಕ್ಷಗಳು ಇದೇ ರೀತಿ ಚುನಾವಣಾ ಕಚೇರಿ ಆವರಣದಲ್ಲಿ ಧರಣಿ ನಡೆಸಲು ಬಂದರೆ ಅವರಿಗೂ ಪೊಲೀಸರು ಅವಕಾಶ ನೀಡುತ್ತಾರೆಯೇ ಎಂದು ಬಿಜೆಪಿ ಪ್ರಶ್ನಿಸಿದೆ.ಇದರೊಂದಿಗೆ, ಪ್ರತಿಭಟನೆ ವೇಳೆ ಪೊಲೀಸರು ಹಾಗೂ ಚುನಾವಣಾ ಅಧಿಕಾರಿಗಳು ಕೈಗೊಂಡ ಕ್ರಮಗಳ ಸಂಪೂರ್ಣ ವರದಿಯನ್ನು ಬಹಿರಂಗಪಡಿಸಬೇಕು ಹಾಗೂ ಘಟನೆಗೆ ಸಂಬಂಧಿಸಿದ ಸಿಸಿಟಿವಿ ದೃಶ್ಯಾವಳಿ, ಬಂದೋಬಸ್ತ್ ವಿವರಗಳು, ಅನುಮತಿ ಪತ್ರ ಸೇರಿದಂತೆ ಎಲ್ಲಾ ದಾಖಲೆಗಳನ್ನು ಕೂಡಲೇ ಬಿಡುಗಡೆಗೊಳಿಸಬೇಕು ಎಂದು ದೂರಿನಲ್ಲಿ ಬಿಜೆಪಿ ನಾಯಕರು ಆಗ್ರಹಿಸಿದ್ದಾರೆ.

# ಜಮೀನು ಖರೀದಿ ಸಾಬೀತು ಮಾಡಿದರೆ ಸಾರ್ವಜನಿಕವಾಗಿ ನೇಣು ಹಾಕಿಕೊಳ್ತೇನೆ

### ಡಿ.ಕೆ.ಶಿವಕುಮಾರ್‌ಗೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಸವಾಲು

### ಇನ್ನೂ 10 ಅವರೇ ಸಿಎಂ ಆದರೂ ಅಸೂಯೆಯಿಲ್ಲ



ಬೆಂಗಳೂರು, ಅ.2: ಜಮೀನು ಖರೀದಿ ಮಾಡಿರೋದನ್ನು ಸಾಬೀತು ಮಾಡಿದರೆ ಸಾರ್ವಜನಿಕವಾಗಿ ನೇಣು ಹಾಕಿಕೊಳ್ಳುವುದಾಗಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಸಿಎಂ ಡಿ.ಕೆ. ಶಿವಕುಮಾರ್‌ಗೆ ಸವಾಲು ಹಾಕಿದ್ದಾರೆ.

ನೈಸ್ ಯೋಜನೆಯಿಂದ ಭೂಮಿ ಕಳೆದುಕೊಂಡ ತೋಟದ ಗುಡ್ಡಹಳ್ಳಿ, ಅಂಚೆಪಾಳ್ಯ, ತಿರುಮಲಪುರ, ಕೆಜಿ ಶ್ರೀಕಂಠಪುರ, ಗಂಗನಹಳ್ಳಿ, ಕಾಚೋಹಳ್ಳಿ, ಹೊಸಹಳ್ಳಿ, ಗೊಲ್ಲರಹಟ್ಟಿ ಸಂತ್ರಸ್ತರಿಂದ ಶುಕ್ರವಾರ ಅಹವಾಲು ಸ್ವೀಕರಿಸಿ ಮಾತನಾಡಿ, ಸಿಎಂ ಡಿ.ಕೆ. ಶಿವಕುಮಾರ್ ಮೇಲೆ ಅಸೂಯೆ ಇಲ್ಲ. ಇನ್ನು 10 ವರ್ಷ ಅವರೇ ಸಿಎಂ ಆಗಿರಲಿ, ಬೇಡ ಅನ್ನಲ್ಲ. ಆದರೆ ರೈತರ ಜೊತೆ ಯಾಕೆ ಚೆಲ್ಲಾಟ ಆಡುವುದೇಕೆ ಎಂದು ಎಂದು ಪ್ರಶ್ನಿಸಿದರು. ಕುಮಾರಸ್ವಾಮಿ ಎಲ್ಲಿಂದ ಬಂದರು ಎಂದು ಕೇಳುತ್ತಾರೆ, ನಾವೇನು ಪಾಕಿಸ್ತಾನದಿಂದ ಬಂದಿದ್ದೀವಾ, ನಾವೂ ಕರ್ನಾಟಕದವರೇ ಎಂದು ಕಿಡಿಕಾರಿದರು.

ರಾಜಕೀಯಕ್ಕೆ ಬರುವ ಮುನ್ನವೇ ಬಿಡದಿಯಲ್ಲಿ 44 ಎಕರೆ ಜಮೀನು ಖರೀದಿ ಮಾಡಿದ್ದೇನೆ. ನಾನು ನನ್ನ ಸಹೋದರರು, ನನ್ನ ಕುಟುಂಬದವರು ಕಾನೂನುಬಾಹಿರವಾಗಿ ಒಂದು ಇಂಚು ಭೂಮಿ ಪಡೆದಿರುವುದನ್ನು ನೀವು ಪ್ರೂವ್ ಮಾಡಿದ್ರೆ ರಾಜಕೀಯ ನಿವೃತ್ತಿ ತಗೋತೀನಿ. ಇವರ ರೀತಿ ಬೆದರಿಸಿ, ಕಾನೂನುಬಾಹಿರವಾಗಿ ಜಮೀನು ಖರೀದಿ ಮಾಡಿರೊದು ಪ್ರೂವ್ ಮಾಡಿದ್ರೆ ಪಬ್ಲಿಕ್‌ನಲ್ಲಿ ನೇಣು ಹಾಕಿಕೊಳ್ತೀನಿ ಎಂದು ಸವಾಲು ಹಾಕಿದರು.

ನಾವು ಸ್ವಾಭಿಮಾನದಲ್ಲಿ ಬದುಕಿದ್ದೇವೆ. ಈ ಪ್ರಾಜೆಕ್ಟ್ ಹೆಸರಿನಲ್ಲಿ ಸಿಎಂ ಎಷ್ಟು ಎಕರೆ ಜಮೀನು ಲೂಟಿ ಮಾಡಿದ್ದಾರೆ ಗೊತ್ತಾ ಎಂದು ಗುಡುಗಿದರು. ಬ್ಲ್ಯಾಕ್‌ಮೇಲ್ ಮಾಡ್ತಿದ್ದೀನಿ ಅಂತ ಸಿಎಂ ಹೇಳ್ತಾರೆ. ನಾನು ಬ್ಲ್ಯಾಕ್‌ಮೇಲ್ ಮಾಡಿದ್ರೆ ಯಾಕೆ ನನ್ನ ಮೇಲೆ ಕೇಸ್ ಹಾಕಿಲ್ಲ. ಯಾರೋ ಒಬ್ಬ 3ಬಿ ಅಂತಾನೆ. ನೈಸ್‌ನಲ್ಲಿ ನೀವು ಏನೇನು ಮಾಡಿದ್ದೀರಾ ಅನ್ನೋ ದಾಖಲೆ ಇದೆ. ಪಶ್ಚಿಮ ಬಂಗಾಳ ರೀತಿ ನಿಮ್ಮ ಭೂಮಿ ವಾಪಸ್ ಬರಬೇಕು. ನಮ್ಮ ಮೇಲೆ ಯಾವ ತನಿಖೆ ಬೇಕಾದರೂ ಮಾಡಿ. ದೇವೇಗೌಡರು ಪ್ರಧಾನಿ ಆದಾಗಿಂದ ಇಲ್ಲಿವರೆಗೂ ನಮ್ಮ ಆಸ್ತಿ ಬಗ್ಗೆಯೂ ತನಿಖೆ ಮಾಡಿ. ನಮ್ಮ ಆಸ್ತಿ, ನಮ್ಮ ಕುಟುಂಬದ ಬಗ್ಗೆ ಯಾವುದೇ ತನಿಖೆ ಮಾಡಿ ಎಂದು ಸವಾಲು ಹಾಕಿದರು.

ಋಣಿ ಬಂಧನ ಆಗಬೇಕು. ಸಿದ್ದಗಂಗಾ ಮಠದ ಆಸ್ತಿ ಹೊಡೆದುಕೊಂಡು ಕೂತಿದ್ದಾರೆ. ಇಂತಹ ಸಿಎಂಗೆ ಸಹಕಾರ ಕೊಡ್ತೀರಾ ಎಂದು ಜನರನ್ನು ಕೇಳಿದ ಕುಮಾರಸ್ವಾಮಿ, ನನಗೆ ರಾಜಕೀಯ ಬೇಕಿಲ್ಲ. ರೈತರ ಭೂಮಿ ವಾಪಸ್ ಕೊಡಿಸೋದು ನನ್ನ ಹೋರಾಟ. ಜನರು ಧ್ವನಿ ಎತ್ತಬೇಕು. ನಾನು ಯಾರ ಜೊತೆ ಹೊಂದಾಣಿಕೆ ಮಾಡಿಕೊಂಡಿಲ್ಲ. ಆಂಧ್ರಪ್ರದೇಶದ ಮಹೇಶ್ ರೆಡ್ಡಿ ಜೊತೆ ಸಿಎಂ ಡಿ.ಕೆ. ಶಿವಕುಮಾರ್ ಒಟ್ಟಾಗಿ ಭೂಮಿ ಹೊಡೆಯೋಕೆ ನಿಂತಿದ್ದಾರೆ. ಜನರಿಗೆ ತಲೆ ಕೆಡಿಸುವ ಕೆಲಸ ಮಾಡ್ತಾ ಇದ್ದಾರೆ. ಯಾರನ್ನು ಬೇಕಾದರೂ ಕೊಂಡುಕೊಳ್ತೀವಿ ಅಂತಿದ್ದಾರೆ. ನಿಮ್ಮ ಪರ ನಾನು ಇರ್ತೀನಿ ಎಂದು ರೈತರಿಗೆ ಅಭಯ ನೀಡಿದರು.

### ಹೋರಾಟ ಕೈಬಿಡುವಂತೆ ಒತ್ತಡ

ಬಳಿಕ ನೈಸ್ ಟೋಲ್ ಪ್ಲಾಜಾ ಬಳಿ ದೊಡ್ಡತೊಗೂರು, ಚಿಕ್ಕತೊಗೂರು, ಎಲೆಕ್ಟ್ರಾನಿಕ್ ಸಿಟಿ, ಕೊನಪ್ಪನ ಅಗ್ರಹಾರ, ಬೇಗೂರು ರೈತರನ್ನು ಭೇಟಿಯಾಗಿ ಅಹವಾಲು ಸ್ವೀಕರಿಸಿದರು. ನಂತರ ಮಾತನಾಡಿದ ಎಚ್.ಡಿ. ಕುಮಾರಸ್ವಾಮಿ, ರೈತರ ಜಮೀನು ವಾಪಸ್ ಕೊಡಿಸೋದು ನನ್ನ ಜವಾಬ್ದಾರಿ. ನೀವು ಒಟ್ಟಾಗಿ ಇರಬೇಕು ಎಂದು ಕರೆ ನೀಡಿದರು. ಚುನಾವಣೆ ಖರ್ಚಿನಿಂದ ಹಿಡಿದು ಎಲ್ಲವನ್ನೂ ಕೊಡ್ತೀವಿ ಹೋರಾಟ ಕೈಬಿಡಿ ಎಂದು ನನ್ನ ಮೇಲೆ ಒತ್ತಡ ಬರುತ್ತಿದೆ. ನಾನು ಒಬ್ಬ ಸುಮ್ಮನೆ ಇದ್ದರೆ ಜಮೀನು ಲೂಟಿ ಹೊಡೆಯುತ್ತಾರೆ. ನಿಮ್ಮ ಊರಿನ ಜನರಿಗೂ ಇದರ ಬಗ್ಗೆ ಹೇಳಬೇಕು. ಇದರ ವಿರುದ್ಧ ಜನಾಂದೋಲನ ಆಗಬೇಕು. ಮೊದಲು ಶಾಂತಿಯುತವಾಗಿ ಹೋರಾಟ ಮಾಡೋಣ. ಮುಂದೆ ಮೀಟಿಂಗ್ ಕರೆಯುತ್ತೇನೆ. ಯಾವ ರೀತಿ ಮುಂದಿನ ಹೋರಾಟ ಅಂತ ಸಿದ್ಧ ಮಾಡ್ತೀನಿ ಎಂದರು.

# ತಂತ್ರ, ಕುತಂತ್ರ ಎಲ್ಲವನ್ನೂ ಬಿಚ್ಚಿಡುತ್ತೇನೆ ಬಿಜೆಪಿ ವಿರುದ್ಧ ಮುಖ್ಯಮಂತ್ರಿ ವಾಗ್ದಾಳಿ

### ನನ್ನ ವಿರುದ್ಧ ದೂರು ನೀಡುವುದಿದ್ದರೆ ನೀಡಲಿ ಸಂತೋಷ: ಬಿಜೆಪಿ ನಾಯಕರಿಗೆ ಡಿ.ಕೆ.ಶಿವಕುಮಾರ್ ತಿರುಗೇಟು





**ಬೆಂಗಳೂರು, ಅ.2:** ತಂತ್ರ, ಕುತಂತ್ರ ಎಲ್ಲ ಬಿಚ್ಚಿಡ್ತೀನಿ ಎಂದು ಎಸ್‌ಐಆರ್ ವಿಚಾರವಾಗಿ ಸಿಎಂ ಡಿ.ಕೆ.ಶಿವಕುಮಾರ್ ವಾಗ್ದಾಳಿ ನಡೆಸಿದರು. ಗಾಂಧಿ ಜಯಂತಿ ಹಿನ್ನೆಲೆ ವಿಧಾನಸೌಧದಲ್ಲಿ ಮಹಾತ್ಮ ಗಾಂಧಿ ಪ್ರತಿಮೆ ಹಾಗೂ ಮಾಜಿ ಪ್ರಧಾನಿ ಲಾಲ್‌ಬಹದ್ದೂರ್ ಶಾಸ್ತ್ರಿ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಮಾತನಾಡಿದರು.

54 ಲಕ್ಷ ಮತದಾರರ ಹೆಸರು ಅಳಿಸಿದ ಬಗ್ಗೆ ಹೇಳಿಕೆ ವಿಚಾರವಾಗಿ ಮಾತನಾಡಿದ ಸಿಎಂ, ಬಿಜೆಪಿಯವರ ತಂತ್ರ, ಕುತಂತ್ರ ಎಲ್ಲ ಬಿಚ್ಚಿಡ್ತೀನಿ. ಚುನಾವಣಾ ಅಯೋಗ ಏನು ದಡ್ಡರಲ್ಲ. ನನ್ನ ವಿರುದ್ಧ ದೂರು ಕೊಡೋದಿದ್ದರೆ ಕೊಡಲಿ, ಸಂತೋಷ. ನಾನು ಈ ಸಂದರ್ಭದಲ್ಲಿ ಮಾತನಾಡಲ್ಲ ಎಂದು ಬಿಜೆಪಿಗೆ ತಿರುಗೇಟು ಕೊಟ್ಟರು.

ಆರೋಪ ಸಾಬೀತು ಮಾಡುವಂತೆ ವಿಜಯೇಂದ್ರ ಸವಾಲು ಬಗ್ಗೆ ಮಾತನಾಡಿ, ಬಹಳ ಸಂತೋಷ. ಮಾತಾಡೋಣ, ಈ ಜಾಗದಲ್ಲಿ ಬೇಡ. ತಂತ್ರ ಮಂತ್ರ ಎಲ್ಲವನ್ನು ಬಿಚ್ಚಿಟ್ಟಿದ್ದೆ. ಚುನಾವಣಾ ಆಯೋಗ ದಡ್ಡರಲ್ಲ. ಅವರಿಗೆ ನಾನು ಏನು ಬೇಕೋ ಮನದಟ್ಟು ಮಾಡಿದ್ದೇನೆ. ಎಷ್ಟು ಮಾಡಿದರೂ ಒಂದು, ಹತ್ತೋ ಐವತ್ತು ಲಕ್ಷನೋ. ಎಲ್ಲವೂ ಬಿಚ್ಚಿ ಮುಂದಿನ ದಿನದಲ್ಲಿ ಹೊರಗೆ ಬರುತ್ತೆ ಎಂದು ತಿಳಿಸಿದರು. ಸಿಎಂ ವಿರುದ್ಧ ಪೊಲೀಸರಿಗೆ ಬಿಜೆಪಿ ದೂರು ವಿಚಾರವಾಗಿ ಪ್ರತಿಕ್ರಿಯಿಸಿ, ಬಹಳ ಸಂತೋಷ ಇನ್ನು ಮಾಡಬೇಕು. ಅವರೇನು ಮಾಡಿದ್ದಾರೆ ಗೊತ್ತಿಲ್ಲ. ವಿರೋಧ ಪಕ್ಷ ಕಣ್ಣಿಗೆ ಬಟ್ಟೆ ಕಟ್ಟಿ ಕೆಲಸ ಮಾಡ್ತಿದ್ದಾರೆ. ಇಲ್ಲಿ ಬೇಡ ಅದೆಲ್ಲ ಎಂದರು.

ಆಯೋಗದಲ್ಲಿ ಧರಣಿ ಮಾಡಿದ್ದನ್ನು ಸಮರ್ಥಿಸಿಕೊಂಡ ಸಿಎಂ ಡಿಕೆಶಿ, ನಾನು ಆಫೀಸ್‌ನಲ್ಲೇ ಇದ್ದೆ. ನಾನೇನು ರಸ್ತೆಯಲ್ಲಿ ಕುಳಿತಿಲ್ಲ. ನಾನು ಆಯೋಗದವರಿಗೆ ಮಾಹಿತಿ ಕೊಟ್ಟೆ. ಆಯೋಗದವರು ಹೇಳಿದ್ದನ್ನು ನಾನು ಕೇಳಿಲ್ಲ. ನಮ್ಮ ಹೋರಾಟದ ಕಾರಣಕ್ಕೆ ತನಿಖೆ ಮಾಡಲು ಮುಂದಾದರು. ನಾನು ಜೆಡಿಎಸ್ ಮತ್ತು ಬಿಜೆಪಿ ನಾಯಕರ ಮತ ಸಹ ಕಾಯಬೇಕು. ಕುಮಾರಸ್ವಾಮಿ ವೋಟ್ ಸಹ ಕಾಯಬೇಕಲ್ಲವೇ, ಅದಕ್ಕೆ ಹೋರಾಟ ಮಾಡಿದ್ದು ಎಂದರು.

ಬಿಜೆಪಿಯವರು ರಾಜಕಾರಣದಲ್ಲಿ ಇರೋದಕ್ಕೆ ನಾಲಾಯಕ್. ಪೊಲೀಸರು ಮೊದಲು ಇವರನ್ನು ಬಂಧಿಸಬೇಕು. ಬಿಜೆಪಿಯವರಿಗೆ ನಾಚಿಕೆ ಆಗಬೇಕೆಂದು ಸಿಎಂ ವಾಗ್ದಾಳಿ ನಡೆಸಿದರು. 24 ಸಾವಿರ ವೋಟ್ ಡಿಲೀಟ್‌ಗೆ ಮಾತ್ರ ಅರ್ಜಿ ಕೊಟ್ಟಿದ್ದೇವೆ ಅಂತ ಬಿಜೆಪಿ ನಾಯಕರು ಒಪ್ಪಿಕೊಂಡಿದ್ದಾರೆ. ಅವರನ್ನು ಬಂಧಿಸಬೇಕು. ಇವರೆಲ್ಲರೂ ರಾಜಕಾರಣದಲ್ಲಿ ಇರಲು ನಾಲಾಯಕ್ ಎಂದು ಬಿಜೆಪಿ, ಜೆಡಿಎಸ್ ವಿರುದ್ಧ ಆಕ್ರೋಶ ಹೊರಹಾಕಿದರು. ಕುಮಾರಸ್ವಾಮಿ ಕುಟುಂಬದ ವೋಟ್ ಕಾಯುವ ಕೆಲಸ ಮಾಡ್ತಿದ್ದೇನೆ. ಬಿಜೆಪಿ–ಜೆಡಿಎಸ್ ಎಲ್ಲರ ವೋಟ್ ಕಾಯುವ ಕೆಲಸ ಮಾಡುತ್ತಿದ್ದೇನೆ. ಚುನಾವಣಾ ಆಯೋಗಕ್ಕೆ ರಾಜ್ಯದ ಜನಪ್ರತಿನಿಧಿಯಾಗಿ ಹೋಗಿದ್ದೇನೆ. ನನ್ನ ವಿರುದ್ಧ ದೂರು ಕೊಡೋದಾದ್ರೆ ಕೊಡಲಿ ಎಂದು ಎಚ್ಚರಿಕೆ ಕೊಟ್ಟರು.

# ಚುನಾವಣಾ ಆಯೋಗದ ಮುಂದೆ ಸಿಎಂ ಧರಣಿ, ನಕಲಿ ಮತದಾರರ ರಕ್ಷಣೆಗೆ ಮಾಡಿದ ಕುತಂತ್ರ: ಬೊಮ್ಮಾಯಿ





ಬೆಂಗಳೂರು, ಅ.2: :ಚುನಾವಣೆ ಆಯೋಗದ ಕಚೇರಿ ಮುಂದೆ ಮುಖ್ಯಮಂತ್ರಿಗಳು ಮಾಡಿರುವ ಧರಣಿ, ಅವರ ಸಚಿವ ಸಂಪುಟದ ಎಲ್ಲಾ ಸದಸ್ಯರು ಭಾಗವಹಿಸಿರುವಂತದ್ದು ಅತ್ಯಂತ ನಾಟಕೀಯವಾಗಿದ್ದು ಮತ್ತು ಆ ಫೇಕ್ ಮತದಾರರ ರಕ್ಷಣೆ ಮಾಡುವಂತಹ ಕುತಂತ್ರದ ಒಂದು ಭಾಗವಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಆರೋಪಿಸಿದ್ದಾರೆ.

ಈ ಕುರಿತು ಹೇಳಿಕೆ ನೀಡಿರುವ ಅವರು, ಎಸ್ ಐ ಆರ್ ಬಗ್ಗೆ ಮುಖ್ಯಮಂತ್ರಿಗಳಿಗೆ ಆಕ್ಷೇಪಣೆ ಇದ್ದರೆ ಪ್ರತಿಯೊಂದು ಕ್ಷೇತ್ರಗಳಲ್ಲಿ ಇರುವಂತಹ ಅವರ ಬಿಎಲ್ ಟು ಮುಖಾಂತರ, ಬಿಎಲ್ ಒನ್ ಮುಖಾಂತರ ಆಕ್ಷೇಪಣೆ ಹಾಕಬಹುದು. ಎರಡನೆಯದಾಗಿ ಫಾರ್ಮ್ ನಂಬರ್ 7 ಕೊಟ್ಟಿರುವುದೇ ತಪ್ಪು ಮತದಾರರನ್ನ ಅಥವಾ ಕಳ್ಳ ಮತದಾರರನ್ನು ತೆಗಿಲಿಕ್ಕೆ ಮಾಡೋ ಸಲುವಾಗಿ ಒಬ್ಬರಿಗೆ 31 ಮತದಾರರ ಬಗ್ಗೆ ಆಕ್ಷೇಪಣೆ ಮಾಡುವುದಕ್ಕೆ ಚುನಾವಣೆ ಆಯೋಗ ಅಧಿಕಾರ ಕೊಟ್ಟಿದೆ.

ಈಗ ಕೊಟ್ಟಿರುವ ಅಧಿಕಾರ ಬಳಕೆ ಮಾಡುವುದೇ ತಪ್ಪು ಅನ್ನೋ ರೀತಿಯಲ್ಲಿ ಮುಖ್ಯಮಂತ್ರಿಗಳ ವಾದ ಸರಿಯಲ್ಲ ಎಂದು ಹೇಳಿದ್ದಾರೆ.

ಎರಡನೆಯದಾಗಿ ಗುಂಪಾಗಿ ಆಗಿ ಕೊಟ್ಟಿರುವ ಕೆಲವು ಪ್ರಕರಣಗಳಲ್ಲಿ ಅದನ್ನು ಯಾರು ಮಾಡಿದರು? ಯಾರು ಇಲ್ಲ, ತಾವೇ ಅದನ್ನು ಮಾಡಿಸಿ ಅದನ್ನು ಉಲ್ಲೇಖಿಸುವಂತಹ ಪ್ರಯತ್ನ ಮಾಡಿ. ಇಷ್ಟು ವರ್ಷ ಅವರು ಏನು ಆ ನಕಲಿ ಮತದಾರರು, ಸತ್ತವರ ಹೆಸರಲ್ಲಿ ಮತ ಹಾಕುವಂತಹ ಏನು ಪ್ರಯತ್ನ ಇದೆ, ಅದು ಎಸ್‌ಐಆರ್ ಇಂದ ನಿಂತು ಹೋಗುತ್ತದೆ ಅನ್ನುವಂತಹ ಭಯದಿಂದ ಗುರುವಾರ ಆ ನಾಟಕವನ್ನು ಮಾಡಿದ್ದಾರೆ ಎಂದು ಆರೋಪಿಸಿದ್ದಾರೆ.

ನಾನು ಚುನಾವಣೆ ಅಧಿಕಾರಿಗಳಿಗೆ ಹೇಳಲು ಇಷ್ಟ ಪಡ್ತೀನಿ, ಯಾವುದೇ ಒತ್ತಡಕ್ಕೆ ಮಣಿಯದೆ. ಚುನಾವಣೆಯ ಆಯೋಗ ಮತ್ತು ಇತರ ಕಾನೂನು ಅಡಿಯಲ್ಲಿ ತಾವು ನಿರ್ಭೀತಿಯಿಂದ, ನಿರ್ಭಯವಾಗಿ ಕೆಲಸವನ್ನ ಮಾಡಬೇಕು. ಯಾರು ತಪ್ಪು ಮಾಡುತ್ತಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ಯಾರು ಸರಿಯಾಗಿ ಚುನಾವಣೆ ಆಯೋಗದ ಕಾನೂನು ಅಡಿಯಲ್ಲಿ ಕೆಲಸವನ್ನು ಮಾಡ್ತಾ ಇದ್ದಾರೆ, ಅವರಿಗೆ ರಕ್ಷಣೆ ಕೊಡುವಂತದ್ದು ಕೂಡ ಅಷ್ಟೇ ಅವಶ್ಯಕತೆ ಇದೆ. ಇದನ್ನ ಚುನಾವಣೆ ಆಯೋಗ ನಡೆಸುತ್ತದೆ ಅನ್ನುವ ವಿಶ್ವಾಸ ನನಗಿದೆ ಎಂದು ಬೊಮ್ಮಾಯಿ ಹೇಳಿದ್ದಾರೆ.

# ದಸರಾ: ರಾಜವಂಶಸ್ಥೆ ಪ್ರಮೋದಾದೇವಿಗೆ ಅಧಿಕೃತ ಆಹ್ವಾನ ನೀಡಿದ ಸಚಿವ ಯತೀಂದ್ರ ಸಿದ್ದರಾಮಯ್ಯ



**ಮೈಸೂರು, ಅ.2:** ಉಸ್ತುವಾರಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ನೇತೃತ್ವದಲ್ಲಿ ಮೈಸೂರು ಜಿಲ್ಲಾಡಳಿತ ಅರಮನೆಗೆ ಭೇಟಿ ನೀಡಿ ಸಂಪ್ರದಾಯದಂತೆ ಮಹಾರಾಣಿ ಪ್ರಮೋದಾದೇವಿ ಒಡೆಯರ್ ಅವರಿಗೆ ದಸರಾ ಮಹೋತ್ಸವಕ್ಕೆ ಅಧಿಕೃತವಾಗಿ ಆಹ್ವಾನ ನೀಡಿದರು.

ಆಹ್ವಾನ ನೀಡಿದ ಬಳಿಕ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಯತೀಂದ್ರ ಸರ್ಕಾರದಿಂದ ಅಧಿಕೃತವಾಗಿ ಮೈಸೂರು ರಾಜಮನೆತನಕ್ಕೆ ದಸರಾ ಹಬ್ಬಕ್ಕೆ ಆಹ್ವಾನ ನೀಡುವುದು ಸಂಪ್ರದಾಯ. ಪ್ರತಿ ಬಾರಿಯೂ ಕೂಡ ಜಿಲ್ಲಾ ಉಸ್ತುವಾರಿ ಸಚಿವರು ಮಹಾರಾಣಿಯವರಿಗೆ ಆಹ್ವಾನ ನೀಡುತ್ತಾರೆ. ಈ ಬಾರಿ ನಾನು ಜಿಲ್ಲಾ ಉಸ್ತುವಾರಿ ಸಚಿವನಾಗಿರುವುದರಿಂದ ಮಹಾರಾಣಿ ಪ್ರಮೋದಾದೇವಿ ಒಡೆಯರ್ ಅವರನ್ನು ಭೇಟಿಯಾಗಿ ಆಹ್ವಾನ ಕೊಟ್ಟಿದ್ದೇನೆ. ಪ್ರಮೋದಾದೇವಿ ಒಡೆಯರ್ ಅವರು ದಸರಾ ಮಹೋತ್ಸವಕ್ಕೆ ಸಂಬಂಧಿಸಿದಂತೆ ಸರ್ಕಾರಕ್ಕೆ ಯಾವುದೇ ಸಲಹೆ ನೀಡಿಲ್ಲ, ಪ್ರತಿ ಬಾರಿಯಂತೆ ಈ ಬಾರಿಯೂ ಸಹ ದಸರಾ ಮಹೋತ್ಸವ ಸುಗಮವಾಗಿ ನಡೆಯಲು ಸರ್ಕಾರಕ್ಕೆ ಸಂಪೂರ್ಣ ಸಹಕಾರ ನೀಡುವುದಾಗಿ ತಿಳಿಸಿದ್ದಾರೆ ಎಂದು ಹೇಳಿದರು.

ಕಳೆದ ಬಾರಿ ಅಂಬಾರಿ ಕಟ್ಟುವ ವೇಳೆಯಲ್ಲಿ ಸ್ಥಳದಲ್ಲಿ ಹೆಚ್ಚಿನ ಜನಸಂದಣಿ ಇರುತ್ತಿದ್ದ ಕಾರಣ ಅಂಬಾರಿ ಕಟ್ಟಲು ಹೆಚ್ಚಿನ ಸಮಯ ಹಿಡಿಯುತ್ತಿತ್ತು. ಆದ್ದರಿಂದ ಈ ಬಾರಿ ಹೆಚ್ಚಿನ ಜನಸಂದಣಿ ಉಂಟಾಗದಂತೆ, ಅಂಬಾರಿ ಕಟ್ಟುವ ಸ್ಥಳದಲ್ಲಿ ಕಡಿಮೆ ಪಾಸ್‌ಗಳನ್ನು ನೀಡಿ ಜನದಟ್ಟಣೆ ಉಂಟಾಗದಂತೆ ನೋಡಿಕೊಳ್ಳಿ ಎಂದು ಮಹಾರಾಣಿಯವರು ಕೇಳಿದ್ದಾರೆ ಎಂದು ತಿಳಿಸಿದರು. ಕಂಬಳ ಪೂರ್ವಭಾವಿ ಹಿನ್ನೆಲೆಯಲ್ಲಿ ಅವರ ಸಂಪ್ರದಾಯದಂತೆ ಪೂಜೆ ಸಲ್ಲಿಸಲಾಗುವ ಕಾರಣ ಪುತ್ತೂರು ಶಾಸಕ ಹರೀಶ್ ರೈ ಕಂಬಳ ನಡೆಸಲಾಗುವ ಸ್ಥಳಕ್ಕೆ ಭೇಟಿ ನೀಡುತ್ತಿದ್ದಾರೆ ಎಂದು ತಿಳಿಸಿದರು.

ಎರಡು ದಿನಗಳ ಕಾಲ ಮಾನಸಗಂಗೋತ್ರಿಯ ಕ್ಲಾಕ್ ಟವರ್ ಮುಂಭಾಗ ನಡೆಯಲಿರುವ ಚಿತ್ರಸಂತೆಗೆ ನಗರಾಭಿವೃದ್ಧಿ ಹಾಗೂ ಮೈಸೂರು ಉಸ್ತುವಾರಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ಅವರು ಚಿತ್ರ ಬಿಡಿಸುವ ಮೂಲಕ ಚಿತ್ರಸಂತೆಗೆ ಚಾಲನೆ ನೀಡಿದರು.ವಿವಿಧ ಕಲಾವಿದರು ತಮ್ಮ ಕಲಾಕೃತಿಗಳನ್ನು ಅನಾವರಣಗೊಳಿಸಲು ತೆರೆಯಲಾಗಿದ್ದ 88 ಮಳಿಗೆಯಲ್ಲಿ ಕಲಾಕುಂಜಗಳನ್ನು ಸಚಿವರು ಶಾಸಕರು ಹಾಗೂ ಗಣ್ಯರು ವೀಕ್ಷಿಸಿ ಪ್ರಶಂಸೆ ವ್ಯಕ್ತ ಪಡಿಸಿದರು.

# ಕರ್ನಾಟಕದ ಡೀಪ್‌ಟೆಕ್ ವಲಯಕ್ಕೆ ಹೊಸವೇಗ

### ಏಳು ನವೋದ್ಯಮಗಳ ಮೊದಲ ತಂಡವನ್ನು ಗುರುತಿಸಿದ ಇನೋವರ್ಸ್

**ಬೆಂಗಳೂರು, ಅ.2:** ಕರ್ನಾಟಕವು ಡೀಪ್‌ಟೆಕ್ ಕ್ಷೇತ್ರದ ಮುಂದಿನ ಹಂತದ ಬೆಳವಣಿಗೆಗೆ ಹೆಚ್ಚಿನ ಒತ್ತು ನೀಡುತ್ತಿರುವ ಹಿನ್ನೆಲೆಯಲ್ಲಿ, ಕರ್ನಾಟಕ ಸರ್ಕಾರದ ಎಲೆಕ್ಟ್ರಾನಿಕ್ಸ್, ಐಟಿ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗಸಂಸ್ಥೆಯಾಗಿರುವ ಇನೋವರ್ಸ್, ತನ್ನ ಡೀಪ್‌ಟೆಕ್ ಎನೇಬ್ಲರ್ ಕಾರ್ಯಕ್ರಮದ ಮೊದಲ ತಂಡಕ್ಕೆ ಬೆಳವಣಿಗೆಯ ಹಂತದಲ್ಲಿರುವ ಏಳು ನವೋದ್ಯಮಗಳನ್ನು ಗುರುತಿಸಿದೆ.

ಈ ಉಪಕ್ರಮವು ಈಗಾಗಲೇ ತಮ್ಮ ತಂತ್ರಜ್ಞಾನ ಮತ್ತು ಮಾರುಕಟ್ಟೆ ಸಾಮರ್ಥ್ಯವನ್ನು ಸಾಬೀತುಪಡಿಸಿರುವ ಡೀಪ್‌ಟೆಕ್ ಕಂಪನಿಗಳು ವಾಣಿಜ್ಯ ಮಟ್ಟದಲ್ಲಿ ವಿಸ್ತರಣೆಯಾಗುವ ಸಂದರ್ಭದಲ್ಲಿ ಎದುರಿಸುವ ಸವಾಲುಗಳನ್ನು ನಿವಾರಿಸಲು ನೆರವಾಗಲಿದೆ. ಮಾರುಕಟ್ಟೆ ರೂಪಿಸುವಿಕೆ ಮತ್ತು ವಿಸ್ತರಣೆ, ಬಂಡವಾಳ ಸಂಗ್ರಹಣೆ, ನೀತಿ ಸ್ಯಾಂಡ್‌ಬಾಕ್ಸ್‌ಗಳು, ವಿವಿಧ ಕ್ಷೇತ್ರಗಳ ತಂತ್ರಜ್ಞಾನ ಮತ್ತು ಸ್ಕೇಲ್‌ಅಪ್ ಮೂಲಸೌಕರ್ಯಕ್ಕೆ ಪ್ರವೇಶ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಬೆಂಬಲ ಒದಗಿಸುವುದು ಕಾರ್ಯಕ್ರಮದ ಉದ್ದೇಶವಾಗಿದೆ.

ಮೊದಲ ತಂಡದಲ್ಲಿ ಐದು ಆದ್ಯತಾ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನವೋದ್ಯಮಗಳು ಸೇರ್ಪಡೆಯಾಗಿದ್ದು, ಸ್ವಾಯತ್ತ ವ್ಯವಸ್ಥೆಗಳು, ಸ್ವದೇಶಿ ನ್ಯಾವಿಗೇಷನ್, ಪುನರುತ್ಪಾದಕ ವೈದ್ಯಕೀಯ, ಕಕ್ಷೆಯಲ್ಲೇ ಕಂಪ್ಯೂಟಿಂಗ್, ಡ್ರೋನ್ ವಿರೋಧಿ ವ್ಯವಸ್ಥೆಗಳು ಮತ್ತು ಘನ ಪ್ರೊಪಲ್ಷನ್ ಸೇರಿದಂತೆ ಹಲವು ಅತ್ಯಾಧುನಿಕ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುತ್ತಿವೆ.

Chief reporter : SANDEEP RENU ✆ 99728 72151 | Executive Editor : SHARAT JYOTSNA B.R ✆ 9886766483 ✉ vaarthe@gmail.com

Published from: K10,‘A’/4, Khriki Extension, Malviya Nagar, New Delhi-110 017. Phone: 95-120-3917916-20

Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363

24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

ಅಕ್ಟೋಬರ್ 3 2026 ಶನಿವಾರ

## ಒಳಪುಟಗಳಲ್ಲಿ

ಭಾರತದಲ್ಲಿ ಧರ್ಮ, ರಾಷ್ಟ್ರವನ್ನು ಪ್ರತ್ಯೇಕವಾಗಿ ನೋಡಲು ಸಾಧ್ಯವಿಲ್ಲ: ಮೋಹನ್ ಭಾಗವತ್ - ಪು.4

6 ತಿಂಗಳಲ್ಲೇ ಮತ್ತೆ ಗುಂಡಿಬಿದ್ದ ಡಾಂಬರೀಕರಣವಾದ ರಸ್ತೆಗಳು - ಪು.5

ಮನೆ ಮುಂದೆ ಹಳ್ಳದ ರೀತಿಯಲ್ಲಿ ನಿಂತ ನೀರು- ನೀರು ಹೊರಹಾಕಲು ಹರಸಾಹಸ ಪಟ್ಟ ಜನರು - ಪು.6

# ಗಾಂಧೀಜಿಗೆ ಹೋಲಿಕೆಯಾಗಬಲ್ಲ ಮತ್ತೊಂದು ವ್ಯಕ್ತಿತ್ವವಿಲ್ಲ: ಡಿ.ಕೆ.ಶಿವಕುಮಾರ್

### ಮಹಾತ್ಮನ ವಿಚಾರಧಾರೆಗಳು ಭಾರತಕ್ಕೆ ಮಾತ್ರವಲ್ಲ ಇಡೀ ವಿಶ್ವಕ್ಕೆ ಪ್ರಸ್ತುತ

**ಬೆಂಗಳೂರು,ಅ.2:** ಮಹಾತ್ಮ ಗಾಂಧೀಜಿಯವರ ವಿಚಾರಗಳು ಭಾರತ ದೇಶಕ್ಕೆ ಮಾತ್ರವಲ್ಲ, ಪ್ರಪಂಚ ಹಾಗೂ ಸಮಸ್ತ ಮನುಕುಲಕ್ಕೆ ಇಂದಿಗೂ ಪ್ರಸ್ತುತವಾಗಿವೆ. ಗಾಂಧೀಜಿಯವರ ವ್ಯಕ್ತಿತ್ವ ಮತ್ತು ಘನತೆಗೆ ಹೋಲಿಕೆಯಾಗಬಲ್ಲ ಮತ್ತೊಂದು ವ್ಯಕ್ತಿತ್ವವಿಲ್ಲ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬಣ್ಣಿಸಿದ್ದಾರೆ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸಹಯೋಗದಲ್ಲಿ ಮಹಾತ್ಮ ಗಾಂಧೀಜಿಯವರ 157ನೇ ಜಯಂತಿ ಅಂಗವಾಗಿ ಗಾಂಧಿ ಭವನದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಗಾಂಧಿ ಸೇವಾ ಪ್ರಶಸ್ತಿ–2026 ಪ್ರದಾನ ಹಾಗೂ ಕೊಪ್ಪಳ ಜಿಲ್ಲೆಯ 11 ವ್ಯಸನಮುಕ್ತ ಗ್ರಾಮಗಳಿಗೆ ಗಾಂಧಿ ಪುರಸ್ಕಾರ ನೀಡಿ ಅವರು ಮಾತನಾಡಿದರು.

ಜಗತ್ತಿನ ವಿವಿಧ ರಾಷ್ಟ್ರಗಳಲ್ಲಿ ಗಾಂಧೀಜಿ ಪ್ರತಿಮೆ ಸ್ಥಾಪಿಸಲಾಗಿದೆ. ವಿಶ್ವವಿದ್ಯಾಲಯಗಳಲ್ಲಿ ಗಂಭೀರ ಚರ್ಚೆಗಳು ನಡೆದಿವೆ. ವಿಶ್ವದ ಎಲ್ಲ ನಾಯಕರು ಗಾಂಧೀಜಿಯನ್ನು ಮಾದರಿಯಾಗಿ ಸ್ವೀಕರಿಸಿದ್ದಾರೆ.

ನಾವು ಈ ದೇಶದಲ್ಲಿ ಹುಟ್ಟಿ ಬದುಕುತ್ತಿರುವುದೇ ನಮ್ಮೆಲ್ಲರ ಭಾಗ್ಯ ಎಂದರು. ಗಾಂಧೀಜಿ ಮೃತಪಟ್ಟಾಗ ವಿಶ್ವ ಸಂಸ್ಥೆಯ ಬಹುತೇಕ ಎಲ್ಲ ಸದಸ್ಯ ರಾಷ್ಟ್ರಗಳು ಧ್ವಜವನ್ನು ಅರ್ಧಕ್ಕೆ ಇಳಿಸಿ ಗೌರವ ನೀಡಿದ್ದವು. ಆದರೆ ಕೇಂದ್ರ ಸರ್ಕಾರವು ಉದ್ಯೋಗ ಖಾತ್ರಿ ಯೋಜನೆಯಿಂದ ಗಾಂಧೀಜಿಯ ಹೆಸರನ್ನು ಏಕೆ ತೆಗೆಯಿತು ಎಂದು ಇನ್ನೂ ಅರ್ಥವಾಗಿಲ್ಲ ಎಂದು ವಿಷಾದಿಸಿದರು. ಈ ಬಗ್ಗೆ ವಿಸ್ತೃತ ಚರ್ಚೆ ಆಗುವ ಅಗತ್ಯವಿದೆ ಎಂದರು.

ಗಾಂಧೀಜಿಯವರ ಅಹಿಂಸಾ ತತ್ವಕ್ಕೆ ಪರ್ಯಾಯವೇ ಇಲ್ಲ ಎಂದು ಪ್ರತಿಪಾದಿಸಿದ ಮುಖ್ಯಮಂತ್ರಿಗಳು ಮುಂಬರುವ ಒಂದು ವರ್ಷದೊಳಗೆ ರಾಜ್ಯದಲ್ಲಿ ಮಹಾತ್ಮ ಗಾಂಧೀಜಿಯವರು ಭೇಟಿ ನೀಡಿದ್ದ 87 ಸ್ಥಳಗಳಲ್ಲಿ ಗಾಂಧಿ ಸ್ಮಾರಕ ಸ್ತಂಭ ಸ್ಥಾಪಿಸಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು. ಅವರು ಇದೇ ಸಂದರ್ಭದಲ್ಲಿ ಮಹಾತ್ಮ ಗಾಂಧೀಜಿ ಡಿಜಿಟಲ್ ಮ್ಯೂಸಿಯಂ ಮತ್ತು ಗಾಂಧಿ ಪುಸ್ತಕಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಹಾತ್ಮ ಗಾಂಧೀಜಿ ಹಾಗೂ ಮಾಜಿ ಪ್ರಧಾನಿ ಲಾಲ್ ಹದ್ದೂರ್ ಶಾಸ್ತ್ರಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ಸಚಿವರಾದ ರಿಜ್ವಾನ್ ಅರ್ಷದ್, ಎಚ್.ಸಿ. ಬಾಲಕೃಷ್ಣ, ಗಾಂಧಿ ಭಾರತ ಶತಮಾನೋತ್ಸವ ಸಮಿತಿ ಅಧ್ಯಕ್ಷ ಎಚ್. ಕೆ. ಪಾಟೀಲ್, ನಿವೃತ್ತ ನ್ಯಾಯಮೂರ್ತಿ ಟಿ.ಜಿ .ಶಿವಶಂಕರಗೌಡ, ರಾಜ್ಯ ಮದ್ಯಪಾನ ಸಂಯಮ ಮಂಡಳಿಯ ಅಧ್ಯಕ್ಷ ಶರಣಪ್ಪ ಸಲಾದಪುರ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಾರ್ಯದರ್ಶಿ ಜೆ. ಮಂಜುನಾಥ್ , ಆಯುಕ್ತ ಎಂ.ಎನ್. ಅನುಚೇತ್ ಮತ್ತಿತರರು ಇದ್ದರು.



### ಗಾಂಧಿ ಸೇವಾ ಸೇರಿ ವಿವಿಧ ಪ್ರಶಸ್ತಿ, ಗೌರವ ಪ್ರದಾನ

ಸಮಾಜಸೇವಕ ಡಾ. ವೂಡೇ ಪಿ. ಕೃಷ್ಣ ಅವರಿಗೆ ಗಾಂಧಿ ಸೇವಾ ಪ್ರಶಸ್ತಿ ಪ್ರದಾನ ಮಾಡಲಾಯಿತು. ಸ್ವಯಂಪ್ರೇರಿತವಾಗಿ ತಮ್ಮ ಗ್ರಾಮಗಳನ್ನು ಮದ್ಯ ಮಾರಾಟಮುಕ್ತ ಮಾಡಿದ ಕೊಪ್ಪಳ ಜಿಲ್ಲೆಯ 11 ಗ್ರಾಮಗಳು ಹಾಗೂ ಗಾಂಧೀಜಿ ಅವರ ಚಿಂತನೆಗಳನ್ನು ಹಳ್ಳಿಗಳಲ್ಲಿ ಬಿತ್ತುತ್ತಿರುವ ಕೊಪ್ಪಳದ ಗಾಂಧಿ ಬಳಗಕ್ಕೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಶುಕ್ರವಾರ ಗಾಂಧಿ ಪುರಸ್ಕಾರ ಪ್ರದಾನ ಮಾಡಿದರು. ಮಂಜುನಾಥ್ ಚಾಂದ್ ಅವರ 'ಮಹಾತ್ಮನ ಮಗಳು' ಹಾಗೂ ರಮೇಶ್ ಬಿಳಿಕೆರೆ ಅವರ 'ಮರೆಯಲಾಗದ ಮಾಣಿಕ್ಯ ಟಿ.ಎಸ್.ಸುಬ್ಬಣ್ಣ' ಕೃತಿಗೆ ಶ್ರೀಮತಿ ಜಯಲಕ್ಷ್ಮಿ ಹೊ ಶ್ರೀನಿವಾಸಯ್ಯ ದತ್ತಿ ಪ್ರಶಸ್ತಿ ನೀಡಲಾಯಿತು. ಮೈಸೂರಿನ ಕಡಕೊಳದ ಶೇಷಾದ್ರಿಪುರಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಎನ್ ಎಸ್ ಎಸ್ ಅಧಿಕಾರಿ ಆರ್. ರಾಘವೇಂದ್ರ ಹಾಗೂ ಬೆಳಗಾವಿ ಜಿಲ್ಲೆ ಕುಡಚಿಯ ಬಿ.ಶಂಕರಾನಂದ ಕಾಲೇಜಿನ ಎನ್.ಎಸ್.ಎಸ್. ಅಧಿಕಾರಿ ಸುರೇಖಾ ಅಶೋಕ ಬೆಳಗಲಿ ಅವರಿಗೆ 'ಪ್ರೊ.ಜಿ.ಬಿ.ಶಿವರಾಜು ಅತ್ಯುತ್ತಮ ಎನ್ ಎಸ್ ಎಸ್ ಪ್ರಶಸ್ತಿ' ನೀಡಲಾಯಿತು.

ರಾಜ್ಯ ಮಟ್ಟದ ಉತ್ತಮ ಎನ್‌ಎಸ್‌ಎಸ್ ಸ್ವಯಂಸೇವಕ ಪುರಸ್ಕಾರವನ್ನು ತುಮಕೂರಿನ ಜಿ.ಎ.ಸಿದ್ದೇಶ್, ಮಸ್ಕಿಯ ಜೆ.ನಾಗರಾಜ, ಮಂಡ್ಯದ ಚೈತ್ರಾ ಸಿ, ಹಾಗೂ ರಾಯಚೂರಿನ ಜೆ.ಎಸ್.ಸುಷ್ಮಾ ಅವರಿಗೆ ನೀಡಲಾಯಿತು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಪ್ರಕಟಿಸಿದ ವಾರ್ತಾ ಜನಪದ ಹಾಗೂ ಮಾರ್ಚ್ ಆಫ್ ಕರ್ನಾಟಕ ಗಾಂಧಿ ದರ್ಶನ ವಿಶೇಷ ಸಂಚಿಕೆಗಳು, ಕೆ.ಎಸ್.ನರಸಿಂಹಸ್ವಾಮಿಯವರ ಅನುವಾದಿತ ಕೃತಿ 'ನನ್ನ ಕನಸಿನ ಭಾರತ ಮತ್ತು ಮೋಹನ ಮಾಲೆ', ಬಿಬಿಸಿ ಬಾನುಲಿ ಪ್ರಸಾರದ ನಾಲ್ಕು ಕಾರ್ಯಕ್ರಮಗಳ ಕುರಿತು ಫ್ರಾನ್ಸಿಸ್ ವ್ಯಾಟ್ಸನ್ ಮತ್ತು ಮೌರಿಸ್ ಬ್ರೌನ್ ಅವರ ಕೃತಿ 'ಗಾಂಧಿ ಸಂಕಥನ: ಬಹುಮುಖ ನೋಟ' (ಅನುವಾದ ಮಹಾಬಲೇಶ್ವರ ರಾವ್) ಹಾಗೂ ಅರವಿಂದ ಚೊಕ್ಕಾಡಿಯವರ 'ಆಸುಪಾಸಿನಲ್ಲಿ ಗಾಂಧಿ' ಕೃತಿಗಳನ್ನು ಲೋಕಾರ್ಪಣೆಗೊಳಿಸಲಾಯಿತು. ರಾಜ್ಯ ಮದ್ಯಪಾನ ಸಂಯಮ ಮಂಡಳಿಯಿಂದ ಮದ್ಯ ಮಾರಾಟ ಮುಕ್ತ ಗ್ರಾಮ ಗೌರವ ಪಡೆದ ಕೊಪ್ಪಳ ತಾಲ್ಲೂಕಿನ ಹಟ್ಟಿ, ತಮ್ಮ ಗ್ರಾಮಗಳನ್ನು ಮದ್ಯಮಾರಾಟ ಮುಕ್ತ ಮಾಡಿದ ಇದೇ ತಾಲ್ಲೂಕಿನ ಲೇಬಗೇರಿ, ತಾಳಕನಕಾಪುರ, ಹನುಮನಹಳ್ಳಿ, ಕಾಮನೂರು, ಕುಕನೂರು ತಾಲ್ಲೂಕಿನ ಬಿನ್ನಾಳ, ಚಿಕ್ಕೇನಕೊಪ್ಪ, ಕುಷ್ಟಗಿ ತಾಲ್ಲೂಕಿನ ಮದ್ನಾಳ, ನಾಗರಾಳ, ಬೋದೂರು ತಾಂಡಾ ಹಾಗೂ ಹಿರೇಬನ್ನಿಗೋಳ ಗ್ರಾಮಗಳಿಗೆ ಪುರಸ್ಕಾರ ಪ್ರದಾನ ಮಾಡಲಾಯಿತು. ಪುರಸ್ಕಾರವು ಚರಕ, ಪುಸ್ತಕ ಒಳಗೊಂಡಿದೆ.

## ನುಸುಳುಕೋರರನ್ನು ಹೊಡೆದುರುಳಿಸಿದ ಬಿಎಸ್‌ಎಫ್

ತರನ್ತಾರನ್, ಅ.2: ಪಂಜಾಬ್‌ನ ತರನ್ತಾರನ್ ಜಿಲ್ಲೆಯಲ್ಲಿ ಭಾರತ–ಪಾಕಿಸ್ತಾನ ಅಂತಾರಾಷ್ಟ್ರೀಯ ಗಡಿಯಲ್ಲಿ ಒಳನುಸುಳುವಿಕೆ ಯತ್ನವನ್ನು ಗಡಿ ಭದ್ರತಾ ಪಡೆ ವಿಫಲಗೊಳಿಸಿದೆ. ಗಡಿ ಸಮೀಪದ ರಾಜೋಕೆ ಗ್ರಾಮದ ಬಳಿ ಭಾರತಕ್ಕೆ ಅಕ್ರಮವಾಗಿ ಪ್ರವೇಶಿಸಲು ಯತ್ನಿಸಿದ ಇಬ್ಬರು ಒಳನುಸುಳುಕೋರರನ್ನು ಬಿಎಸ್‌ಎಫ್ ಗುಂಡಿಕ್ಕಿ ಹತ್ಯೆ ಮಾಡಿದೆ. ಶುಕ್ರವಾರ ಮುಂಜಾನೆ ರಾಜೋಕೆ ಪ್ರದೇಶದ ಗಡಿಭಾಗದಲ್ಲಿ ಅನುಮಾನಾಸ್ಪದ ಚಲನವಲನವನ್ನು ಃಖಈ ಸಿಬ್ಬಂದಿ ಗಮನಿಸಿದ್ದಾರೆ. ಸುಮಾರು ಮೂವರು ವ್ಯಕ್ತಿಗಳು ಪಾಕಿಸ್ತಾನ ಭಾಗದಿಂದ ಭಾರತೀಯ ಗಡಿಯತ್ತ ಸಾಗುತ್ತಿರುವುದು ಪತ್ತೆಯಾಗಿತ್ತು. ಭದ್ರತಾ ಸಿಬ್ಬಂದಿ ಎಚ್ಚರಿಕೆ ನೀಡಿದರೂ ಅವರು ಹಿಂದಕ್ಕೆ ತೆರಳದೆ ಭಾರತೀಯ ಪ್ರದೇಶದತ್ತ ಮುಂದುವರಿದಿದ್ದಾರೆ.ಎಚ್ಚರಿಕೆಯ ಹೊರತಾಗಿಯೂ ಒಳನುಸುಳುವಿಕೆ ಮುಂದುವರಿದ ಹಿನ್ನೆಲೆಯಲ್ಲಿ BSF ಸಿಬ್ಬಂದಿ ಗುಂಡಿನ ದಾಳಿ ನಡೆಸಿದ್ದು, ಇಬ್ಬರು ಮೃತಪಟ್ಟಿದ್ದಾರೆ. ಮತ್ತೊಬ್ಬ ಒಳನುಸುಳುಕೋರ ಪಾಕಿಸ್ತಾನ ಭಾಗಕ್ಕೆ ಹಿಂದಿರುಗಿರುವ ಸಾಧ್ಯತೆ ಇದೆ. ಘಟನೆಯ ಬಳಿಕ ಭಾರತ–ಪಾಕಿಸ್ತಾನ ಗಡಿ ಪ್ರದೇಶದಲ್ಲಿ ಭದ್ರತೆಯನ್ನು ಮತ್ತಷ್ಟು ಬಿಗಿಗೊಳಿಸಲಾಗಿದೆ. ಮೃತರ ಗುರುತು ಹಾಗೂ ಅವರಿಂದ ಯಾವುದೇ ವಸ್ತುಗಳು ವಶಪಡಿಸಿಕೊಳ್ಳಲಾಗಿದೆಯೇ ಎಂಬ ಕುರಿತು ಹೆಚ್ಚಿನ ಮಾಹಿತಿ ಇನ್ನಷ್ಟೇ ಹೊರಬರಬೇಕಿದೆ.



ದಿವಂಗತ ಪ್ರಧಾನಿ ಲಾಲ್‌ಬಹದ್ದೂರ್ ಶಾಸ್ತಿರ ಅವರ ಜನ್ಮದಿನದ ಅಂಗವಾಗಿ ನವದೆಹಲಿಯ ವಿಜಯ್‌ಘಾಟ್‌ನಲ್ಲಿ ಶಾಸ್ತ್ರಿ ಸಮಾಧಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಗೌರವ ಸಲ್ಲಿಸಿದರು.

## ಸಾಹಸಿ ಪೈಲಟ್ ಜತೆ ಪ್ರಧಾನಿ ಮಾತುಕತೆ: ಧೈರ್ಯಕ್ಕೆ ಶ್ಲಾಘನೆ

**ನವದೆಹಲಿ, ಅ.2:** ದುಬೈನಿಂದ ಟೆಲ್ ಅವೀವ್ಗೆ ತೆರಳುತ್ತಿದ್ದ ಫ್ಲೈದುಬೈ ವಿಮಾನದಲ್ಲಿ ಸಹ–ಪೈಲಟ್ ನಡೆಸಿದ ದಾಳಿ ಪ್ರಯತ್ನವನ್ನು ವಿಫಲಗೊಳಿಸಿದ ಕ್ಯಾಪ್ಟನ್ ಸ್ಮಿತ್ ಮಚ್ಚಾರ್ ಅವರೊಂದಿಗೆ ಪ್ರಧಾನಿ ನರೇಂದ್ರ ಮೋದಿ ವಿಡಿಯೋ ಕಾಲ್ ಮೂಲಕ ಮಾತನಾಡಿದರು. ಘಟನೆಯ ವೇಳೆ ತಮಗಾದ ಅನುಭವ ಹಾಗೂ ಸಂಕಷ್ಟದ ಸಂದರ್ಭದಲ್ಲಿ ಧೈರ್ಯ ನೀಡಿದ ಅಂಶಗಳನ್ನು ಮಚ್ಚಾರ್ ಪ್ರಧಾನಿಯವರೊಂದಿಗೆ ಹಂಚಿಕೊಂಡರು. ತೀವ್ರವಾಗಿ ಗಾಯಗೊಂಡಿದ್ದರೂ ಪ್ರಯಾಣಿಕರ ಜೀವಕ್ಕೆ ಅಪಾಯವಾಗಬಾರದು ಎಂಬ ಕಾರಣಕ್ಕೆ ತಾವು ಧೈರ್ಯದಿಂದ ಹೋರಾಡಿದ್ದಾಗಿ ಮಚ್ಚಾರ್ ಹೇಳಿದರು.

ಗಾಯಗಳ ನಡುವೆಯೂ ಎದ್ದು ಕಾರ್ಯಪ್ರವೃತ್ತರಾಗಬೇಕು ಎಂದು ತಮ್ಮನ್ನು ತಾವು ಪ್ರೇರೇಪಿಸಿಕೊಂಡು ಕಾಕ್‌ಪಿಟ್ ಬಾಗಿಲು ತೆರೆಯಲು ಮುಂದಾದೆ ಎಂದು ಅವರು ವಿವರಿಸಿದರು. ಸಂಕಷ್ಟದ ಸಂದರ್ಭದಲ್ಲಿ ತಾವು ಹನುಮಾನ್ ಚಾಲೀಸಾ ಪಠಿಸಿದ್ದಾಗಿ ಹಾಗೂ ಭಗವಾನ್ ಹನುಮಂತ ಧೈರ್ಯ ನೀಡಿದ ಎಂದು ಮಚ್ಚಾರ್ ಹೇಳಿದ್ದಾರೆ. ಧೈರ್ಯ ಪ್ರದರ್ಶಿಸದಿದ್ದರೆ 180 ಪ್ರಯಾಣಿಕರ ಪ್ರಾಣಕ್ಕೆ ಅಪಾಯ ಎದುರಾಗುತ್ತಿತ್ತು ಎಂದು ಅವರು ತಿಳಿಸಿದ್ದಾರೆ. ಮಚ್ಚಾರ್ ಅವರ ಧೈರ್ಯವನ್ನು ಪ್ರಧಾನಿ ಮೋದಿ ಶ್ಲಾಘಿಸಿದರು. ತಮ್ಮ ಪ್ರಾಣದ ಬಗ್ಗೆ ಚಿಂತಿಸದೆ ಪ್ರಯಾಣಿಕರ ಜೀವ ರಕ್ಷಿಸಲು ಅವರು ತೋರಿದ ಧೈರ್ಯ ಮತ್ತು ದೃಢ ಸಂಕಲ್ಪವನ್ನು ಮೋದಿ ಕೊಂಡಾಡಿದರು. ಮಚ್ಚಾರ್ ಶೀಘ್ರವಾಗಿ ಚೇತರಿಸಿಕೊಳ್ಳಲಿ ಎಂದು ಪ್ರಧಾನಿ ಹಾರೈಸಿದರು.



ಮೋದಿ ಅವರೊಂದಿಗೆ ಮಾತನಾಡುವ ವೇಳೆ ಮಚ್ಚಾರ್ ಭಾವುಕರಾದರು. 'ನೀವೇ ನನ್ನ ಅತಿದೊಡ್ಡ ಆದರ್ಶ' ಎಂದು ಅವರು ಪ್ರಧಾನಿಯವರಿಗೆ ಹೇಳಿದರು. ಪ್ರಸ್ತುತ ಸ್ಮಿತ್ ಮಚ್ಚಾರ್ ಅವರ ಆರೋಗ್ಯ ಸ್ಥಿರವಾಗಿದ್ದು, ಯುಎಇಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಯುಎಇಯಲ್ಲಿರುವ ಭಾರತದ ರಾಯಭಾರಿ ದೀಪಕ್ ಮಿತ್ತಲ್ ತಿಳಿಸಿದ್ದಾರೆ.

## ರಾಮಮಂದಿರ ಸಿಬ್ಬಂದಿಗೆ ಶೇ.100 ಪೊಲೀಸ್ ತಪಾಸಣೆ

**ಅಯೋಧ್ಯೆ, ಅ.2:** ಉತ್ತರ ಪ್ರದೇಶದ ಅಯೋಧ್ಯೆಯ ರಾಮಮಂದಿರ ಆಡಳಿತ ಮತ್ತು ಭದ್ರತಾ ವ್ಯವಸ್ಥೆಯನ್ನು ಮತ್ತಷ್ಟು ಬಿಗಿಗೊಳಿಸುವ ನಿಟ್ಟಿನಲ್ಲಿ, ಮಂದಿರದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗೆ ಪೊಲೀಸ್ ಪರಿಶೀಲನೆ ಹಾಗೂ ಚಾರಿತ್ರ್ಯ ಪ್ರಮಾಣ ಪತ್ರವನ್ನು ಕಡ್ಡಾಯಗೊಳಿಸಲಾಗಿದೆ. ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಈ ನಿರ್ಧಾರವನ್ನು ತೆಗೆದುಕೊಂಡಿದ್ದು, ಮಂದಿರದ ಪ್ರತಿಯೊಬ್ಬ ಉದ್ಯೋಗಿಯ ಹಿನ್ನೆಲೆ ಪರಿಶೀಲನೆಯನ್ನು ಕಟ್ಟುನಿಟ್ಟಾಗಿ ನಡೆಸಲು ಮುಂದಾಗಿದೆ. ಮಂದಿರದ ನೌಕರರು ಪೊಲೀಸ್ ಇಲಾಖೆಯಿಂದ ಪಡೆದ ಚಾರಿತ್ರ್ಯ ಪ್ರಮಾಣಪತ್ರವನ್ನು ಸಲ್ಲಿಸುವುದು ಕಡ್ಡಾಯವಾಗಿದೆ. ಇದರೊಂದಿಗೆ ನೌಕರರ ವೈಯಕ್ತಿಕ ವಿವರ, ಕುಟುಂಬದ ಹಿನ್ನೆಲೆ ಹಾಗೂ ಬಂಧು– ಬಳಗದ ಸಂಪೂರ್ಣ ಮಾಹಿತಿಯನ್ನು ಟ್ರಸ್ಟ್ ಸಂಗ್ರಹಿಸುತ್ತಿದೆ.

ಈ ವರ್ಷದ ಜೂನ್ ತಿಂಗಳಿನಲ್ಲಿ ರಾಮಮಂದಿರದ ದೇಣಿಗೆ ಎಣಿಕೆ ವೇಳೆ ಹಣ ದುರುಪಯೋಗ ಮತ್ತು ಕಳವು ಪ್ರಕರಣ ಹೊರಬಿದ್ದಿದೆ. ಇದರ ತನಿಖೆ ನಂತರ ಟ್ರಸ್ಟ್ ಭದ್ರತೆಯನ್ನು ತೀವ್ರಗೊಳಿಸಿದೆ. ನೂತನವಾಗಿ ನೇಮಕಗೊಂಡಿರುವ ಸಿಇಒ ಜಿತೇಂದ್ರ ಮಿಶ್ರಾ ನೇತೃತ್ವದಲ್ಲಿ ಮಂದಿರದ ನಿರ್ವಹಣಾ ವ್ಯವಸ್ಥೆಯನ್ನು ಬದಲಾಯಿಸಲಾಗುತ್ತಿದೆ. ಕಾಣಿಕೆ ಎಣಿಕೆ ಕಾರ್ಯಕ್ಕೆ ಪ್ರತ್ಯೇಕ ಮತ್ತು ವಿಶೇಷ ತಂಡವನ್ನು ನಿಯೋಜಿಸಲಾಗಿದ್ದು, ಅವರಿಗೆ ಜೇಬುಗಳಿಲ್ಲದ ಸಮವಸ್ತ್ರ ಸೇರಿ ಹಲವು ಶಿಸ್ತುಕ್ರಮಗಳನ್ನು ಜಾರಿಗೆ ತರಲಾಗಿದೆ. ಈ ನಡುವೆ ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಸಿಬ್ಬಂದಿಗೂ ಈ ಪೊಲೀಸ್ ದೃಢೀಕರಣ ಪ್ರಮಾಣಪತ್ರ ಪಡೆಯುವ ನಿಯಮ ಅನ್ವಯವಾಗುತ್ತದೆಯೇ ಎಂಬುದು ಸ್ಪಷ್ಟವಾಗಿಲ್ಲ.

## ಉಕ್ರೇನ್ ಸಂಘರ್ಷ ಅಂತ್ಯಕ್ಕೆ ಮೋದಿ ಬಳಿ ಉತ್ತಮ ಉಪಾಯ ಇದೆ

**ಮಾಸ್ಕೋ, ಅ.2:** ಉಕ್ರೇನ್ ಸಂಘರ್ಷವನ್ನು ಅಂತ್ಯಗೊಳಿಸಲು ಪ್ರಧಾನಿ ನರೇಂದ್ರ ಮೋದಿ ನಡೆಸುತ್ತಿರುವ ಪ್ರಯತ್ನಗಳನ್ನು ಶ್ಲಾಘಿಸಿರುವ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುತಿನ್, ಶಾಂತಿಯುತ ಪರಿಹಾರ ಕಂಡುಕೊಳ್ಳಲು ಅವರ ಬಳಿ ಉತ್ತಮ ಆಲೋಚನೆಗಳಿವೆ ಎಂದಿದ್ದಾರೆ.



ಉಕ್ರೇನ್‌ನಲ್ಲಿನ ಸಂಘರ್ಷವನ್ನು ಅಂತ್ಯಗೊಳಿಸುವ ಪ್ರಶ್ನೆಯನ್ನು ನಿರಂತರವಾಗಿ ಪ್ರಸ್ತಾಪಿಸುವ ವಿಶ್ವ ನಾಯಕರಲ್ಲಿ ಮೋದಿ ಒಬ್ಬರಾಗಿದ್ದಾರೆ. ಪರಸ್ಪರ ಒಪ್ಪಿಕೊಳ್ಳಬಹುದಾದ ಪರಿಹಾರಗಳನ್ನು ಕಂಡುಕೊಳ್ಳುವ ಬಗ್ಗೆ ಅವರಿಗೆ ಹೆಚ್ಚಿನ ಆಸಕ್ತಿ ಇದೆ ಮತ್ತು ಉತ್ತಮ ಆಲೋಚನೆಗಳಿವೆ. ಆ ದೃಷ್ಟಿಯಿಂದ ಪ್ರಧಾನಿ ಸಹಜವಾಗಿಯೇ ತಟಸ್ಥ ನಿಲುವನ್ನು ಹೊಂದಿದ್ದಾರೆ. ಆದರೆ ಸಂಘರ್ಷ ಅಂತ್ಯಗೊಳ್ಳಬೇಕೆಂಬ ಆಸಕ್ತಿಯೂ ಅವರಲ್ಲಿದೆ. ಇದನ್ನು ನೇರವಾಗಿ ಹೇಳುವುದು ನನ್ನ ಕರ್ತವ್ಯ ಎಂದು ಭಾವಿಸುತ್ತೇನೆ. ಮಾತುಕತೆಯ ಮೂಲಕ ಸಂಘರ್ಷ ಕೊನೆಗೊಳಿಸುವ ಅವರ ಪ್ರಯತ್ನ ಮತ್ತು ಬೆಂಬಲಕ್ಕಾಗಿ ಕೃತಜ್ಞತೆ ಸಲ್ಲಿಸಿದ್ದಾರೆ.

ಪ್ರಧಾನಿ ಮೋದಿ ಅವರು ಶಾಂತಿಗೆ ಹಲವು ಬಾರಿ ಕರೆ ನೀಡಿದ್ದು, ರಷ್ಯಾ–ಉಕ್ರೇನ್ ಸಂಘರ್ಷದ ವಿಚಾರದಲ್ಲಿ ಭಾರತ ತತ್ವಬದ್ಧ ಹಾಗೂ ಮಾನವೀಯ ನಿಲುವನ್ನು ಕಾಯ್ದುಕೊಂಡಿದೆ ಎಂದು ಹೇಳಿದ್ದಾರೆ.

## ಇಡೀ ದೇಶದ ಮತದಾರರ ಹಕ್ಕಿಗೆ ಸಂದ ಜಯ: ಡಿ.ಕೆ. ಶಿವಕುಮಾರ್

### ಮತದಾರ ಪಟ್ಟಿ ಮರುಪರಿಶೀಲನೆಗೆ ಆದೇಶಿಸಿದ ಕೇಂದ್ರ ಚುನಾವಣಾ ಆಯೋಗದ ನಿರ್ಧಾರಕ್ಕೆ ಸ್ವಾಗತ

**ಬೆಂಗಳೂರು, ಅ.2:** ವಿಶೇಷ ಅಭಿಯಾನದ ಮೂಲಕ ಎಸ್‌ಐಆರ್ ನಂತರದ ಗೈರು, ಸ್ಥಳಾಂತರ, ಮೃತ ಹಾಗೂ ನಕಲಿಮತ್ತಿತರ ಮತದಾರರ ಪಟ್ಟಿ ಮರುಪರಿಶೀಲನೆ ಹಾಗೂ ಮತದಾರರ ಪಟ್ಟಿ ಮರುಪರಿಶೀಲಿಸಿ, ಹೆಸರು ಬಿಟ್ಟು ಹೋದ ಅರ್ಹ ಮತದಾರರ ಹೆಸರನ್ನು ಮತ್ತೆ ಸೇರಿಸಲು ಕ್ರಮ ಕೈಗೊಳ್ಳಬೇಕು ಎಂದು ಕೇಂದ್ರ ಚುನಾವಣಾ ಆಯೋಗ ಎಲ್ಲ ರಾಜ್ಯಗಳ ಚುನಾವಣೆ ಅಧಿಕಾರಿಗಳಿಗೆ ಆದೇಶ ನೀಡಿರುವುದು ಇಡೀ ದೇಶದ ಮತದಾರರ ಹಕ್ಕಿಗೆ ಸಂದ ಜಯ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾವು ಚುನಾವಣಾ ಆಯೋಗದ ಬಳಿ ಗುರುವಾರ ನಡೆಸಿದ ಪ್ರತಿಭಟನೆ ಫಲವಾಗಿ ಕೇಂದ್ರ ಚುನಾವಣೆ ಆಯೋಗ ಎಲ್ಲ ರಾಜ್ಯಗಳ ಚುನಾವಣಾ ಆಯೋಗದ ಮುಖ್ಯಸ್ಥರಿಗೆ ಸೂಚನೆ ಕೊಟ್ಟಿದೆ. ಸಾಮೂಹಿಕವಾಗಿ ಹೆಸರು ತೆಗೆದುಹಾಕಿರುವ ದೂರುಗಳ ಬಗ್ಗೆಯೂ ಗಮನ ಹರಿಸಬೇಕು ಎಂದು ಆದೇಶ ನೀಡಿದೆ. ಕೇಂದ್ರ ಚುನಾವಣೆ ಆಯೋಗದ ಆದೇಶವನ್ನು ಸ್ವಾಗತಿಸುತ್ತೇವೆ.

#### ಜನ, ಸಂವಿಧಾನಾತ್ಮಕ ಸಂಸ್ಥೆಯ ರಕ್ಷಣೆ ನನ್ನ ಕರ್ತವ್ಯ

50 ಲಕ್ಷ ಮತಗಳನ್ನು ತೆಗದು ಹಾಕುವ ಸಂಚಿನ ಬಗ್ಗೆ ದಾಖಲೆ ನೀಡಬೇಕು ಇಲ್ಲದಿದ್ದರೆ ರಾಜಿನಾಮೆ ನೀಡಬೇಕು, ಮೂರು ಪಕ್ಷಗಳು ಸೇರಿ 25 ಸಾವಿರ ಅರ್ಜಿ ಸಲ್ಲಿಕೆ ಮಾಡಿವೆ ಎಂಬ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿದ ಡಿ.ಕೆ. ಶಿವಕುಮಾರ್, ನನ್ನ ರಾಜೀನಾಮೆ ಕೇಳಲಿ. ಆದರೆ 25 ಸಾವಿರ ಅರ್ಜಿಗಳನ್ನು ಸಲ್ಲಿಕೆ ಮಾಡಿರುವುದಾಗಿ ಒಪ್ಪಿಕೊಂಡಿದ್ದಾರಲ್ಲ ಅದರ ಬಗ್ಗೆ ವಿಪಕ್ಷಗಳು ಮಾತನಾಡಲಿ. ಈ ಮತಗಳ್ಳತನದ ಪಿತಾಮಹರು ತಾವೇ ಎಂದು ಒಪ್ಪಿಕೊಂಡಿರುವುದಕ್ಕೆ ಅಶೋಕ್, ವಿಜಯೇಂದ್ರ ಅವರಿಗೆ ಅಭಿನಂದಿಸುವೆ. ಇದು ಕ್ರಿಮಿನಲ್ ಪಿತೂರಿಯ ತಪ್ಪೊಪ್ಪಿಗೆ. ಪೊಲೀಸರು ಅವರನ್ನು ಬಂಧಿಸಬೇಕು. ಇದಕ್ಕಿಂತ ಬೇರೆ ಸಾಕ್ಷಿ ಏನು ಬೇಕು, ಅವರು ಯಾವುದೇ ದೂರು ನೀಡಿದರೂ ಸ್ವಾಗತಿಸುತ್ತೇನೆ. ಒಂದು ವೇಳೆ ನನ್ನದೇ ತಪ್ಪಿದ್ದರೆ, ಚುನಾವಣೆ ಆಯೋಗ ಅಥವಾ ಯಾವುದೇ ಸಂಸ್ಥೆಗಳು ನನ್ನ ವಿರುದ್ಧ ಕ್ರಮ ತೆಗೆದುಕೊಳ್ಳಲಿ. ಅದಕ್ಕೆ ಹೆದರುವುದಿಲ್ಲ. ಕರ್ನಾಟಕದ ಪ್ರತಿಯೊಬ್ಬ ಪ್ರಜೆಯ ಮತವನ್ನು ಹಾಗೂ ಸಂವಿಧಾನಾತ್ಮಕ ಸಂಸ್ಥೆಯನ್ನು ರಕ್ಷಿಸುವುದು ಮುಖ್ಯಮಂತ್ರಿಯಾಗಿ ನನ್ನ ಕರ್ತವ್ಯ ಎಂದು ಡಿ.ಕೆ. ಶಿವಕುಮಾರ್ ಸವಾಲೆಸೆದರು.



ಇದು ಕಾಂಗ್ರೆಸ್ ಪಕ್ಷ ಮತ್ತು ಸರಕಾರದ ಗೆಲುವು ಮಾತ್ರವಲ್ಲ ಕರ್ನಾಟಕದ ಮತ್ತು ಇಡೀ ದೇಶದ ಮತದಾರರ ಗೆಲುವು. ಅರ್ಹ ಮತದಾರರ ಹಕ್ಕು ಕಸಿಯುವ ಸಂಚಿನ ವಿರುದ್ಧದ ಗೆಲುವು. ಮತದಾರರ ಹಕ್ಕು ರಕ್ಷಣೆಗೆ ಕಾಂಗ್ರೆಸ್ ಮೊದಲಿಂದಲೂ ಹೋರಾಟ ಮಾಡುತ್ತಾ ಬಂದಿದೆ. ಅದು ಮುಂದೆಯೂ ಮುಂದುವರೆಯಲಿದೆ ಎಂದು ಹೇಳಿದರು.

ಸಮಾಜದ ದುರ್ಬಲ ವರ್ಗಗಳ ಮತಗಳನ್ನು ತೆಗೆದುಹಾಕಲು ಬಿಜೆಪಿಯವರು ಅರ್ಜಿ ನೀಡಿದ್ದಾರೆ. ಇದು ನಾಚಿಕೆಗೇಡಿನ ಸಂಗತಿ. ನಮ್ಮ ನಡುವಿನ ಇತರೇ ಸಮುದಾಯಗಳು, ಜಾತಿ ಮತ್ತು ಧರ್ಮಗಳ ನಡುವೆ ಕಂದಕ ಸೃಷ್ಟಿಸಲು ಹೀಗೆ ಮಾಡುತ್ತಿದ್ದಾರೆ. ದಲಿತ ಮತ್ತು ಅಲ್ಪಸಂಖ್ಯಾತರ ಮತಗಳನ್ನು ತೆಗೆಸುವುದೇ ಅವರ ಉದ್ದೇಶ. ಇಂತಹವರು ರಾಜಕೀಯದಲ್ಲಿರಲು ನಾಲಾಯಕ್‌ಗಳು ಎಂದು ಕಿಡಿಕಾರಿದರು.

**ಬಿಜೆಪಿ ಜನರ ಹೃದಯ ಗೆದ್ದು, ಚುನಾವಣೆ ಎದುರಿಸಬಹುದಿತ್ತು:** ಬಿಜೆಪಿಯವರು ಜನರ ಹೃದಯ ಗೆದ್ದು ಚುನಾವಣೆ ಎದುರಿಸಬಹುದಿತ್ತು. ಮಹಾತ್ಮ ಗಾಂಧೀಜಿಯವರು ಒಮ್ಮೆ ಹೇಳಿದ್ದರು, 'ನಿಮ್ಮನ್ನು ನೀವು ನಿಯಂತ್ರಿಸಿಕೊಳ್ಳಬೇಕಾದರೆ ಮೆದುಳನ್ನು ಬಳಸಿ, ಇತರರನ್ನು ನಿಯಂತ್ರಿಸಬೇಕಾದರೆ ನಿಮ್ಮ ಹೃದಯವನ್ನು ಬಳಸಿ' ಎಂದು. ಅವರು ಈ ದೇಶದ ಜನರ ಹೃದಯವನ್ನು ಗೆದ್ದು ಚುನಾವಣೆ ಎದುರಿಸಬಹುದಿತ್ತು. ಅದರ ಬದಲಾಗಿ, ಮತಗಳನ್ನು ತೆಗೆದು ಹಾಕುವ ಕ್ರಿಮಿನಲ್ ಕೆಲಸಕ್ಕೆ ಇಳಿದಿದ್ದಾರೆ ಎಂದು ಕಿಡಿಕಾರಿದರು.

# ಕಾವೇರಿ ನೀರು ಹಂಚಿಕೆ: 4,000ಕ್ಕೆ ಬದಲಾಗಿ 2,000 ಕ್ಯೂಸೆಕ್‌ಗೆ ಇಳಿಸಿ

### ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರಕ್ಕೆ ಕರ್ನಾಟಕ ಜಲಸಂಪನ್ಮೂಲ ಸಚಿವ ಎನ್. ಚಲುವರಾಯಸ್ವಾಮಿ ಮನವಿ

**ಬೆಂಗಳೂರು, ಅ.2:** ಕಾವೇರಿ ಜಲಾನಯನ ಪ್ರದೇಶದಲ್ಲಿ ತಲೆದೋರಿರುವ ತೀವ್ರ ಬರ ಪರಿಸ್ಥಿತಿ ಮತ್ತು ಜಲಾಶಯಗಳಲ್ಲಿ ನೀರಿನ ಅಭಾವದ ಹಿನ್ನೆಲೆಯಲ್ಲಿ, ತಮಿಳುನಾಡಿಗೆ ಹರಿಸುತ್ತಿರುವ ನೀರಿನ ಪ್ರಮಾಣವನ್ನು ದಿನಕ್ಕೆ 4,000 ಕ್ಯೂಸೆಕ್ಸ್ ನಿಂದ 2,000 ಕ್ಯೂಸೆಕ್ಸ್‌ಗೆ ಇಳಿಸುವಂತೆ ಕೋರಿ ಕರ್ನಾಟಕ ಸರ್ಕಾರವು ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರಕ್ಕೆ ಅಧಿಕೃತ ಮನವಿ ಸಲ್ಲಿಸಿದೆ ಎಂದು ಜಲಸಂಪನ್ಮೂಲ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಸಚಿವರು, ಸೆಪ್ಟೆಂಬರ್ 24ರಂದು ನಡೆದ ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರದ 58ನೇ ಸಭೆಯಲ್ಲಿ ಮುಂದಿನ 15 ದಿನಗಳ ಕಾಲ ಬಿಳಿಗುಂಡ್ಲುವಿನಲ್ಲಿ ದಿನಕ್ಕೆ 4,000 ಕ್ಯೂಸೆಕ್ಸ್ ನೀರು ಹರಿಸಲು ಪ್ರಾಧಿಕಾರ ನಿರ್ದೇಶನ ನೀಡಿತ್ತು. ಈ ಆದೇಶವನ್ನು ಮರುಪರಿಶೀಲಿಸುವಂತೆ ಇಂದು ಮನವಿ ಸಲ್ಲಿಸಲಾಗಿದೆ ಎಂದಿದ್ದಾರೆ.

ಕರ್ನಾಟಕದಲ್ಲಿ ನೈಋತ್ಯ ಮುಂಗಾರು ಸಂಪೂರ್ಣ ಮುಕ್ತಾಯಗೊಂಡಿದ್ದು, ಕೃಷ್ಣರಾಜಸಾಗರ, ಹೇಮಾವತಿ, ಹಾರಂಗಿ ಮತ್ತು ಕಬಿನಿ ಜಲಾಶಯಗಳಿಗೆ ಒಳಹರಿವು ತೀವ್ರವಾಗಿ ಕ್ಷೀಣಿಸಿದೆ. ಪ್ರಸ್ತುತ ಈ ನಾಲ್ಕೂ ಜಲಾಶಯಗಳಲ್ಲಿ ಬಳಕೆಗೆ ಲಭ್ಯವಿರುವ ಒಟ್ಟು ನೀರು ಕೇವಲ 49 ಟಿಎಂಸಿ ಮಾತ್ರ. ಮುಂದಿನ ಜೂನ್ 2027ರ ವರೆಗೆ ರಾಜ್ಯದ ಕುಡಿಯುವ ನೀರಿನ ಅಗತ್ಯತೆ, ಪರಿಸರ ಸಂರಕ್ಷಣೆ ಮತ್ತು ಆವಿಂಯಾಗುವಿಕೆಂಯು ನಷ್ಟವನ್ನು ಸರಿದೂಗಿಸಲು ಈ ನೀರನ್ನು ಅತ್ಯಂತ ಎಚ್ಚರಿಕೆಯಿಂದ ಕಾಯ್ದಿರಿಸಿಕೊಳ್ಳಬೇಕಾದ ಅನಿವಾರ್ಯತೆ ಇದೆ" ಎಂದು ಸಚಿವರು ಸ್ಪಷ್ಟಪಡಿಸಿದ್ದಾರೆ.





ಕಾವೇರಿ ಕಣಿವೆಯ ಸುಮಾರು 47 ತಾಲೂಕುಗಳನ್ನು ಈಗಾಗಲೇ ಬರಪೀಡಿತ ಪ್ರದೇಶಗಳೆಂದು ಸರ್ಕಾರ ಘೋಷಿಸಿದ್ದು, ಇಡೀ ಕಣಿವೆ ಪ್ರದೇಶ ತೀವ್ರ ಬರಗಾಲಕ್ಕೆ ಸಿಲುಕಿದೆ. ಆದಾಗ್ಯೂ ಪ್ರಸಕ್ತ ಜಲವರ್ಷದಲ್ಲಿ ಪ್ರಾಧಿಕಾರದ ಎಲ್ಲಾ ನಿರ್ದೇಶನಗಳನ್ನು ಕರ್ನಾಟಕ ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬಂದಿದೆ. ಜೂನ್ 1ರಿಂದ ಸೆಪ್ಟೆಂಬರ್ 30ರವರೆಗೆ ಬಿಳಿಗುಂಡ್ಲುವಿನಲ್ಲಿ 44.21 ಟಿಎಂಸಿ ನೀರು ದಾಖಲಾಗಿದೆ ಎಂದು ವಿವರಿಸಿದ್ದಾರೆ.

ಮತ್ತೊಂದೆಡೆ, ತಮಿಳುನಾಡಿಗೆ ಅನುಕೂಲಕರವಾದ ಈಶಾನ್ಯ ಮುಂಗಾರು ಸಾಮಾನ್ಯ ಅಥವಾ ಉತ್ತಮವಾಗಿರಲಿದ್ದು, ಅಲ್ಲಿ ಒಳಹರಿವು ಹೆಚ್ಚುವ ಸಾಧ್ಯತೆಯಿದೆ. ಈ ಎಲ್ಲಾ ವಾಸ್ತವಾಂಶಗಳ ಆಧಾರದ ಮೇಲೆ, ಕೆಆರ್‌ಎಸ್ ಮತ್ತು ಕಬಿನಿ ಜಲಾಶಯಗಳಿಂದ ಗಣನೀಯ ಪ್ರಮಾಣದ ನೀರನ್ನು ಬಿಡುಗಡೆ ಮಾಡಲು ಸಾಧ್ಯವೇ ಇಲ್ಲದ ಇಕ್ಕಟ್ಟಿನಲ್ಲಿ ರಾಜ್ಯವಿದೆ. ಆದ್ದರಿಂದ ಪ್ರಾಧಿಕಾರವು ತನ್ನ ಹಿಂದಿನ ನಿರ್ಧಾರವನ್ನು ಮರುಪರಿಶೀಲಿಸಿ, ಬಿಳಿಗುಂಡ್ಲುವಿನಲ್ಲಿ ಹರಿಸಬೇಕಾದ ನೀರಿನ ಪ್ರಮಾಣವನ್ನು ದಿನಕ್ಕೆ 2,000 ಕ್ಯೂಸೆಕ್ಸ್‌ಗೆ ಇಳಿಸುವ ಮೂಲಕ ರಾಜ್ಯದ ಸಂಕಷ್ಟಕ್ಕೆ ಸ್ಪಂದಿಸಬೇಕೆಂದು ವಿನಂತಿಸಲಾಗಿದೆ" ಎಂದು ಸಚಿವ ಚಲುವರಾಯಸ್ವಾಮಿ ತಿಳಿಸಿದ್ದಾರೆ.

## ಕಾಶ್ಮೀರದಲ್ಲಿ ಭಾರತೀಯ ಸೇನೆಯಿಂದ ಹತ್ಯೆಗೀಡಾದ ಉಗ್ರ ಜೀವಂತ: ಪಾಕ್

**ಇಸ್ಲಾಮಾಬಾದ್, ಅ.2:** ಕಾಶ್ಮೀರದಲ್ಲಿ ಭಾರತೀಯ ಸೇನೆಯೊಂದಿಗೆ ನಡೆದ ಎನ್‌ಕೌಂಟರ್‌ನಲ್ಲಿ ಕೊಲ್ಲಲ್ಪಟ್ಟ ಮಾಜಿ ಎಸ್‌ಎಸ್‌ಜಿ ಕಮಾಂಡೋ ಮೊಹಮ್ಮದ್ ಆಸಿಫ್ ಅಲಿಯಾಸ್ ಫೌಜಿ ಮೂಸಾ ಜೀವಂತವಾಗಿದ್ದಾನೆ ಎಂದಿರುವ ಪಾಕ್ ಮತ್ತೊಬ್ಬ ಸೈನಿಕನನ್ನು ಅದು ಪ್ರಸ್ತುತಪಡಿಸಿದೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿರುವ ಪಾಕಿಸ್ತಾನ ಸೇನೆಯ ಮಾಧ್ಯಮ ವಿಭಾಗ, ಇಂಟರ್–ಸರ್ವೀಸಸ್ ಪಬ್ಲಿಕ್ ರಿಲೇಶನ್ಸ್ (ISPR) ನ ಮಹಾನಿರ್ದೇಶಕ ಲೆಫ್ಟಿನೆಂಟ್ ಜನರಲ್ ಅಹ್ಮದ್ ಷರೀಫ್ ಚೌಧರಿ, ಭಾರತವು ನಕಲಿ ಕಾರ್ಯಾಚರಣೆ ನಡೆಸುತ್ತಿದೆ ಎಂದು ಆರೋಪಿಸಿದರು.

ಭಾರತೀಯ ಸೇನೆಯ ಚಿನಾರ್ ಕಾರ್ಪ್ಸ್‌ನ ಸಾಮಾಜಿಕ ಮಾಧ್ಯಮ ಪೋಸ್ಟ್ ಅನ್ನು ಓದಿದ DG ISPR, ಸೆ.29ರ ರಾತ್ರಿ ಗುಪ್ತಚರ ವರದಿಗಳ ಆಧಾರದ ಮೇಲೆ, ಜಮ್ಮು ಮತ್ತು ಕಾಶ್ಮೀರದಲ್ಲಿ ಭಾರತೀಯ ಸೇನೆಯ ಚಿನಾರ್ ಕಾರ್ಪ್ಸ್, ಭಾರತೀಯ ಸೇನೆ, ಪೊಲೀಸರು ಮತ್ತು CRPF ಯುಸ್ಮಾರ್ಗ್‌ನ ಕೊರಾಗ್‌ನ ಸಾಮಾನ್ಯ ಪ್ರದೇಶದಲ್ಲಿ ಜಂಟಿ ಕಾರ್ಯಾಚರಣೆಯನ್ನು ಪ್ರಾರಂಭಿಸಿತು. ಸೆ.30ರ ಬೆಳಗ್ಗೆ ಕಾರ್ಯಾಚರಣೆಯ ಸಮಯದಲ್ಲಿ ಲಷ್ಕರ್–ಎ–ತೈಬಾ ಭಯೋತ್ಪಾದಕನ ಶವವನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಚಿನಾರ್ ಕಾರ್ಪ್ಸ್ ವರದಿ ಮಾಡಿದೆ. ಮೃತನನ್ನು ಪಾಕಿಸ್ತಾನ ಸೇನೆಯ ಎಸ್‌ಎಸ್‌ಜಿ ಕಮಾಂಡೋ ಪಡೆಯ ಮಾಜಿ ಸೈನಿಕ ಮೊಹಮ್ಮದ್ ಆಸಿಫ್ ಎಂದು ಗುರುತಿಸಲಾಗಿದೆ. ಮಾಧ್ಯಮಗಳ ಎದುರು ಮೊಹಮ್ಮದ್ ಆಸಿಫ್ ಎಂದು ಪ್ರಸ್ತುತಪಡಿಸಿದ ವ್ಯಕ್ತಿ, ನನ್ನ ಹೆಸರು ಮೊಹಮ್ಮದ್ ಆಸಿಫ್ ಎಂದಿದ್ದಾನೆ.

# ಜಂತರ್‌ಮಂತರ್‌ನಲ್ಲಿ ಎಸ್‌ಐಆರ್ ವಿರುದ್ಧ ಪ್ರತಿಭಟನೆ ಸೌರಭ್ ಭಾರದ್ವಾಜ್ ಸೇರಿ ಹಲವರು ಪೊಲೀಸ್ ವಶಕ್ಕೆ

**ನವದೆಹಲಿ,ಅ.2:** ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆ ಹಾಗೂ ಚುನಾವಣಾ ಆಯೋಗದ ಕಾರ್ಯವೈಖರಿ ವಿರೋಧಿಸಿ ದೆಹಲಿಯ ಜಂತರ್‌ಮಂತರ್‌ನಲ್ಲಿ ಪ್ರತಿಭಟನೆ ನಡೆಯಿತು. ಸಿಜೆಪಿ, ಆಮ್ ಆದ್ಮಿ ಪಕ್ಷ, ಕಾಂಗ್ರೆಸ್‌ನ ಯುವ ಘಟಕಗಳು ಹಾಗೂ ವಿವಿಧ ವಿದ್ಯಾರ್ಥಿ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಭಾಗವಹಿಸಿ ಪ್ರತಿಭಟನಾಕಾರರು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ರಾಜೀನಾಮೆಗೆ ಆಗ್ರಹಿಸಿದರು.

ಜಂತರ್‌ಮಂತರ್‌ಗೆ ಆಗಮಿಸಿ ಪ್ರತಿಭಟನೆಯಲ್ಲಿ ಭಾಗವಹಿಸಿದ ಎಎಪಿ ದೆಹಲಿ ಅಧ್ಯಕ್ಷ ಸೌರಭ್ ಭಾರದ್ವಾಜ್ ಅವರನ್ನು ದೆಹಲಿ ಪೊಲೀಸರು ವಶಕ್ಕೆ ಪಡೆದರು. ಎಎಪಿ ನಾಯಕಿ ಆತಿಶಿ, ಶಾಸಕ ಸಂಜೀವ್ ಝಾ ಸೇರಿದಂತೆ ಹಲವು ಎಎಪಿ ನಾಯಕರು ಹಾಗೂ ವಿದ್ಯಾರ್ಥಿ ಸಂಘಟನೆಗಳ ಕಾರ್ಯಕರ್ತರನ್ನೂ ಪೊಲೀಸರು ವಶಕ್ಕೆ ಪಡೆದಿದ್ದಾರೆ. ವಿವಿಧ ವರದಿಗಳ ಪ್ರಕಾರ, ಜಂತರ್‌ಮಂತರ್ ಮತ್ತು ಸುತ್ತಮುತ್ತ 500ಕ್ಕೂ ಹೆಚ್ಚು ಪ್ರತಿಭಟನಾಕಾರರನ್ನು ವಶಕ್ಕೆ ಪಡೆಯಲಾಗಿದೆ.



ಪೊಲೀಸರ ಕ್ರಮದ ವೇಳೆ ಪ್ರತಿಭಟನಾ ಸ್ಥಳದಲ್ಲಿದ್ದ ಮಹಿಳಾ ಕಾರ್ಯಕರ್ತರೊಂದಿಗೆ ಪೊಲೀಸರು ಅನುಚಿತವಾಗಿ ವರ್ತಿಸಿದ್ದಾರೆ ಎಂದು ಸೌರಭ್ ಭಾರದ್ವಾಜ್ ಆರೋಪಿಸಿದ್ದಾರೆ. ಸಿಜೆಪಿ ಕರೆ ಮೇರೆಗೂ ನೂರಾರು ಯುವಕರು ಪ್ರತಿಭಟನೆಯಲ್ಲಿ ಭಾಗಿಯಾದರು. ಪ್ರತಿಭಟನೆಗೆ ಅನುಮತಿ ಇಲ್ಲದ ಹಿನ್ನಲೆ ಹೋರಾಟಗಾರರನ್ನು ವಶಕ್ಕೆ ಪಡೆಯಲಾಯಿತು.

**ಭೂತದ ವೇಷದಲ್ಲಿ ಯುವ ಕಾಂಗ್ರೆಸ್ ಪ್ರತಿಭಟನೆ:** ಇದೇ ವೇಳೆ ಎಸ್‌ಐಆರ್ ವಿರುದ್ಧ ಭಾರತೀಯ ಯೂತ್ ಕಾಂಗ್ರೆಸ್ ಕಾರ್ಯಕರ್ತರು ವಿಶಿಷ್ಟ ರೀತಿಯಲ್ಲಿ ಪ್ರತಿಭಟನೆ ನಡೆಸಿದರು. ಕೆಲ ಕಾರ್ಯಕರ್ತರು ಭೂತದ ವೇಷ ಧರಿಸಿ ಚುನಾವಣಾ ಆಯೋಗದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಮತದಾರರ ಪಟ್ಟಿಯಿಂದ ಹೆಸರುಗಳನ್ನು ತೆಗೆದುಹಾಕುವ ಎಸ್‌ಐಆರ್ ಪ್ರಕ್ರಿಯೆಯನ್ನು ವಿರೋಧಿಸುವ ಸಂದೇಶವನ್ನು ಈ ವೇಷದ ಮೂಲಕ ಸಾರಲು ಯೂತ್ ಕಾಂಗ್ರೆಸ್ ಕಾರ್ಯಕರ್ತರು ಪ್ರಯತ್ನಿಸಿದರು. ಯುವ ಕಾಂಗ್ರೆಸ್ ಕಾರ್ಯಕರ್ತರು ರೈಸಿನಾ ರಸ್ತೆಯಿಂದ ಜಂತರ್‌ಮಂತರ್‌ವರೆಗೆ ಮೆರವಣಿಗೆ ನಡೆಸಿ, ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ರಾಜೀನಾಮೆಗೆ ಆಗ್ರಹಿಸಿದರು. ಪ್ರತಿಭಟನೆ ಹಿನ್ನೆಲೆಯಲ್ಲಿ ಮಧ್ಯ ದೆಹಲಿಯಲ್ಲಿ ಭಾರಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ಜಂತರ್ಮಂತರ್, ಸಂಸತ್ ಮಾರ್ಗ, ಅಶೋಕ ರಸ್ತೆ ಸೇರಿದಂತೆ ಹಲವು ಪ್ರದೇಶಗಳಲ್ಲಿ ಬ್ಯಾರಿಕೇಡ್ ಅಳವಡಿಸಿ ಸಂಚಾರ ನಿಯಂತ್ರಣ ಕೈಗೊಳ್ಳಲಾಗಿತ್ತು. ಕೆಲ ಮಾರ್ಗಗಳಲ್ಲಿ ವಾಹನ ಸಂಚಾರವನ್ನು ಪರ್ಯಾಯ ರಸ್ತೆಗಳತ್ತ ತಿರುಗಿಸಲಾಯಿತು.

# ಭಾರತದಲ್ಲಿ ಧರ್ಮ, ರಾಷ್ಟ್ರವನ್ನು ಪ್ರತ್ಯೇಕವಾಗಿ ನೋಡಲು ಸಾಧ್ಯವಿಲ್ಲ: ಮೋಹನ್ ಭಾಗವತ್

**ಮುಂಬೈ,ಅ.2:** ಭಾರತದಲ್ಲಿ ಧರ್ಮ ಮತ್ತು ರಾಷ್ಟ್ರವನ್ನು ಪ್ರತ್ಯೇಕವಾಗಿ ನೋಡಲು ಸಾಧ್ಯವಿಲ್ಲ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಮುಖ್ಯಸ್ಥ ಮೋಹನ್ ಭಾಗವತ್ ಹೇಳಿದ್ದಾರೆ.

ಮುಂಬೈನಲ್ಲಿ ನಡೆದ ಅಖಿಲ ಭಾರತ ವಿಹಾರ ಸೇವಾ ಸಮೂಹದ 14ನೇ ಸಮ್ಮೇಳನದಲ್ಲಿ ಮಾತನಾಡಿದ ಅವರು, ರಾಷ್ಟ್ರದ ಉದ್ದೇಶ ಧರ್ಮಕ್ಕೆ ಸಂಬಂಧಿಸಿದ್ದು, ಧರ್ಮವು ರಾಷ್ಟ್ರವನ್ನು ಬಲಪಡಿಸುತ್ತದೆ. ಎರಡೂ ಪರಸ್ಪರ ಅವಲಂಬಿತವಾಗಿವೆ ಎಂದು ಹೇಳಿದರು.

ಇಂದು ಜಗತ್ತು ಹಲವು ವೈರುಧ್ಯಗಳು ಮತ್ತು ಸವಾಲುಗಳನ್ನು ಎದುರಿಸುತ್ತಿದೆ. ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆ, ವೈಯಕ್ತಿಕ ಸ್ವಾತಂತ್ರ್ಯ ಮತ್ತು ಕುಟುಂಬ ಜೀವನ, ಧಾರ್ಮಿಕ ನಂಬಿಕೆ ಮತ್ತು ಸಂಘರ್ಷದ ನಡುವೆ ಸಮತೋಲನ ಸಾಧಿಸುವುದು ಸವಾಲಾಗಿದೆ ಎಂದು ಭಾಗವತ್ ಹೇಳಿದರು.




ಈ ಸಮಸ್ಯೆಗಳಿಗೆ ಒಂದು ಬದಿಯನ್ನು ಆಯ್ಕೆ ಮಾಡಿಕೊಂಡು ಮತ್ತೊಂದು ಬದಿಯನ್ನು ತ್ಯಜಿಸುವ ಮೂಲಕ ಪರಿಹಾರ ಕಂಡುಕೊಳ್ಳಲು ಸಾಧ್ಯವಿಲ್ಲ. ಸಮತೋಲನದ ಅಗತ್ಯವಿದೆ ಎಂದು ಅವರು ಅಭಿಪ್ರಾಯಪಟ್ಟರು. ಭಾರತದ ಜ್ಞಾನ ಮತ್ತು ಆಧ್ಯಾತ್ಮಿಕ ಪರಂಪರೆಗೆ ಇಂತಹ ಜಾಗತಿಕ ಸವಾಲುಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ಪಾತ್ರವಿದೆ ಎಂದು ಭಾಗವತ್ ಹೇಳಿದರು. ಭಾರತವು ಇತಿಹಾಸದಲ್ಲಿ ಇತರ ದೇಶಗಳನ್ನು ವಶಪಡಿಸಿಕೊಳ್ಳದೆ, ಜನರನ್ನು ಮತಾಂತರಗೊಳಿಸದೆ ತನ್ನ ಜ್ಞಾನವನ್ನು ಜಗತ್ತಿನೊಂದಿಗೆ ಹಂಚಿಕೊಂಡಿದೆ. ಇಂದು ಜಗತ್ತು ಭಾರತದಿಂದ ಮಾರ್ಗದರ್ಶನವನ್ನು ನಿರೀಕ್ಷಿಸುತ್ತಿದೆ ಎಂದು ಅವರು ಹೇಳಿದರು.

ವೇದಗಳು, ಉಪನಿಷತ್ತುಗಳು, ರಾಮಾಯಣ, ಮಹಾಭಾರತ, ಭಗವದ್ಗೀತೆ, ಜೈನ ಆಗಮಗಳು, ತ್ರಿಪಿಟಕ, ಗುರುಗ್ರಂಥ ಸಾಹಿಬ್ ಹಾಗೂ ಸಂತರ ಬೋಧನೆಗಳನ್ನು ಭಾರತದ ವಿಶಾಲ ಜ್ಞಾನ ಪರಂಪರೆಯ ಭಾಗವಾಗಿ ಭಾಗವತ್ ಉಲ್ಲೇಖಿಸಿದರು.

ಈ ಜ್ಞಾನ ಪರಂಪರೆಯನ್ನು ಮುಂದು ವರಿಸುವ ವ್ಯಕ್ತಿಗಳು ಮತ್ತು ಅವರ ಪರಂಪರೆಯನ್ನು ರಕ್ಷಿಸುವುದು ಕೇವಲ ಧಾರ್ಮಿಕ ಜವಾಬ್ದಾರಿಯಲ್ಲ; ಅದು ಮಾನವತೆಯ ಸೇವೆಯೂ ಆಗಿದೆ ಎಂದು ಅವರು ಹೇಳಿದರು. ಅಂತಹ ಪರಂಪರೆಯರಕ್ಷಣೆ ಭವಿಷ್ಯದ ಮಾನವ ಸಮಾಜದ ಸುರಕ್ಷತೆಗೆ ಸಹಕಾರಿಯಾಗುತ್ತದೆ ಎಂದು ಭಾಗವತ್ ಅಭಿಪ್ರಾಯಪಟ್ಟರು.

# ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ವಿಸ್ತರಣೆ ಪ್ರತಿದಿನ 84 ಲಕ್ಷಕ್ಕೂ ಹೆಚ್ಚು ಮಂದಿಗೆ ಲಾಭ

**ಚೆನ್ನೈ,ಅ.2:** ತಮಿಳುನಾಡಿನಲ್ಲಿ ಮಹಿಳೆಯರಿಗೆ ನೀಡಲಾಗುತ್ತಿರುವ ಉಚಿತ ಸರ್ಕಾರಿ ಬಸ್ ಪ್ರಯಾಣದ ಸೌಲಭ್ಯವನ್ನು ಮತ್ತಷ್ಟು ವಿಸ್ತರಿಸಲಾಗಿದ್ದು, ವೆಟ್ರಿ ಪಯಣಂ ಯೋಜನೆಯ ವಿಸ್ತೃತ ರೂಪಕ್ಕೆ ಮುಖ್ಯಮಂತ್ರಿ ಜೋಸೆಫ್ ವಿಜಯ್ ಶುಕ್ರವಾರ ಚಾಲನೆ ನೀಡಿದರು. ವಿಸ್ತರಿತ ಯೋಜನೆಯಿಂದ ರಾಜ್ಯಾದ್ಯಂತ ಪ್ರತಿದಿನ 84.32 ಲಕ್ಷ ಮಹಿಳೆಯರು ಪ್ರಯೋಜನ ಪಡೆಯಲಿದ್ದಾರೆ.



ಚೆನ್ನೈನ ಕೋಯಂಬೇಡು ಬಸ್ ನಿಲ್ದಾಣದಲ್ಲಿ ಯೋಜನೆಗೆ ಚಾಲನೆ ನೀಡಿದ ಸಿಎಂ ವಿಜಯ್, ಬಸ್‌ನಲ್ಲಿದ್ದ ಮಹಿಳಾ ಪ್ರಯಾಣಿಕರಿಗೆ ಉಚಿತ ಟಿಕೆಟ್ ವಿತರಿಸಿದರು. ಈ ಸಂದರ್ಭದಲ್ಲಿ ಅವರು ಸಾಂಕೇತಿಕವಾಗಿ ಕಂಡಕ್ಟರ್ ಪಾತ್ರ ನಿರ್ವಹಿಸಿ ಪ್ರಯಾಣಿಕರಿಗೆ ಟಿಕೆಟ್ ನೀಡಿದರು.

ವಿಸ್ತರಿತ ಯೋಜನೆಯಡಿ 12,692 ಸರ್ಕಾರಿ ಬಸ್ಗಳನ್ನು ಉಚಿತ ಪ್ರಯಾಣದ ವ್ಯಾಪ್ತಿಗೆ ತರಲಾಗಿದೆ. ರಾಜ್ಯದ ಏಳು ಸಾರಿಗೆ ನಿಗಮಗಳು ನಿಗದಿಪಡಿಸಿರುವ ಒಟ್ಟು 18,413 ಬಸ್‌ಗಳಲ್ಲಿ ಶೇ.69ರಷ್ಟು ಬಸ್‌ಗಳು ಯೋಜನೆಯ ವ್ಯಾಪ್ತಿಗೆ ಬರಲಿವೆ. ಒಟ್ಟು 1,94,649 ನಿಗದಿತ ಟ್ರಿಪ್‌ಗಳ ಪೈಕಿ 1,65,312 ಟ್ರಿಪ್‌ಗಳು, ಅಂದರೆ ಸುಮಾರು ಶೇ.85ರಷ್ಟು ಟ್ರಿಪ್‌ಗಳಲ್ಲಿ ಈ ಸೌಲಭ್ಯ ಲಭ್ಯವಾಗಲಿದೆ.

ಇದಕ್ಕೂ ಮೊದಲು ಸಾಮಾನ್ಯ ಬಸ್‌ಗಳಿಗೆ ಸೀಮಿತವಾಗಿದ್ದ ಉಚಿತ ಪ್ರಯಾಣ ಸೌಲಭ್ಯವನ್ನು ಇದೀಗ ಎಕ್ಸ್‌ಪ್ರೆಸ್, ಎಲ್‌ಎಸ್‌ಎಸ್, ಡಿಲಕ್ಸ್ ಬಸ್‌ಗಳು, ನಗರ–ಪಟ್ಟಣ ಪ್ರದೇಶಗಳ ಬಸ್‌ಗಳು ಹಾಗೂ 40 ಕಿ.ಮೀ.ಗಿಂತ ಹೆಚ್ಚು ದೂರದ ಗುಡ್ಡಗಾಡು ಮಾರ್ಗಗಳ ಸಾಮಾನ್ಯ ಬಸ್‌ಗಳಿಗೂ ವಿಸ್ತರಿಸಲಾಗಿದೆ.

ಮಹಿಳೆಯರ ಜೊತೆಗೆ ತೃತೀಯಲಿಂಗಿಗಳಿಗೂ ಯೋಜನೆಯಡಿ ಉಚಿತ ಪ್ರಯಾಣದ ಸೌಲಭ್ಯ ದೊರೆಯಲಿದೆ. ವಿದ್ಯಾರ್ಥಿನಿಯರಿಗೆ ದೂರದ ಕಾಲೇಜುಗಳಿಗೆ ತೆರಳುವ ಸಂದರ್ಭದಲ್ಲಿಯೂ ಉಚಿತ ಪ್ರಯಾಣದ ಸೌಲಭ್ಯ ದೊರೆಯಲಿದ್ದು, ಮಹಿಳೆಯರ ಪ್ರಯಾಣ ವೆಚ್ಚ ಕಡಿಮೆ ಮಾಡುವುದರ ಜೊತೆಗೆ ಶಿಕ್ಷಣ ಮತ್ತು ಉದ್ಯೋಗಾವಕಾಶಗಳಿಗೆ ಸಂಪರ್ಕ ಹೆಚ್ಚಿಸುವ ಉದ್ದೇಶವನ್ನು ಯೋಜನೆ ಹೊಂದಿದೆ ಎಂದು ಸರ್ಕಾರ ಹೇಳಿದೆ.

# ಚುನಾವಣಾ ಆಯೋಗದಿಂದ ಈಗ ಮರುನೋಂದಣಿ ಕಸರತ್ತು

**ನವದೆಹಲಿ, ಅ.2:** ರಾಷ್ಟ್ರವ್ಯಾಪಿ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ನಡೆಸಿ ಕರಡು ಮತದಾರರ ಪಟ್ಟಿಯಿಂದ ಬರೋಬ್ಬರಿ 13 ಕೋಟಿ ಜನರ ಹೆಸರುಗಳನ್ನು ಹೊರದಬ್ಬಿದ ಬಳಿಕ ಆಯೋಗಕ್ಕೆ ಈಗ ಜ್ಞಾನೋದಯ ವಾದಂತಿದೆ. 30 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಈ ದೊಡ್ಡ ಪ್ರಮಾಣದ ಕಡಿತದಿಂದಾಗಿ ತೀವ್ರ ವಿರೋಧ ವ್ಯಕ್ತವಾದ ಬೆನ್ನಲ್ಲೇ 20 ರಾಜ್ಯಗಳಲ್ಲಿ ಎಸ್‌ಐಆರ್‌ನಿಂದ ಹೊರಗುಳಿದ ಮತದಾರರನ್ನು ಮರುನೋಂದಾಯಿಸಲು ಸೆಪ್ಟೆಂಬರ್ 29ರಂದು ಲಿಖಿತ ಸೂಚನೆ ನೀಡಿದೆ. ಗುರುವಾರ ನಡೆದ ವಿಡಿಯೋ ಕಾನ್ಫರೆನ್ಸ್‌ನಲ್ಲಿಯೂ ಅದನ್ನು ಪುನರಾವರ್ತಿಸಿದೆ. ಹೊಸ ಮತದಾರರು ಭರ್ತಿ ಮಾಡುವ ಫಾರ್ಮ್ 6 ಬದಲಾವಣೆ ಮತ್ತು ಮತದಾರರ ಪಟ್ಟಿ ತಯಾರಿಸುವ ಇಸಿಐಎನ್‌ಇಟಿ ತಂತ್ರಾಂಶದ ಕೇಂದ್ರಿಕೃತ ನಿಯಂತ್ರಣದ ಬಗ್ಗೆ ಚುನಾವಣಾ ಆಯೋಗದೊಳಗೆ ವಿರೋಧ ವ್ಯಕ್ತವಾಗಿತ್ತು. ಈ ತಂತ್ರಾಂಶದ ಕ್ರಮಬದ್ಧವಾದ ಕೇಂದ್ರೀಕರಣದ ಬಗ್ಗೆ ಎಚ್ಚರಿಸಿ ಆಡಿಟ್‌ಗೆ ಒತ್ತಾಯಿಸಲಾಗಿತ್ತು. ಆದರೆ ಸೆಪ್ಟೆಂಬರ್ 26 ರವರೆಗೆ ಯಾರೂ ಈ ಬಗ್ಗೆ ಕಿವಿಗೊಟ್ಟಿರಲಿಲ್ಲ. ಈಗ ಎಚ್ಚೆತ್ತ ಆಯೋಗ, ಆ ಘೋಷಣೆಯನ್ನು ಎಸ್‌ಐಆರ್ ಹಂತಕ್ಕೆ ಮಾತ್ರ ಸೀಮಿತ ಎಂದು ನುಣುಚಿಕೊಂಡು, ಉಳಿದ ರಾಜ್ಯಗಳಲ್ಲಿ ಹಳೆಯ ಸರಳ ಸ್ಟ್ಯಾಟ್ಯೂಟೋರಿ




ಫಾರ್ಮ್ ಬಳಸಿ ಎಂದಿದೆ. ಸೆಪ್ಟೆಂಬರ್ 29ರ ಪತ್ರವು ಈ ವಿಷಯವನ್ನು ಸ್ಪಷ್ಟಪಡಿಸಿದ್ದು, ಡಿಜಿ(ಐಟಿ)ಗೆ ECINet ನಲ್ಲಿ ಬದಲಾವಣೆ ಮಾಡಲು ತಿಳಿಸಲಾಗಿದೆ ಮತ್ತು ಏಪ್ರಿಲ್ ನಂತರದ ಆಯೋಗದ ಎರಡನೇ ಪೂರ್ಣ ಸಭೆಯಲ್ಲಿ (ಸೆ.26) ತೆಗೆದುಕೊಂಡ ತೀರ್ಮಾನಗಳಂತೆ ನೋಟಿಸ್ ಪಡೆದವರು ಖುದ್ದಾಗಿ ಬರುವ ಅಗತ್ಯವಿಲ್ಲ ಎಂದು ತಿಳಿಸಲಾಗಿದೆ.

ಮನೆ–ಮನೆ ಭೇಟಿ ಹಾಗೂ ಮರುನೋಂದಣಿ ಅಭಿಯಾನದ ಬಗ್ಗೆ ಹೇಳುವುದಾದರೆ, ಎಸ್‌ಐಆರ್ ಮುಗಿದಿರುವ 20 ರಾಜ್ಯಗಳಲ್ಲಿ ಬಿಟ್ಟುಹೋದ ಮತ್ತು ಹೊಸ ಮತದಾರರನ್ನು ಮರುನೋಂದಾಯಿಸಲು ವಿಶೇಷ ಅಭಿಯಾನ ನಡೆಯಲಿದೆ ಎಂದು ಸೆಪ್ಟೆಂಬರ್ 29ರ ಪತ್ರ ತಿಳಿಸಿದೆ. ಪ್ರೀ–ಎಸ್‌ಐಆರ್ ಮತ್ತು ಪೋಸ್ಟ್–ಎಸ್‌ಐಆರ್ ಪಟ್ಟಿಗಳನ್ನು ಹೋಲಿಸಿ, ಅನ್ಯಾಯವಾಗಿ ಕೈಬಿಟ್ಟವರನ್ನು ಗುರುತಿಸುವಂತೆ ಆಯುಕ್ತರಿಗೆ ಸೂಚಿಸಿದ್ದಾರೆ. ಮತದಾರರು ನಕಲಿ ಅಥವಾ ಮೃತರಲ್ಲದೆ, ಬೇರೆಡೆ ಮ್ಯಾಪ್ ಆಗಿಲ್ಲದಿದ್ದರೆ ಅಂಥವರ ಮನೆಗಳಿಗೇ ಹೋಗಿ ಫಾರ್ಮ್ 6 ಭರ್ತಿ ಮಾಡಿಸಿಕೊಳ್ಳಲು ಹೇಳಲಾಗಿದೆ. ಈ ಕಾರ್ಯದಲ್ಲಿ ರಾಜಕೀಯ ಪಕ್ಷಗಳ ಬೂತ್‌ಮಟ್ಟದ ಏಜೆಂಟರ ಸಹಾಯವನ್ನೂ ಪಡೆಯಲು ಉಪ ಚುನಾವಣಾ ಆಯುಕ್ತರು ಸೂಚಿಸಿದ್ದಾರೆ.

# ಬೈಕ್ ಬೆಲೆ ಕೇವಲ 80 ಸಾವಿರ ದಂಡ 10 ಲಕ್ಷ ರೂ.!

**ಗುರುಗ್ರಾಮ್, ಅ.2:** ಹರಿಯಾಣದ ಗುರುಗ್ರಾಮ್‌ನಲ್ಲಿ ಸಂಚಾರ ನಿಯಮಗಳ ಉಲ್ಲಂಘನೆಗೆ ಸಂಬಂಧಿಸಿದ ಅಚ್ಚರಿಯ ಸುದ್ದಿಯೊಂದು ಹೊರಬಿದ್ದಿದೆ. ಕೇವಲ 80,000 ರೂ. ಬೆಲೆಬಾಳುವ ಬೈಕ್ ಮೇಲೆ ಬಾಕಿ ಉಳಿದಿರುವ ಒಟ್ಟು ಟ್ರಾಫಿಕ್ ದಂಡದ ಮೊತ್ತ ಬರೋಬ್ಬರಿ 10 ಲಕ್ಷ ರೂ.ಗಳಿಗೂ ಅಧಿಕವಾಗಿದೆ. ಪೊಲೀಸರ ತಪಾಸಣೆ ವೇಳೆ ಈ ಪ್ರಸಂಗ ಬೆಳಕಿಗೆ ಬಂದಿದ್ದು, ವಾಹನವನ್ನು ವಶಕ್ಕೆ ಪಡೆಯಲಾಗಿದೆ.

ಉದ್ಯೋಗ ವಿಹಾರ್ ಪ್ರದೇಶದ ಶಂಕರ್ ಚೌಕ್ ಬಳಿ ಯುವಕನೊಬ್ಬ ಬೈಕನ್ನು ರಾಂಗ್ ರೂಟ್‌ನಲ್ಲಿ ಚಲಾಯಿಸಿಕೊಂಡು ಹೋಗುತ್ತಿದ್ದಾಗ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದಾನೆ. ಬಳಿಕ ಅಧಿಕಾರಿಗಳು ಆ ವಾಹನದ ನಂಬರ್ ಬಳಸಿ ಆನ್‌ಲೈನ್‌ನಲ್ಲಿ ಪರಿಶೀಲನೆ ನಡೆಸಿದಾಗ ಆಘಾತಕಾರಿ ಸತ್ಯ ಬಹಿರಂಗವಾಗಿದೆ. ಪೊಲೀಸರ ಮಾಹಿತಿ ಪ್ರಕಾರ, ಈ ಬೈಕನ್ನು ಅಂಕೇಶ್ ಕುಮಾರ್ ಎಂಬ ವ್ಯಕ್ತಿ 2023ರ ಜುಲೈ ತಿಂಗಳಲ್ಲಿ ಖರೀದಿಸಿದ್ದರು. ಅಂದಿನಿಂದ ವಾಹನ ಚಲಾಯಿಸುವವರು ರಸ್ತೆ ನಿಯಮಗಳ ಬಗ್ಗೆ ಕಿಂಚಿತ್ತೂ ಗಮನಹರಿಸಿಲ್ಲ ಎಂಬುದು ಸ್ಪಷ್ಟವಾಗಿದೆ.

ಪ್ರತಿ ಬಾರಿ ಸಿಕ್ಕಿಬಿದ್ದಾಗಲೂ ಪೊಲೀಸರು ಚಲನ್ ದಾಖಲಿಸುತ್ತಿದ್ದರೂ, ವಾಹನದ ಮಾಲೀಕ ಅಥವಾ ಚಾಲಕ ಇಲ್ಲಿಯವರೆಗೆ ಒಂದೇ ಒಂದು ದಂಡದ ಮೊತ್ತವನ್ನೂ ಪಾವತಿಸಿಲ್ಲ. ಪರಿಣಾಮವಾಗಿ, ಸ್ವಲ್ಪ ಸ್ವಲ್ಪವೇ ಸಂಗ್ರಹಗೊಂಡ ದಂಡದ ಮೊತ್ತವು ಕ್ರಮೇಣ ಬೆಳೆದು ಈಗ ಬರೋಬ್ಬರಿ 10.30 ಲಕ್ಷ ರೂ.ಗಳಿಗೆ ಮುಟ್ಟಿದೆ.ಬೈಕಿನ ಮೂಲ ಬೆಲೆ ಕೇವಲ 80 ಸಾವಿರ ರೂಪಾಯಿಗಳಷ್ಟಿದ್ದರೆ, ಅದರ ಮೇಲಿರುವ ದಂಡದ ಮೊತ್ತ ಮಾತ್ರ 10 ಲಕ್ಷ ದಾಟಿರುವುದು ಸಾಮಾಜಿಕ ಜಾಲತಾಣಗಳಲ್ಲಿಯೂ ಈಗ ಬಿಸಿಬಿಸಿ ಸುದ್ದಿಯಾಗಿ ಚರ್ಚೆಗೆ ಗ್ರಾಸವಾಗಿದೆ. ಅಂದರೆ, ವಾಹನದ ಮೌಲ್ಯಕ್ಕಿಂತ 12 ರಿಂದ 15 ಪಟ್ಟು ಹೆಚ್ಚಿನ ದಂಡವನ್ನು ಈ ಬೈಕ್ ಸಂಗ್ರಹಿಸಿದೆ.

# 2006ರ ಪ್ರಕರಣ ಮರುತನಿಖೆಗೆ ಕೇರಳಂ ಸರ್ಕಾರ ಸಿದ್ಧತೆ

**ತಿರುವನಂತಪುರ, ಅ.2:** ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರು ಕೇರಳದಲ್ಲಿ ವರ್ಕ್ಸ್ ಸೆಕ್ರೆಟರಿಯಾಗಿ ಕಾರ್ಯನಿರ್ವಹಿಸುತ್ತಿದ್ದ 2006ರ ಅವಧಿಯಲ್ಲಿ ಅವರ ವಿರುದ್ಧ ನಡೆದಿದ್ದ ವಿಜಿಲೆನ್ಸ್ ಇಲಾಖೆಯ ಪ್ರಾಥಮಿಕ ತನಿಖೆಗೆ ಸಂಬಂಧಿಸಿದ ಕಡತಗಳನ್ನು ಕೇರಳ ಗೃಹ ಇಲಾಖೆ ಕೇಳಿಕೊಂಡಿದೆ.

ಮತದಾರರ ಪಟ್ಟಿಗಳ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ಜಾರಿಗೆ ತರುವ ಸಿಇಸಿ ಜ್ಞಾನೇಶ್‌ಕುಮಾರ್ ಅವರ ಕ್ರಮವನ್ನು ವಿರೋಧಿಸಿ ಇಂಡಿಯಾ ಮೈತ್ರಿಕೂಟ ಪ್ರತಿಭಟನೆ ನಡೆಸುತ್ತಿರುವ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ. ಸುಮಾರು ಎರಡು ದಶಕಗಳ ಹಿಂದೆ ಮಲೇಷ್ಯಾದ ಇಂಜಿನಿಯರ್ ಒಬ್ಬರ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜ್ಞಾನೇಶ್ ಕುಮಾರ್ ವಿರುದ್ಧ ಕೇರಳದ ವಿಜಿಲೆನ್ಸ್ ಮತ್ತು ಭ್ರಷ್ಟಾಚಾರ ನಿಗ್ರಹ ದಳ ಪ್ರಾಥಮಿಕ ತನಿಖೆ ನಡೆಸಿತ್ತು.

ಮಲೇಷ್ಯಾದ ಇಂಜಿನಿಯರ್ ಲೀ ಸೀ ಬೀನ್ ಅವರ ಆತ್ಮಹತ್ಯೆಯ ಬಳಿಕ ಈ ತನಿಖೆ ಆರಂಭವಾಗಿತ್ತು. ಅವರು ಕೇರಳ ಸ್ಟೇಟ್ ಟ್ರಾನ್ಸ್‌ಪೋರ್ಟ್ ಪ್ರಾಜೆಕ್ಟ್‌ನಡಿ ಎಂಸಿ ರಸ್ತೆಯನ್ನು ಮೇಲ್ದರ್ಜೆಗೇರಿಸುವ ಕಾಮಗಾರಿ ಕೈಗೊಂಡಿದ್ದ PATI-BEL ಎಂಬ ಭಾರತ–ಮಲೇಷ್ಯಾ ಜಂಟಿ ಒಕ್ಕೂಟದ ಮುಖ್ಯ ಪ್ರಾಜೆಕ್ಟ್ ಮ್ಯಾನೇಜರ್ ಆಗಿದ್ದರು. ಸರ್ಕಾರಿ ಅಧಿಕಾರಿಗಳು ಬಿಲ್‌ಗಳನ್ನು ಪಾವತಿಸಲು ಸಹಕರಿಸುತ್ತಿಲ್ಲ ಎಂಬ ಆರೋಪಗಳ




ನಡುವೆ ಲೀ ಸೀ ಬೀನ್ ಅವರು ಕೌಲಾಲಂಪುರ್‌ನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದರು ಎನ್ನಲಾಗಿದೆ.

ಆತ್ಮಹತ್ಯೆಗೂ ಮುನ್ನ ಅವರು ಬರೆದಿದ್ದ ಟಿಪ್ಪಣಿಯಲ್ಲಿ ಜ್ಞಾನೇಶ್ ಕುಮಾರ್ ಅವರ ಹೆಸರೂ ಉಲ್ಲೇಖವಾಗಿತ್ತು. ಯೋಜನೆಯ ಅನುಷ್ಠಾನದಲ್ಲಿ ವ್ಯವಸ್ಥಿತ ಭ್ರಷ್ಟಾಚಾರ ನಡೆಯುತ್ತಿದೆ ಎಂಬ ಆರೋಪಗಳನ್ನು ಒಳಗೊಂಡಿದ್ದ ಅವರ ಟಿಪ್ಪಣಿಯಿಂದಾಗಿ ಪ್ರಕರಣ ದೊಡ್ಡವಿವಾದಕ್ಕೆ ಕಾರಣವಾಗಿತ್ತು. ಈ ಬೆಳವಣಿಗೆಯ ಬೆನ್ನಲ್ಲೇ ಅಂದಿನ ಎಲ್‌ಡಿಎಫ್ ಸರ್ಕಾರ ವಿಜಿಲೆನ್ಸ್ ತನಿಖೆಗೆ ಆದೇಶಿಸಿತ್ತು.

ವಿಜಿಲೆನ್ಸ್ ತನಿಖೆ ಆರಂಭವಾದ ಬಳಿಕ ಕೆಲವೇ ಸಮಯದಲ್ಲಿ ಪ್ರಕರಣದ ತನಿಖೆ ನಿಧಾನಗತಿಗೆ ತಿರುಗಿತು ಎನ್ನಲಾಗಿದೆ. ಬಳಿಕ ತನಿಖೆ ಸ್ಥಗಿತಗೊಂಡಿತು ಎಂಬ ವರದಿಗಳೂ ಇವೆ. ಪ್ರಕರಣಕ್ಕೆ ಸಂಬಂಧಿಸಿದ ಹಲವು ಪ್ರಮುಖ ದಾಖಲೆಗಳು ಆರಂಭಿಕ ಹುಡುಕಾಟದಲ್ಲೇ ಪತ್ತೆಯಾಗಿರಲಿಲ್ಲ ಎಂದು ಮೂಲಗಳು ತಿಳಿಸಿವೆ. ಅಂದಿನ ಸಂದರ್ಭದಲ್ಲಿ ಕ್ರೈಂ ಬ್ರಾಂಚ್ ಕೂಡ ಪ್ರಕರಣದ ಬಗ್ಗೆ ಆಸಕ್ತಿ ತೋರಿಸಿತ್ತು. ಆದರೆ ಅದರ ಕಚೇರಿಯಲ್ಲಿ ನಡೆಸಿದ ಹುಡುಕಾಟದಲ್ಲೂ ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳು ಸಿಗಲಿಲ್ಲ ಎನ್ನಲಾಗಿದೆ.

ಹಳೆಯ ಪ್ರಕರಣದ ತನಿಖೆಯನ್ನು ಮುಂದುವರಿಸುವ ಸಾಧ್ಯತೆಗಳ ಕುರಿತು ಸರ್ಕಾರ ಪರಿಶೀಲನೆ ನಡೆಸುತ್ತಿರುವುದು ರಾಜಕೀಯವಾಗಿ ಮಹತ್ವ ಪಡೆದುಕೊಂಡಿದೆ. ಈ ಪ್ರಕರಣ ನಡೆದ ಸಂದರ್ಭದಲ್ಲಿ ಕೇರಳದಲ್ಲಿ ಸಿಪಿಎಂ ನೇತೃತ್ವದ ಎಲ್ಡಿಎಫ್ ಸರ್ಕಾರ ಅಧಿಕಾರದಲ್ಲಿತ್ತು. ಹೀಗಾಗಿ ಪ್ರಕರಣವನ್ನು ಮತ್ತೆ ಕೈಗೆತ್ತಿಕೊಂಡರೆ ಸಿಪಿಎಂ ಕೂಡ ರಾಜಕೀಯವಾಗಿ ಮುಜುಗರದ ಪರಿಸ್ಥಿತಿಯನ್ನು ಎದುರಿಸಬೇಕಾಗಬಹುದು ಎಂದು ಮೂಲಗಳು ಹೇಳಿವೆ.

ವಿಶೇಷವೆಂದರೆ, ಪ್ರಸ್ತುತ ಸಿಇಸಿ ಜ್ಞಾನೇಶ್ ಕುಮಾರ್ ವಿರುದ್ಧ ಸಿಪಿಎಂ ತೀವ್ರ ರಾಜಕೀಯ ಹೋರಾಟ ನಡೆಸುತ್ತಿರುವ ಸಂದರ್ಭದಲ್ಲಿ, ಅವರ ವಿರುದ್ಧದ ಎರಡು ದಶಕಗಳ ಹಿಂದಿನ ಪ್ರಕರಣದ ಕಡತಗಳನ್ನು ಗೃಹ ಇಲಾಖೆ ಮತ್ತೆ ಪರಿಶೀಲನೆಗೆ ಪಡೆಯುತ್ತಿರುವುದು ಕುತೂಹಲ ಮೂಡಿಸಿದೆ.

# ಧರ್ಮಸ್ಥಳದಲ್ಲಿ ಗಾಂಧಿಸ್ಮೃತಿ, ನವಜೀವನ ಸಾಧನಾ ಸಮಾವೇಶ

**ಮುಂಬಯಿ, ಅ 2:** ಮನುಷ್ಯಜನ್ಮ ಶ್ರೇಷ್ಠವಾಗಿದ್ದು ದುಶ್ಚಟಗಳಿಂದ ದೂರವಿದ್ದು, ಸತ್ಕಾರ್ಯಗಳನ್ನು ಮಾಡಿದರೆ ಜೀವನ ಪಾವನವಾಗುತ್ತದೆ. ಮನಸು ಮತ್ತು ಪಂಚೇಂದ್ರಿಯಗಳ ನಿಯಂತ್ರಣದೊಂದಿಗೆ ಸಾರ್ಥಕ ಜೀವನ ನಡೆಸಬೇಕು ಎಂದು ಸುಬ್ರಹ್ಮಣ್ಯ ಮಠದ ವಿದ್ಯಾಪ್ರಸನ್ನತೀರ್ಥ ಸ್ವಾಮೀಜಿ ಹೇಳಿದರು.

ಅವರು ಶುಕ್ರವಾರ ಧರ್ಮಸ್ಥಳದಲ್ಲಿ ಅಮೃತವರ್ಷಿಣಿ ಸಭಾಭವನದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮತ್ತು ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆಯ ಜಂಟಿ ಆಶ್ರಯದಲ್ಲಿ ಆಯೋಜಿಸಿದ ಗಾಂಧಿಸ್ಮೃತಿ ಮತ್ತು ನವಜೀವನ ಸಾಧನಾ ಸಮಾವೇಶದಲ್ಲಿ ಆಶೀರ್ವಚನ ನೀಡಿದರು.

ಋಷಿ–ಮುನಿಗಳು, ವೇದಗಳು, ಪುರಾಣಗಳು ಹಾಗೂ ಉಪನಿಷತ್ತುಗಳು ಸಾರ್ಥಕ ಜೀವನಕ್ಕೆ ಉಪಯುಕ್ತವಾದ ಸಾಕಷ್ಟು ಉಪದೇಶ ಮತ್ತು ಮಾರ್ಗದರ್ಶನ ನೀಡಿವೆ. ಇವುಗಳ ಸದುಪಯೋಗ ಪಡೆದು ಮಾನವಜನ್ಮ ಸಾರ್ಥಕಗೊಳಿಸಬೇಕು.

ಮದ್ಯಪಾನ ಸಮಾಜಕ್ಕೆ ದೊಡ್ಡ ಕಂಟಕವಾಗಿದೆ. ಕುಟುಂಬದ ಒಬ್ಬ ವ್ಯಕ್ತಿ ವ್ಯಸನಮುಕ್ತನಾದರೆ ಇಡೀ ಕುಟುಂಬ ಸುಧಾರಣೆ ಆಗುತ್ತದೆ. ತನ್ಮೂಲಕ ಸಮಾಜವು ಪ್ರಗತಿಯಾಗುತ್ತದೆ. ಹೆಗ್ಗಡೆಯವರು ರಾಜ್ಯದೆಲ್ಲೆಡೆ ನಡೆಸುವ ಮದ್ಯವರ್ಜನ ಶಿಬಿರಗಳಿಂದ ಅನೇಕ ಮಂದಿ ವ್ಯಸನಮುಕ್ತರಾಗಿ ಸುಖ–ಶಾಂತಿ, ನೆಮ್ಮದಿಯ ಜೀವನ ನಡೆಸುತ್ತಿದ್ದಾರೆ ಎಂದು ಸ್ವಾಮೀಜಿ ಸಂತಸ ವ್ಯಕ್ತಪಡಿಸಿದರು.




ನವಜೀವನ ಸಾಧನಾ ಸಮಾವೇಶವನ್ನು ಉದ್ಘಾಟಿಸಿದ ಹೇಮಾವತಿ ವೀ. ಹೆಗ್ಗಡೆ ಮಾತನಾಡಿ, ವ್ಯಸನಮುಕ್ತರಾದವರು ದೃಢಸಂಕಲ್ಪದಿಂದ ಸಾರ್ಥಕ ಜೀವನ ನಡೆಸಬೇಕು. ನುಡಿದಂತೆ ನಡೆದರೆ ಮಾತಿಗೆ ಬೆಲೆ ಬರುತ್ತದೆ. ಮಾತೇ ಮಾಣಿಕ್ಯವಾಗುತ್ತದೆ. ಜನಜಾಗೃತಿ ವೇದದಿಕೆಯ ಕಾರ್ಯಕರ್ತರು ಮತ್ತು ನವಜೀವನ ಸದಸ್ಯರು ನಿಷ್ಠೆಯಿಂದ ಮಾಡುವ ಕರ್ತವ್ಯ ಮತ್ತು ಬದ್ಧತೆಯಿಂದ ವೇದಿಕೆಯ ಚಟುವಟಿಕೆಗಳು ಯಶಸ್ವಿಯಾಗಿವೆ ಎಂದರು. ವ್ಯಸನಮುಕ್ತರಾದವರು ನಂದಾದೀಪದಂತೆ ಬೆಳಗಿ ಇತರರ ಬದುಕಿಗೂ ಮಾರ್ಗದರ್ಶನ ನೀಡಬೇಕು ಎಂದು ಅವರು ಸಲಹೆ ನೀಡಿದರು.

ಅಧ್ಯಕ್ಷತೆ ವಹಿಸಿದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆಯವರು ಮಾತನಾಡಿ, ವ್ಯಸನ ಮುಕ್ತರಾದವರಿಂದ ಆರ್ಥಿಕ ಬಡತನ ಮತ್ತು ಹೃದಯದ ಬಡತನ ನಿರ್ಮೂಲನೆ ಆಗಿ ಆರ್ಥಿಕ ಸ್ವಾವಲಂಬನೆಯೊಂದಿಗೆ ಸುಖ–ಶಾಂತಿ, ನೆಮ್ಮದಿಯ ಜೀವನ ಸಾಧ್ಯವಾಗುತ್ತದೆ. ಇಂತಹ ಸುಧಾರಣಾ ಕಾರ್ಯಕ್ರಮಗಳು ವಿಶಿಷ್ಟವಾಗಿದ್ದು ಇದು ನಾವು ಗಾಂಧೀಜಿಯವರಿಗೆ ಅರ್ಪಿಸುವ ಕೊಡುಗೆಯಾಗಿದೆ ಎಂದರು.ಮದ್ಯವ್ಯಸನ ಮುಕ್ತರ ಪರವಾಗಿ ಕೇಶವ ಚಾರ್ಮಾಡಿ ಮತ್ತು ಸುಕನ್ಯಾ ಅನಿಸಿಕೆ ವ್ಯಕ್ತಪಡಿಸಿದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸಿ.ಇ.ಒ. ಅನಿಲ್ ಕುಮಾರ್ ಆಶಯ ಭಾಷಣ ಮಾಡಿದರು. ಶಾಸಕ ಹರೀಶ್ ಪೂಂಜ, ಮಾಜಿ ಎಂ.ಎಲ್.ಸಿ. ಕೆ.ಪ್ರತಾಪಸಿಂಹ ನಾಯಕ್, ನಟರಾಜ ಬಾದಾಮಿ ಮತ್ತು ಮಂಗಳೂರಿನ ಪ್ರಕಾಶ್ ಕಾರಂತ್ ಶುಭಾಶಂಸನೆ ಮಾಡಿದರು.

ಗ್ರಾಮಾಭಿವೃದ್ಧಿ ಯೋಜನೆಯ ಉಡುಪಿಯ ಪ್ರಾದೇಶಿಕ ನಿರ್ದೇಶಕ ಆನಂದ ಸುವರ್ಣ ಸ್ವಾಗತಿಸಿದರು. ಜಿಲ್ಲಾ ನಿರ್ದೇಶಕ ದಿನೇಶ್ ಡಿ. ಧನ್ಯವಾದವಿತ್ತರು. ಪ್ರಾದೇಶಿಕ ಯೋಜನಾಧಿಕಾರಿ ಗಣೇಶ್ ಆಚಾರ್ಯ ಕಾರ್ಯಕ್ರಮ ನಿರ್ವಹಿಸಿದರು.

# ಆತ್ಮಶುದ್ಧಿ, ಲೋಕಕಲ್ಯಾಣಕ್ಕೆ ಭಜನೆ ಸಾಧನ: ಡಾ.ಹೇಮಾವತಿ ವೀ.ಹೆಗ್ಗಡೆ

**ಮುಂಬಯಿ, ಅ .02:** ಭಜನೆ ಕೇವಲ ಹಾಡು, ರಾಗ ಮತ್ತು ತಾಳದ ಅಭ್ಯಾಸವಲ್ಲ. ಅದು ಮನಸ್ಸನ್ನು ಶುದ್ಧಗೊಳಿಸಿ ಆತ್ಮಕಲ್ಯಾಣದೊಂದಿಗೆ ಕುಟುಂಬ, ಸಮಾಜ ಹಾಗೂ ಲೋಕಕಲ್ಯಾಣಕ್ಕೆ ದಾರಿತೋರುವ ಆಧ್ಯಾತ್ಮಿಕ ಸಾಧನೆಯಾಗಿದೆ ಎಂದು ಡಾ. ಹೇಮಾವತಿ ವೀ. ಹೆಗ್ಗಡೆ ಹೇಳಿದರು. ಭಜನಾ ಕಮ್ಮಟದಲ್ಲಿ ಭಾಗವಹಿಸಿದ ಶಿಬಿರಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ಕಮ್ಮಟಕ್ಕೆ ಆಗಮಿಸಿರುವ ಪ್ರತಿಯೊಬ್ಬರೂ ತಾವು ಯಾವ ಉದ್ದೇಶಕ್ಕಾಗಿ ಬಂದಿದ್ದೇವೆ ಎಂಬುದನ್ನು ಸದಾ ನೆನಪಿನಲ್ಲಿಟ್ಟುಕೊಂಡು, ಆಲಸ್ಯಕ್ಕೆ ಅವಕಾಶ ನೀಡದೆ ಶ್ರದ್ಧೆ ಮತ್ತು ಭಕ್ತಿಯಿಂದ ಭಜನೆ ಕಲಿಯಬೇಕು. ಪರಿಣತ ಗುರುಗಳಿಂದ ಭಜನೆ ಕಲಿಯುವ ಅವಕಾಶ ದೊರೆತಿರುವುದು ಭಾಗ್ಯ ಎಂದರು.

ಜೀವನವನ್ನು ನೀರಿನಲ್ಲಿ ಸಾಗುವ ದೋಣಿಗೆ ಹೋಲಿಸಿದ ಅವರು, ದೋಣಿಯಲ್ಲಿ ಸಣ್ಣರಂಧ್ರ ಉಂಟಾದರೂ ಅದನ್ನು ತಕ್ಷಣ ಮುಚ್ಚದಿದ್ದರೆ ನೀರು ಒಳನುಗ್ಗಿ ದೋಣಿ ಮುಳುಗುವ ಅಪಾಯವಿರುತ್ತದೆ. ಅದೇ ರೀತಿ ಕಾಮ, ಕ್ರೋಧ, ಲೋಭ, ಮೋಹ ಮೊದಲಾದ ದುರ್ಗುಣಗಳು ಜೀವನವನ್ನು ಹಾಳುಮಾಡುತ್ತವೆ. ನಿತ್ಯ ಭಜನೆ ಮತ್ತು ಭಗವಂತನ ಸ್ಮರಣೆಯ ಮೂಲಕ ಕೆಟ್ಟ ಆಲೋಚನೆಗಳಿಗೆ ಅವಕಾಶ ನೀಡದೆ ಮನಸ್ಸನ್ನು ಶುದ್ಧವಾಗಿಟ್ಟುಕೊಳ್ಳಬೇಕು ಎಂದು ತಿಳಿಸಿದರು.

ಕ್ಷೇತ್ರದಲ್ಲಿ ಅನ್ನದಾನ, ಆರೋಗ್ಯ, ಶಿಕ್ಷಣ ಹಾಗೂ ದುಶ್ಚಟಗಳ ವಿರುದ್ಧ ಜನಜಾಗೃತಿ ಸೇರಿದಂತೆ ಅನೇಕ ಜನಪರ ಕಾರ್ಯಕ್ರಮಗಳು ನಡೆಯುತ್ತಿವೆ. ಇವುಗಳೊಂದಿಗೆ ಭಜನಾ ಕಮ್ಮಟಕ್ಕೂ ವಿಶೇಷ ಮಹತ್ವವಿದೆ. ಭಜನಾ ಕಮ್ಮಟವು ಸಮಾಜದ ಬೇರಿಗೆ ನೀರೆರೆದಂತೆ. ಧರ್ಮ ಜೀವನದ ಬೇರು. ಬೇರು ಗಟ್ಟಿಯಾಗಿದ್ದರೆ ಮರ ಸದೃಢವಾಗಿ ಬೆಳೆಯುವಂತೆ, ಧರ್ಮದ ಆಧಾರ ಗಟ್ಟಿಯಾಗಿದ್ದರೆ ಜೀವನವೂ ಸಾರ್ಥಕವಾಗುತ್ತದೆ ಎಂದು ಹೇಳಿದರು.

ನಾವು ಮಾಡುವ ಪ್ರತಿಯೊಂದು ಕ್ರಿಯೆಗೂ ತಕ್ಕ ಪ್ರತಿಕ್ರಿಯೆ ಇದ್ದೇ ಇರುತ್ತದೆ. ಒಳಿತು ಮಾಡಿದರೆ ಒಳಿತಿನ ಫಲ ಹಾಗೂ ಕೆಡುಕು ಮಾಡಿದರೆ ಅದರ ಪರಿಣಾಮವನ್ನು ಅನುಭವಿಸಬೇಕಾಗುತ್ತದೆ. ಕರ್ಮದ ಫಲದಿಂದ ಯಾರೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂಬ ಸತ್ಯವನ್ನು ಭಜನೆ ನಿರಂತರವಾಗಿ ನೆನಪಿಸುತ್ತದೆ ಎಂದರು. ಬುದ್ಧರ ಜೀವನ ಪ್ರಸಂಗವನ್ನು ಉಲ್ಲೇಖಿಸಿದ ಅವರು, ವೃದ್ಧಾಪ್ಯ, ಕಾಯಿಲೆ ಮತ್ತು ಮರಣದಿಂದ ಯಾರೂ



ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಜೀವನದ ಅನಿತ್ಯತೆಯನ್ನು ಅರಿತು ಆಧ್ಯಾತ್ಮಿಕ ಸಾಧನೆಯತ್ತ ಮುಖಮಾಡಬೇಕು. ಶಾರೀರಿಕ ಕಷ್ಟಗಳು ಎದುರಾದಾಗ ದೇವರನ್ನು ಪ್ರಾರ್ಥಿಸುವ ನಾವು, ದೇವರಿಗಾಗಿ ನಮ್ಮ ಶರೀರ ಮತ್ತು ಸಮಯವನ್ನು ಎಷ್ಟು ಬಳಸುತ್ತಿದ್ದೇವೆ ಎಂಬುದನ್ನೂ ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದರು. ವಯಸ್ಸಾದ ಮೇಲೆ ಭಜನೆ, ಧ್ಯಾನ ಮಾಡೋಣ ಎಂದು ಆಧ್ಯಾತ್ಮಿಕ ಸಾಧನೆಯನ್ನು ಮುಂದೂಡುವುದು ಸರಿಯಲ್ಲ. ನಮ್ಮ ಜೀವನದ ಗಡಿಯಾರ ಯಾವಾಗ ನಿಲ್ಲುತ್ತದೆ ಎಂಬುದು ಯಾರಿಗೂ ತಿಳಿದಿಲ್ಲ. ಬಸ್ ಅಥವಾ ರೈಲಿನ ಪ್ರಯಾಣಕ್ಕೆ ಮುಂಚಿತವಾಗಿ ಟಿಕೆಟ್ ಪಡೆದು ಸಿದ್ಧತೆ ಮಾಡಿಕೊಳ್ಳುವಂತೆ, ಜೀವನದ ಪ್ರಯಾಣಕ್ಕೂ ಸತ್ಕಾರ್ಯ ಮತ್ತು ಪುಣ್ಯಕಾರ್ಯಗಳ ಮೂಲಕ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು. ಕನಕದಾಸರು ಮತ್ತು ಪುರಂದರದಾಸರು ಭಕ್ತಿಯನ್ನು ವ್ಯಕ್ತಪಡಿಸಲು ಸಂಕೋಚಪಡದೆ ಕಾಲಿಗೆ ಗೆಜ್ಜೆ ಕಟ್ಟಿ ಕುಣಿದು ಭಜನೆ ಮಾಡಿದರು. ಅವರ ಭಕ್ತಿ ಆತ್ಮಕಲ್ಯಾಣದೊಂದಿಗೆ ಲೋಕಕಲ್ಯಾಣಕ್ಕೂ ಕಾರಣವಾಯಿತು. ಇಂದಿಗೂ ಭಜನೆ, ಕುಣಿತ ಭಜನೆ ಹಾಗೂ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಸಮಾಜದಲ್ಲಿ ಭಕ್ತಿ ಮತ್ತು ಜಾಗೃತಿಯನ್ನು ಮೂಡಿಸುತ್ತಿವೆ ಎಂದರು.

ಹಿಂದಿನ ಕಾಲದಲ್ಲಿ ಮನೆಗಳಲ್ಲಿ ಒರಳಿನಲ್ಲಿ ಭತ್ತ ಕುಟ್ಟುವಾಗ ಮಾತುಕತೆಯ ನಡುವೆಯೂ ಒನಕೆಯ ಚಲನೆಯ ಲಯ ತಪ್ಪುತ್ತಿರಲಿಲ್ಲ. ಅದೇ ರೀತಿ ಸಂಸಾರದ ನೂರಾರು ಕೆಲಸಗಳ ನಡುವೆಯೂ ಭಗವಂತನ ಸ್ಮರಣೆಯನ್ನು ನಿರಂತರವಾಗಿ ಮಾಡಬಹುದು. ಭತ್ತದಿಂದ ಹೊಟ್ಟು ಕಳಚಿ ಅಕ್ಕಿ ದೊರೆಯುವಂತೆ, ನಿರಂತರ ಭಜನೆಯಿಂದ ಮನಸ್ಸಿನ ಅಜ್ಞಾನ ಮತ್ತು ಮಲಿನತೆ ದೂರವಾಗುತ್ತದೆ ಎಂದು ವಿವರಿಸಿದರು.

ದೇಹಕ್ಕೆ ಸೇವಿಸುವ ಅನ್ನ ಮಾತ್ರ ಆಹಾರವಲ್ಲ; ಮನಸ್ಸು ಮತ್ತು ಬುದ್ಧಿಯ ಮೂಲಕ ಒಳಗೆ ಪ್ರವೇಶಿಸುವ ಒಳ್ಳೆಯ ಮತ್ತು ಕೆಟ್ಟ ವಿಚಾರಗಳೂ ಆಹಾರವೇ ಎಂಬ ಶಂಕರಾಚಾರ್ಯರ ತತ್ವವನ್ನು ಉಲ್ಲೇಖಿಸಿದ ಅವರು, ದೂರದರ್ಶನ ಮತ್ತು ಇತರ ಮಾಧ್ಯಮಗಳ ಮೂಲಕ ನಮ್ಮ ಮನಸ್ಸು ಹಾಗೂ ಬುದ್ಧಿಗೆ ಯಾವ ರೀತಿಯ ವಿಚಾರಗಳು ಪ್ರವೇಶಿಸುತ್ತಿವೆ ಎಂಬುದನ್ನು ಪ್ರತಿಯೊಬ್ಬರೂ ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದರು.

ಸೂರ್ಯನ ಪ್ರತಿಬಿಂಬ ಶುದ್ಧ ನೀರಿನಲ್ಲಷ್ಟೇ ಅಲ್ಲದೆ ಕೊಳಕು ನೀರಿನಲ್ಲೂ ಕಾಣುತ್ತದೆ. ನೀರು ಕೊಳಕಾಗಿದ್ದರೂ ಸೂರ್ಯನ ಬೆಳಕಿಗೆ ಕೊರತೆಯಾಗುವುದಿಲ್ಲ; ಕೊರತೆ ಇರುವುದು ನೀರಿನ ಶುದ್ಧತೆಯಲ್ಲಿ. ಅದೇ ರೀತಿ ದೇವರು ಎಲ್ಲರೊಳಗೂ ಇದ್ದಾನೆ. ಮನಸ್ಸು ಶುದ್ಧವಾಗಿದ್ದಾಗ ದೇವರ ಸಾನ್ನಿಧ್ಯವನ್ನು ಸ್ಪಷ್ಟವಾಗಿ ಅನುಭವಿಸಲು ಸಾಧ್ಯ ಎಂದು ಹೇಳಿದರು. ಭಜನಾ ಕಮ್ಮಟದಲ್ಲಿ ಕಲಿತದ್ದನ್ನು ಜೀವನದಲ್ಲಿ ಅಳವಡಿಸಿಕೊಂಡು ಭಗವಂತನ ಸ್ಮರಣೆಯನ್ನು ನಿರಂತರವಾಗಿ ಮುಂದುವರಿಸಬೇಕು. ಭಜನೆಯ ಮೂಲಕ ಮನಸ್ಸಿನ ಶುದ್ಧೀಕರಣ, ಜೀವನದ ಸಾರ್ಥಕತೆ ಹಾಗೂ ಸಮಾಜದ ಒಳಿತಿನತ್ತ ಹೆಜ್ಜೆ ಇಡಬೇಕು ಎಂದು ಡಾ. ಹೇಮಾವತಿ ವೀ. ಹೆಗ್ಗಡೆ ಕರೆ ನೀಡಿದರು. ಭಜನಾ ಕಮ್ಮಟದ ಸಂಚಾಲಕ ಜಿ. ಸುಬ್ರಹ್ಮಣ್ಯ ಪ್ರಸಾದ್ ಸ್ವಾಗತಿಸಿದರು. ವಿಕಾಸ್ ಆರಿಗ ಧನ್ಯವಾದ ಸಲ್ಲಿಸಿದರು.

# ಗಾಂಧಿಭವನದಲ್ಲಿ ಗಾಂಧಿ ಕುರಿತ ಜೀವನಗಾಥೆ: ಆಧುನಿಕ ಡಿಜಿಟಲ್ ಸ್ಪರ್ಶ




**ಬೆಂಗಳೂರು, ಅ.2:** ಮಹಾತ್ಮಾ ಗಾಂಧೀಜಿ ಜನ್ಮ ದಿನವಾದ ಗಾಂಧಿ ಜಯಂತಿ ಈ ಬಾರಿಯ ಬೆಂಗಳೂರಿನ ಗಾಂಧಿ ಭವನ ಇತಿಹಾಸಕ್ಕೆ ಅತ್ಯಂತ ವಿಶೇಷವಾದದ್ದು. ಗಾಂಧಿ ಕುರಿತ ಹೊಸ ತಂತ್ರಜ್ಞಾನದ ಸ್ಪರ್ಶ ಸಿಕ್ಕಿದ ಸುದಿನವಾಗಿದೆ.

ನನ್ನ ಜೀವನವೇ ಸಂದೇಶ ಎಂದು ಸಾರಿದ ಮಹಾತ್ಮ ಬಾಪುವಿನ ಬದುಕು ಇದೀಗ ಡಿಜಿಟಲ್ ಸ್ವರೂಪ ಪಡೆದುಕೊಂಡಿದೆ. ಕುಮಾರಪಾರ್ಕ್‌ನಲ್ಲಿರುವ ಗಾಂಧಿ ಭವನದಲ್ಲಿ ರಾಜ್ಯದ ಮೊದಲ ಡಿಜಿಟಲ್ ಮ್ಯೂಸಿಯಂ 'ಮಹಾತ್ಮನ ಪಯಣ' ಆರಂಭವಾಗಿದೆ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಗಾಂಧೀಜಿ ಮ್ಯೂಸಿಯಂನ್ನು ಇಂದು ಲೋಕಾರ್ಪಣೆ ಮಾಡಿದರು.

ಗಾಂಧಿ ಭವನದ 60 ವರ್ಷಗಳ ಇತಿಹಾಸದಲ್ಲಿ ಇದೇ ಮೊದಲು ಗಾಂಧೀಜಿಯ ಜೀವನವನ್ನು ಡಿಜಿಟಲ್ ರೂಪದಲ್ಲಿ ನೋಡಬಹುದೆ. ಇದನ್ನು ದೆಹಲಿಯ ರಾಷ್ಟ್ರೀಯ ಗಾಂಧಿ ಮ್ಯೂಸಿಯಂ ನಿರ್ದೇಶಕ ಡಾ. ಎ. ಅಣ್ಣಾಮಲೈ ಅವರು ವಿನ್ಯಾಸಗೊಳಿಸಿದ್ದಾರೆ. ಇಲ್ಲಿ ಗಾಂಧೀಜಿಯ ಬಾಲ್ಯದಿಂದ ಅಂತಿಮ ದಿನಗಳವರೆಗಿನ ಅಪರೂಪದ ಫೋಟೋಗಳು, ದಾಖಲೆಗಳು ಮತ್ತು ಪತ್ರಗಳಿವೆ. ಇದೇ ಮೊದಲ ಬಾರಿಗೆ ಗಾಂಧೀಜಿ ಪತ್ರಕರ್ತರ ಪಾತ್ರವನ್ನೂ ಸಹ ಅನಾವರಣಗೊಳಿಸಲಾಗಿದೆ.

ಈ ಮ್ಯೂಸಿಯಂನ ವಿಶೇಷತೆ ಬಗ್ಗೆ ಗಾಂಧೀ ಭವನದ ಸಲಹೆಗಾರ ಪ್ರೊಫೆಸರ್ ಜಿ.ಬಿ.ಬಸವರಾಜು ಅವರು ತಿಳಿಸಿದ್ದಾರೆ

ಈ ಮ್ಯೂಸಿಯಂನ ವಿಶೇಷ ಏನು ಗೊತ್ತಾ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿದರೆ ಸಾಕು, ಗಾಂಧೀಜಿಯ ಕಥೆ ಕನ್ನಡದಲ್ಲೇ ಕೇಳಬಹುದು..ಪ್ರತಿ ಫೋಟೋ ಮೇಲೆ ಕ್ಯೂಆರ್ ಕೋಡ್ ಇದೆ. ಮೊಬೈಲ್‌ನಲ್ಲಿ ಸ್ಕ್ಯಾನ್ ಮಾಡಿದರೆ ಕನ್ನಡ ಮತ್ತು ಇಂಗ್ಲಿಷ್ ನಲ್ಲಿ ಆಡಿಯೋ ವಿವರಣೆ ಬರುತ್ತದೆ. ಇಲ್ಲಿ ಸಬರಮತಿ ಆಶ್ರಮದ ಪ್ರತಿಕೃತಿಯನ್ನು ನಿರ್ಮಿಸಲಾಗಿದೆ. ರಾಷ್ಟ್ರೀಯ ಗ್ಯಾಲರಿಯ ಮಾದರಿಯಲ್ಲಿ ಫೋಟೋ ಗ್ಯಾಲರಿಯನ್ನು ಸಿದ್ಧಪಡಿಸಲಾಗಿದೆ.ಈ ಮ್ಯೂಸಿಯಂನಲ್ಲಿ ಹಲವು ಅಪರೂಪದ ಸಂಗ್ರಹಗಳಿವೆ. ಕರ್ನಾಟಕಕ್ಕೆ 1915 ರಿಂದ 1937 ರ ನಡುವೆ ಗಾಂಧೀಜಿ ಭೇಟಿ ನೀಡಿದ್ದ ಫೋಟೋಗಳು, ಆರ್.ಆರ್. ದಿವಾಕರ್ ಅವರ ಕೋರಿಕೆಯ ಮೇರೆಗೆ ಗಾಂಧೀಜಿ ಕನ್ನಡದಲ್ಲಿ ಬರೆದ ಸಂದೇಶ, ಹಿಟ್ಲರ್‌ಗೆ ಎರಡನೇ ಮಹಾಯುದ್ಧ ನಿಲ್ಲಿಸುವಂತೆ ಬರೆದ ಪತ್ರ, ಜೊತೆಗೆ ಗಾಂಧೀಜಿಯ ಅಣ್ಣನ ಅಪರೂಪದ ಭಾವಚಿತ್ರವೂ ಇದೆ. ಯಾವ ರೀತಿ ಗಾಂಧೀಜಿಯ ಜೀವನ ಇಡೀ ದೇಶವನ್ನು ಏಕತೆಯತ್ತ ಸಾಗುವಂತೆ ಮಾಡುತ್ತ ಹಾಗೂ ಗಾಂಧೀಜಿ ಸತ್ಯದ ಹಾದಿಯಲ್ಲಿ ಸವಾಲುಗಳು ಎದುರಾದರೂ ಹೇಗೆ ಸತ್ಯದ ತತ್ವದೊಂದಿಗೆ ತಮ್ಮ ಬದುಕನ್ನು ನಡೆಸಿದ್ದಾರೆ ಎಂದು ಕೊಪ್ಪಳದ ಗಾಂಧೀ ಬಳಗದ ಸದಸ್ಯರಾದ ಬಸವರಾಜು ಸವದಿ, ನಾಗರಾಜು ನಾಯ್ಕ್ ಗಾಂಧೀಯ ಬದುಕನ್ನು ಹಾಡಿ ಹೊಗಳಿದ್ದಾರೆ. ಇದು ಕೇವಲ ಮ್ಯೂಸಿಯಂ ಅಲ್ಲ, ಡಿಜಿಟಲ್ ಗ್ರಂಥಾಲಯವೂ ಹೌದು. ಗಾಂಧಿ ಭವನದ ಎರಡನೇ ಮಹಡಿಯಲ್ಲಿ ಸಾವಿರಾರು ಪುಸ್ತಕಗಳನ್ನು ಡಿಜಿಟಲೀಕರಣ ಮಾಡಿದೆ. ತಿಂಗಳಿಗೆ ಲಕ್ಷಕ್ಕೂ ಹೆಚ್ಚು ಪುಟಗಳನ್ನು ಸ್ಕ್ಯಾನ್ ಮಾಡುವ ಸಾಮರ್ಥ್ಯವಿದೆ. ನೂಲುವ ಚರಕದಂತೆ ಈಗ ಸ್ಕ್ಯಾನಿಂಗ್ ಮೂಲಕ ಜ್ಞಾನ ಹರಡುತ್ತಿದ್ದಾರೆ.

ಒಂದು ಕಾಲದಲ್ಲಿ ಸ್ವಾತಂತ್ರ್ಯ ಹೋರಾಟಗಾರರು, ರೈತರು, ಸಾಹಿತಿಗಳು ಸೇರುತ್ತಿದ್ದ ಗಾಂಧಿ ಭವನ ಈಗ ಯುವಪೀಳಿಗೆಗೆ ಡಿಜಿಟಲ್ ಮೂಲಕ ಬಾಪುವನ್ನು ಪರಿಚಯಿಸುತ್ತಿದೆ.

ಗಾಂಧಿ ತತ್ವವನ್ನು ಮುಂದಿನ ಪೀಳಿಗೆಗೆ ತಲುಪಿಸುವ ಈ ಪ್ರಯತ್ನಕ್ಕೆ ಗಾಂಧಿ ಜಯಂತಿಯಂದು ನಿಜವಾದ ಗೌರವ ಸಲ್ಲಿಸಿದಂತಾಗಿದೆ.

### ನಂತರದ ಬೆಳವಣಿಗೆಯಲ್ಲಿ ಅವರ ಪಾತ್ರವಿಲ್ಲ: ಎಚ್.ಡಿ. ಕುಮಾರಸ್ವಾಮಿ

# ನೈಸ್ ಮೂಲ ಒಪ್ಪಂದಕ್ಕೆ ಸಹಿ ಹಾಕಿದ್ದ ಸಿದ್ದರಾಮಯ್ಯ



**ಬೆಂಗಳೂರು, ಅ.2:** ನೈಸ್ ಯೋಜನೆಯ ಮೂಲ ಒಪ್ಪಂದಕ್ಕೆ ಸಹಿ ಹಾಕಿದ್ದು ಆಗಿನ ಹಣಕಾಸು ಸಚಿವರಾಗಿದ್ದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಆರೋಪಿಸಿದರು.

ಜೆಡಿಎಸ್ ಕಚೇರಿಯಲ್ಲಿಂದು ನಡೆದ ರಾಷ್ಟ್ರಪಿತ ಮಹಾತ್ಮಗಾಂಧೀಜಿ ಹಾಗೂ ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿಯವರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಆಗ ಮುಖ್ಯಮಂತ್ರಿಯಾಗಿದ್ದ ದೇವೇಗೌಡರು ಎಂ.ಓ.ಯು.ಗೆ ಮಾತ್ರ ಸಹಿ ಹಾಕಿದ್ದರು. ನಂತರ ನಡೆದ ಬೆಳವಣಿಗೆಗಳಲ್ಲಿ ಅವರ ಪಾತ್ರವಿಲ್ಲ ಎಂದರು.

ನೈಸ್ ಯೋಜನೆ ಹೆಸರಿನಲ್ಲಿ ಅಶೋಕ್ ಖೇಣಿ ಮತ್ತು ಡಿ.ಕೆ. ಶಿವಕುಮಾರ್ ಲೂಟಿ ಮಾಡಲು ಹೊರಟಿದ್ದಾರೆ ಎಂದು ಅವರು ದೂರಿದರು. ನೈಸ್ ಯೋಜನೆಯನ್ನು ಜಾರಿ ಮಾಡಿರುವ ಸಂಸ್ಥೆಯನ್ನು ಆಂಧ್ರ ಪ್ರದೇಶದ ಉದ್ಯಮಿಯೊಬ್ಬರು ಖರೀದಿಸಲು ಮುಂದಾಗಿದ್ದಾರೆ ಎಂದು ಹೇಳಿದರು.

ನನಗೆ ಯಾರ ಮೇಲೂ ವೈಯುಕ್ತಿಕ ದ್ವೇಷವಿಲ್ಲ. ಜಾತಿ ವ್ಯಾಮೋಹಕ್ಕಿಂತ ನಾಡಿನ ಹಿತ ಮುಖ್ಯ. ಹಾಗಾಗಿ ನೈಸ್ ವಿರುದ್ಧ ಹೋರಾಟ ನಡೆಸಿದ್ದೇನೆ. ನೈಸ್ ಸಂಸ್ಥೆಯ ಅಶೋಕ್ ಖೇಣಿ ನೈಸ್ ಯೋಜನೆಯನ್ನು ವಶಪಡಿಸಿಕೊಳ್ಳಲು ವಿಧಾನಸೌಧ, ವಿಕಾಸಸೌಧವನ್ನು ಬರೆದು ಕೊಡಬೇಕಾಗುತ್ತದೆಂದು ದುರಂಹಕಾರದಿಂದ ಮಾತನಾಡಿದ್ದಾರೆ ಎಂದು ಟೀಕಿಸಿದರು.

ನೈಸ್ ಸಂಸ್ಥೆ ಯೋಜನೆಗೆ ಸಂಬಂಧಿಸಿದಂತೆ ನಾನು ಕೇಳಿರುವ ಪ್ರಶ್ನೆಗಳಿಗೆ ಉತ್ತರ ಕೊಡದೆ ಉದ್ಧಟತನ ತೋರುತ್ತಿದ್ದಾರೆ ಎಂದು ದೂರಿದ ಅವರು, ನನ್ನ ಕುಟುಂಬದವರು ಹಾಗೂ ನನ್ನ ಸಹೋದರರು ಕಾನೂನು ಬಾಹಿರವಾಗಿ ಆಸ್ತಿ ಮಾಡಿದ್ದರೆ ಇವರದ್ದೇ ಸರ್ಕಾರವಿದೆ, ಕ್ರಮ ಕೈಗೊಳ್ಳಲಿ ಎಂದು ಸವಾಲು ಹಾಕಿದರು.

## ಭೂಮಾಪಕರ ಪರೀಕ್ಷೆ ಸುಗಮ, ಶೇ.76ರಷ್ಟು ಹಾಜರು

**ಬೆಂಗಳೂರು,ಅ.2:** ಉಳಿಕೆ ಮೂಲ ವೃಂದದ ಭೂಮಾಪಕರ ನೇಮಕಾತಿಗೆ ಶುಕ್ರವಾರ ಆಯೋಜಿಸಿದ್ದ ಲಿಖಿತ ಪರೀಕ್ಷೆ ವ್ಯವಸ್ಥಿತವಾಗಿ ನಡೆಯಿತು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯ ನಿರ್ವಾಹಕ ನಿರ್ದೇಶಕ ಹೆಚ್.ಪ್ರಸನ್ನ ತಿಳಿಸಿದ್ದಾರೆ. ಒಟ್ಟು 560 ಭೂಮಾಪಕರ ಹುದ್ದೆಗೆ 92,701 ಮಂದಿ ಅರ್ಜಿ ಸಲ್ಲಿಸಿದ್ದರು. ಇವರ ಪೈಕಿ ಬೆಳಗಿನ ಸಾಮಾನ್ಯ ಜ್ಞಾನ ಪತ್ರಿಕೆಯ ಪರೀಕ್ಷೆಗೆ 70,061 ಮಂದಿ ಭಾಗವಹಿಸಿದ್ದರು. ಮಧ್ಯಾಹ್ನ ನಡೆದ ನಿರ್ದಿಷ್ಟ ಪತ್ರಿಕೆಯ ಪರೀಕ್ಷೆಗೆ 69,559 ಮಂದಿ ಹಾಜರಿದ್ದರು ಎಂದು ವಿವರಿಸಿದ್ದಾರೆ. ಒಟ್ಟು 225 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಿತು. ಪರೀಕ್ಷೆ ಮುಗಿದ ತಕ್ಷಣವೇ ಅಭ್ಯರ್ಥಿಗಳ ಓಎಂಆರ್ ಪ್ರತಿಗಳನ್ನು ಪರೀಕ್ಷಾ ಕೇಂದ್ರವಾರು ಸ್ಕ್ಯಾನ್ ಮಾಡಿ ವೆಬ್‌ಸೈಟ್‌ಗೆ ಅಪ್ ಲೋಡ್ ಮಾಡುವ ಪ್ರಕ್ರಿಯೆ ಆರಂಭವಾಗಿದೆ. ಶನಿವಾರ ಮಧ್ಯಾಹ್ನದ ವೇಳೆಗೆ ಈ ಪ್ರಕ್ರಿಯೆ ಮುಗಿಯಲಿದೆ ಎಂದರು.

## ಪಿಜಿಸಿಇಟಿ: ಶುಲ್ಕ ಪಾವತಿಗೆ ಅ.7ರವರೆಗೆ ದಿನಾಂಕ ವಿಸ್ತರಣೆ



ಬೆಂಗಳೂರು, ಅ.2: ಎಂಬಿಎ, ಎಂಸಿಎ, ಎಂಇ, ಎಂ.ಟೆಕ್, ಎಂ ಆರ್ಕ್ ಕೋರ್ಸ್ ಗಳ ಪ್ರವೇಶಕ್ಕೆ ಮೊದಲ ಸುತ್ತಿನಲ್ಲಿ ಸೀಟು ಹಂಚಿಕೆಯಾಗಿರುವ ಅಭ್ಯರ್ಥಿಗಳಿಗೆ ಶುಲ್ಕ ಪಾವತಿಸಲು ಅ.7ರವರೆಗೆ ದಿನಾಂಕ ವಿಸ್ತರಿಸಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ. ಶುಲ್ಕ ಪಾವತಿ ನಂತರ ಸೀಟು ಖಾತರಿ ಚೀಟಿ ಡೌನ್‌ಲೋಡ್ ಮಾಡಿಕೊಂಡು ಕಾಲೇಜಿನಲ್ಲಿ ಪ್ರವೇಶ ಪಡೆಯಲು ಅ.8ರವರೆಗೆ ಅವಕಾಶ ನೀಡಲಾಗಿದೆ ಎಂದು ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

### ಐದು ಪಾಲಿಕೆಗಳ ಇಂಜಿನಿಯರ್‌ಗಳಿಗೆ ಸಚಿವ ಕೃಷ್ಣಬೈರೇಗೌಡ ತರಾಟೆ; ಅಧಿಕಾರಿಗಳ ಕಾರ್ಯವೈಖರಿಗೆ ಅಸಮಾಧಾನ

# 6 ತಿಂಗಳಲ್ಲೇ ಮತ್ತೆ ಗುಂಡಿಬಿದ್ದ ಡಾಂಬರೀಕರಣವಾದ ರಸ್ತೆಗಳು



**ಬೆಂಗಳೂರು, ಅ.2:** ಕಳೆದ ಆರು ತಿಂಗಳಲ್ಲಿ ಡಾಂಬರೀಕರಣ ಮಾಡಿರುವ ರಸ್ತೆಗಳು ಒಂದೇ ಮಳೆಗೆ ಗುಂಡಿಗಳಾಗಿ ಮಾರ್ಪಟ್ಟಿರು ವುದಕ್ಕೆ ಬೆಂಗಳೂರು ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಅವರು ಐದು ನಗರಪಾಲಿಕೆಗಳ ಇಂಜಿನಿಯರ್ ಗಳನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ನಗರದ ರಸ್ತೆ ಕಾಮಗಾರಿಗಳ ಗುಣಮಟ್ಟದ ಬಗ್ಗೆ ನಡೆದ ಸಭೆಯಲ್ಲಿ ಅಧಿಕಾರಿಗಳ ಕಾರ್ಯವೈಖರಿ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಸಚಿವರು, ಕಳೆದ ಮೂರು–ನಾಲ್ಕು ವರ್ಷಗಳಿಂದ ನಗರದ ಹಲವು ರಸ್ತೆಗಳ ಪರಿಸ್ಥಿತಿ ಬದಲಾಗಿಲ್ಲ. ಹೊಸದಾಗಿ ಡಾಂಬರೀಕರಣ ಮಾಡಿದ ರಸ್ತೆಗಳಲ್ಲೇ ಕೆಲವೇ ತಿಂಗಳಲ್ಲಿ ಗುಂಡಿಗಳು ಕಾಣಿಸಿಕೊಳ್ಳುತ್ತಿರುವುದು ಏಕೆ ಎಂದು ಇಂಜಿನಿಯರ್ ಗಳನ್ನು ಪ್ರಶ್ನಿಸಿದರು.

ರಸ್ತೆ ಡಾಂಬರೀಕರಣಕ್ಕೆ ಟೆಂಡರ್ ನೀಡುವಾಗ ಗುತ್ತಿಗೆದಾರರಿಗೆ ಎರಡು ವರ್ಷಗಳ ಗ್ಯಾರಂಟಿ ನಿಗದಿಪಡಿಸಲಾ ಗುತ್ತದೆ. ಆದರೆ, ಕಾಮಗಾರಿ ಮುಗಿದು ಆರು ತಿಂಗಳು ಕಳೆಯುವಷ್ಟರಲ್ಲಿ ರಸ್ತೆಗಳಲ್ಲಿ ಗುಂಡಿಗಳು ಕಾಣಿಸಿ ಕೊಳ್ಳುತ್ತಿವೆ. ಇದು ಕಾಮಗಾರಿಯ ಗುಣಮಟ್ಟದ ಬಗ್ಗೆ ಗಂಭೀರ ಪ್ರಶ್ನೆ ಮೂಡಿಸುವುದಲ್ಲದೆ, ಸರ್ಕಾರಕ್ಕೂ ಕೆಟ್ಟ ಹೆಸರು ತರುತ್ತಿದೆ ಎಂದು ಸಚಿವರು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

**ಗುಣಮಟ್ಟ ಪರಿಶೀಲನೆ ಎಲ್ಲಿ?**

ರಸ್ತೆ ಡಾಂಬರೀಕರಣದ ಸಂದರ್ಭ ದಲ್ಲಿ ಮುಖ್ಯ ಇಂಜಿನಿಯರ್‌ಗಳು ಸ್ಥಳಕ್ಕೆ ತೆರಳಿ ಕಾಮಗಾರಿಯ ಗುಣಮಟ್ಟವನ್ನು ಸಮರ್ಪಕವಾಗಿ ಪರಿಶೀಲಿಸುತ್ತಿಲ್ಲ. ಕೇವಲ ಕಡತಗಳಲ್ಲಿ ಕಾಮಗಾರಿ ಪೂರ್ಣಗೊಂಡಿದೆ ಎಂದು ತೋರಿಸುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ರಸ್ತೆ ನಿರ್ಮಾಣದ ಪ್ರತಿಯೊಂದು ಹಂತದಲ್ಲೂ ಗುಣಮಟ್ಟ ಖಚಿತಪಡಿಸಿಕೊಳ್ಳಬೇಕು ಎಂದು ಸಚಿವರು ಸೂಚಿಸಿದರು.

**ವೈಟ್‌ಟ್ಯಾಪಿಂಗ್‌ಗೂ ತರಾಟೆ:**

ನಗರದಲ್ಲಿ ನಡೆಯುತ್ತಿರುವ ವೈಟ್‌ಟ್ಯಾಪಿಂಗ್ ಕಾಮಗಾರಿಗಳ ಬಗ್ಗೆಯೂ ಸಚಿವರು ಅಧಿಕಾರಿಗಳಿಗೆ ಕ್ಲಾಸ್ ತೆಗೆದುಕೊಂಡರು. ಬಿ–ಸ್ಮೈಲ್ ಸಂಸ್ಥೆಯ ಮುಖ್ಯಸ್ಥರು ಕಾಮಗಾರಿಗಳ ಗುಣಮಟ್ಟವನ್ನು ಸಮರ್ಪಕವಾಗಿ ಪರಿಶೀಲಿಸುತ್ತಿಲ್ಲ ಎಂದು ನೇರವಾಗಿ ಸಂಸ್ಥೆಯ ಮುಖ್ಯ ಇಂಜಿನಿಯರ್‌ಗೆ ಸೂಚಿಸಿದರು.

ವೈಟ್‌ಟ್ಯಾಪಿಂಗ್ ಕಾಮಗಾರಿಗಳು ನಿಗದಿತ ಅವಧಿಯಲ್ಲಿ ಪೂರ್ಣಗೊಳ್ಳ ದಿರುವುದರಿಂದ ನಗರದ ಹಲವು ಭಾಗಗಳಲ್ಲಿ ಸಂಚಾರ ದಟ್ಟಣೆ ಹೆಚ್ಚಾಗಿದೆ. ಕಾಮಗಾರಿ ವಿಳಂಬದಿಂದ ಸಾರ್ವಜನಿಕರಿಗೆ ತೊಂದರೆಯಾಗು ತ್ತಿರುವ ಹಿನ್ನೆಲೆಯಲ್ಲಿ, ಬಾಕಿ ಇರುವ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಸಚಿವರು ಸೂಚಿಸಿದರು.

ಅದೇ ವೇಳೆ ವೈಟ್‌ಟ್ಯಾಪಿಂಗ್ ಕಾಮಗಾರಿಗಳ ಗುಣಮಟ್ಟವನ್ನೂ ಕಟ್ಟುನಿಟ್ಟಾಗಿ ಪರಿಶೀಲಿಸಬೇಕು. ಕಾಮಗಾರಿ ಪೂರ್ಣಗೊಳಿಸುವ ಆತುರದಲ್ಲಿ ಗುಣಮಟ್ಟದಲ್ಲಿ ಯಾವುದೇ ರಾಜಿಯಾಗಬಾರದು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

**ಹೊಸ ರಸ್ತೆ ಗುಂಡಿ ಬಿದ್ದರೆ ಕ್ರಮ:** ಮುಂದಿನ ದಿನಗಳಲ್ಲಿ ಹೊಸದಾಗಿ ಡಾಂಬರೀಕರಣಗೊಂಡ ರಸ್ತೆಯಲ್ಲಿ ಗುಂಡಿ ಅಥವಾ ಕಾಮಗಾರಿಯ ದೋಷ ಕಂಡುಬಂದರೆ ಗುತ್ತಿಗೆದಾರರ ವಿರುದ್ಧ ಮುಲಾಜಿಲ್ಲದೆ ಕಾನೂನು ಕ್ರಮ ಕೈಗೊಳ್ಳಬೇಕು



**ಮೈಸೂರು ದಸರಾ ಚಟುವಟಿಕೆ:** ಶುಕ್ರವಾರ ಮೈಸೂರಿನ ಜಂಬೂಸವಾರಿ ಮಾರ್ಗದಲ್ಲಿ ದಸರಾ ಆನೆಗಳ ದೈನಂದಿನ ತಾಲೀಮಿನ ನೇತೃತ್ವವನ್ನು 'ಏಕಲವ್ಯ' ಆನೆಯು ವಹಿಸಿತ್ತು ಮತ್ತು ಸಾರ್ವಜನಿಕರ ಗಮನ ಸೆಳೆಯಿತು.

### ಭಾರತೀಯ ಕೃಷಿ ಸಂಶೋಧನಾ ಮಂಡಳಿ ಮತ್ತು ಭಾರತೀಯ ಆಹಾರ ನಿಗಮ ನಡುವೆ ಒಪ್ಪಂದ

# ಗೋದಿ, ಅಕ್ಕಿ ದಾಸ್ತಾನಿನಲ್ಲಿ ಕೀಟ ನಿಯಂತ್ರಣಕ್ಕೆ ಸಾಂಪ್ರದಾಯಿಕ ಕ್ರಮ

**ಬೆಂಗಳೂರು, ಅ.2:** ಗೋದಿ ಮತ್ತು ಅಕ್ಕಿ ಸಂಗ್ರಹಣೆಯಲ್ಲಿ ಕೀಟ ನಿಯಂತ್ರಣಕ್ಕಾಗಿ ಬಳಸಲಾಗುತ್ತಿರುವ ಸಾಂಪ್ರದಾಯಿಕ ರಾಸಾಯನಿಕ ಧೂಮೀಕರಣಕ್ಕೆ ಸುರಕ್ಷಿತ ಹಾಗೂ ಪರಿಸರಸ್ನೇಹಿ ಪರ್ಯಾಯಗಳನ್ನು ಅಭಿವೃದ್ಧಿಪಡಿಸಲು ಭಾರತೀಯ ಕೃಷಿ ಸಂಶೋಧನಾ ಮಂಡಳಿ–ಐಸಿಎಆರ್ ಮತ್ತು ಭಾರತೀಯ ಆಹಾರ ನಿಗಮ–ಎಫ್‌ಸಿಐ ಒಪ್ಪಂದಕ್ಕೆ ಸಹಿ ಹಾಕಿವೆ.

ನೈಟ್ರೋಜನ್ ಅನಿಲ, ಕಾರ್ಬನ್ ಡೈಆಕ್ಸೈಡ್ ಹಾಗೂ ಕಾರ್ಬನ್ ಡೈಆಕ್ಸೈಡ್ ಮತ್ತು ಫಾಸ್ಫಿನ್ ಸಂಯೋಜನೆಯನ್ನು ಬಳಸಿಕೊಂಡು ಸಂಗ್ರಹಿತ ಗೋಧಿ ಮತ್ತು ಅಕ್ಕಿಯಲ್ಲಿನ ಕೀಟ ನಿಯಂತ್ರಣಕ್ಕೆ ಸಂಬಂಧಿಸಿದಂತೆ ವಿವಿಧ ಪ್ರಯೋಗಗಳನ್ನು ನಡೆಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ದಶಕಗಳಿಂದ ದೇಶದ ಆಹಾರ ಧಾನ್ಯ ಸಂಗ್ರಹಣೆಯಲ್ಲಿ ಕೀಟ ನಿಯಂತ್ರಣಕ್ಕಾಗಿ ಅಲ್ಯೂಮಿನಿಯಂ ಫಾಸ್ಫೈಡ್ ಮತ್ತು ಮ್ಯಾಲಥಿಯಾನ್ ನಂತಹ ರಾಸಾಯನಿಕಗಳನ್ನು ವ್ಯಾಪಕವಾಗಿ ಬಳಸಲಾಗುತ್ತಿದೆ. ಆದರೆ ನಿರಂತರ ಬಳಕೆಯಿಂದ ಕೀಟಗಳಲ್ಲಿ ರಾಸಾಯನಿಕ ಪ್ರತಿರೋಧ ಹೆಚ್ಚುತ್ತಿರುವುದು ಕಂಡುಬಂದಿದೆ. ಇದರಿಂದ ಧೂಮೀಕರಣದ ಸುತ್ತುಗಳು ಮತ್ತು ನಿರ್ವಹಣಾ ವೆಚ್ಚವೂ ಹೆಚ್ಚಾಗುತ್ತಿದೆ. ಇದರ ಜೊತೆಗೆ, ಕಾರ್ಮಿಕರ ಆರೋಗ್ಯದ ಮೇಲೆ ಪರಿಣಾಮ, ಪರಿಸರದ ಮೇಲೆ ದುಷ್ಪರಿಣಾಮ ಹಾಗೂ ಧೂಮೀಕರಣದ ನಂತರ ಉಳಿಯ ಬಹುದಾದ ರಾಸಾಯನಿಕ ಅವಶೇಷಗಳ ಬಗ್ಗೆಯೂ ಕಳವಳ ವ್ಯಕ್ತವಾಗಿದೆ.

ಮೊದಲ ಹಂತದಲ್ಲಿ ಲೋಹದ ಸೈಲೋಗಳಲ್ಲಿ ಸಂಗ್ರಹಿಸಿರುವ ಗೋಧಿಗೆ ಶೇ.99ಕ್ಕಿಂತ ಹೆಚ್ಚಿನ ಶುದ್ಧತೆಯ ನೈಟ್ರೋಜನ್ ಅನಿಲ ಬಳಸಿ ಕೀಟ ನಿಯಂತ್ರಣ, ಎಫ್‌ಸಿಐ ಮತ್ತು ಕೇಂದ್ರ ಉಗ್ರಾಣ ನಿಗಮದ ಗೋದಾಮುಗಳಲ್ಲಿ ಚೀಲಗಳಲ್ಲಿ ಸಂಗ್ರಹಿಸಿರುವ ಗೋದಿ ಮತ್ತು ಅಕ್ಕಿಗೆ ಕಾರ್ಬನ್ ಡೈಆಕ್ಸೈಡ್ ಹಾಗೂ ಫಾಸ್ಫಿನ್ ಸಂಯೋಜನೆ ಬಳಕೆ ಸೇರಿದಂತೆ ಮೂರು ಪ್ರಮುಖ ಪ್ರಯೋಗಗಳನ್ನು ನಡೆಸಲಾಗುವುದು ಎಂದು ತಿಳಿಸಲಾಗಿದೆ.

# ಅಲ್ಪಸಂಖ್ಯಾತರ ಮತ ಕಸಿಯಲು ಷಡ್ಯಂತ್ರ ರೂಪಿಸಿ ಪುರಾವೆ ಸಮೇತ ಸಿಕ್ಕಿಬಿದ್ದ ಬಿಜೆಪಿ ಬಿಎಲ್‌ಓಗಳು

**ಬೆಂಗಳೂರು, ಅ.2:** ರಾಜ್ಯದಲ್ಲಿ ನಡೆಯುತ್ತಿರುವ ಎಸ್‌ಐಆರ್ ಪ್ರಕ್ರಿಯೆಯಲ್ಲಿ ಬಿಜೆಪಿ ನಾಯಕರು ಫಾರ್ಮ್–7ಅನ್ನು ದುರ್ಬಳಕೆ ಮಾಡಿಕೊಳ್ಳುತ್ತಿರುವುದು ಪುರಾವೆ ಸಮೇತ ಪತ್ತೆಯಾಗಿದೆ. ಈ ಫಾರ್ಮ್–7 ಮೂಲಕ ನಿರ್ದಿಷ್ಟ ಅಲ್ಪಸಂಖ್ಯಾತ ಮತದಾರರನ್ನು ಗುರಿಯಾಗಿಸಿಕೊಂಡು, ಮತಪಟ್ಟಿಯಲ್ಲಿ ಅವರ ಹೆಸರುಗಳನ್ನು ಡಿಲೀಟ್ ಮಾಡುವ ವ್ಯವಸ್ಥಿತ ಸಂಚು ರೂಪಿಸಿದ್ದಾರೆ ಎಂಬುದು ಈಗ ಬಟಾಬಯಲಾಗಿದೆ. ರಾಜ್ಯದ ನಾನಾ ಭಾಗಗಳಲ್ಲಿ ಇಂತಹ ಷಡ್ಯಂತ್ರ ಎಸಗಿದ್ದ ಹಲವಾರು ಬಿಜೆಪಿ ಬಿಎಲ್‌ಎಗಳು ಸಿಕ್ಕಿಬಿದ್ದಿದ್ದಾರೆ.

ರಾಜಕೀಯ ಲಾಭದ ದುಷ್ಟ ಉದ್ದೇಶದಿಂದ, ಅಲ್ಪಸಂಖ್ಯಾತ ಸಮುದಾಯದ, ಅದರಲ್ಲೂ ನಿರ್ದಿಷ್ಟವಾಗಿ ಮುಸ್ಲಿಮ್ ಮತದಾರರ ಹೆಸರುಗಳನ್ನು ಮತಪಟ್ಟಿಯಿಂದ ಶಾಶ್ವತವಾಗಿ ತೆಗೆದುಹಾಕಲು ಪೂರ್ವ ಮುದ್ರಿತ ಫಾರ್ಮ್–7 ಅರ್ಜಿಗಳನ್ನು ಬಳಸಿ ಬಿಜೆಪಿ ಬಿಎಲ್‌ಎಗಳು ಆಕ್ಷೇಪಣೆಗಳನ್ನು ಸಲ್ಲಿಸಿದ್ದಾರೆ. ಗುಂಪು–ಗುಂಪಾಗಿ ಮತದಾರರ ಹೆಸರನ್ನು ಅಳಿಸಲು ಅರ್ಜಿಗಳನ್ನು ಸಲ್ಲಿಸಿದ್ದಾರೆ.

ಕೊಡಗು ಜಿಲ್ಲೆಯ ಮಡಿಕೇರಿ ವಿಧಾನಸಭಾ ಕ್ಷೇತ್ರಕ್ಕೆ ಸೇರಿದ ಬ್ಯಾಡಗೊಟ್ಟದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಬೂತ್ ಸಂಖ್ಯೆ 21ರಲ್ಲಿ ಇಂತಹದೊಂದು ಕುತಂತ್ರ ಬೆಳಕಿಗೆ ಬಂದಿದೆ. ಅಲ್ಲಿ ಸೆಪ್ಟೆಂಬರ್ 23ರಂದು ಬರೋಬ್ಬರಿ 63 ಮುಸ್ಲಿಮ್ ಮತದಾರರನ್ನು ಗುರಿಯಾಗಿಸಿಕೊಂಡು ಫಾರ್ಮ್–7 ಅರ್ಜಿಗಳನ್ನು ಬಿಎಲ್‌ಒಗೆ ಬಿಎಲ್‌ಎ ಸಲ್ಲಿಸಿದ್ದಾರೆ. ಆ ಅರ್ಜಿಗಳಲ್ಲಿ ಮತದಾರರ ಹೆಸರು, ವಿಳಾಸ ಹಾಗೂ ಎಪಿಕ್ ಸಂಖ್ಯೆಗಳನ್ನು ಮುಂಚಿತವಾಗಿಯೇ ಕಂಪ್ಯೂಟರ್‌ನಲ್ಲಿ ಮುದ್ರಿಸಿ ಸಿದ್ಧಪಡಿಸಲಾಗಿತ್ತು. ಈ ಅರ್ಜಿಗಳನ್ನು ತಂದಿಟ್ಟ ಬಿಜೆಪಿ ಕಾರ್ಯಕರ್ತರನ್ನು ವರದಿಗಾರರು ವಿಚಾರಿಸಿದಾಗ, ಈ ಮುದ್ರಿತ ಫಾರ್ಮ್–7 ಟೂಲ್‌ಕಿಟ್‌ಗಳನ್ನು ಸೋಮವಾರಪೇಟೆಯ ಬಿಜೆಪಿ ಕಚೇರಿಯಿಂದ ನೀಡಲಾಗಿತ್ತು ಎಂಬ ಆಘಾತಕಾರಿ ಸತ್ಯ ಬಯಲಾಗಿದೆ.

ಬೆಳಗಾವಿ ಉತ್ತರ ಕ್ಷೇತ್ರದ 120ರಿಂದ 128ನೇ ಮತಗಟ್ಟೆಗಳ ವ್ಯಾಪ್ತಿಯಲ್ಲಿ ಮುಸ್ಲಿಮ್ ಮತದಾರರ ವಿರುದ್ಧ ಸುಮಾರು 380 ಅರ್ಜಿಗಳನ್ನು ಸಲ್ಲಿಸಲಾಗಿದ್ದು, ಒಟ್ಟಾರೆಯಾಗಿ ಕ್ಷೇತ್ರಾದ್ಯಂತ 600ಕ್ಕೂ ಹೆಚ್ಚು ಮತದಾರರ ಹೆಸರು ಅಳಿಸುವಿಕೆಗೆ ಅರ್ಜಿಗಳನ್ನು ತಂದು ಸುರಿಯಲಾಗಿತ್ತು ಎಂಬುದು ಮತಕಾವಲು ಸಮಿತಿ ನಡೆಸಿದ ಪರಿಶೀಲನೆಯಲ್ಲಿ ಕಂಡುಬಂದಿದೆ. ಅಧಿಕಾರಿಗಳ ಮರುಪರಿಶೀಲನೆಯ ನಂತರ ಆ ಅರ್ಜಿಗಳನ್ನು ತಡೆಹಿಡಿಯಲಾಗಿದೆ. ಅದೇ ರೀತಿ, ಬಬಲೇಶ್ವರ ಕ್ಷೇತ್ರದಲ್ಲೂ ನಡೆದಿದೆ.

ಶಿವಮೊಗ್ಗದ ಶಿವಂ ಹುಬ್ಬಳ್ಳಿಯಲ್ಲಿ ಬಿಜೆಪಿ ಏಜೆಂಟ್‌ಗಳು ಸಲ್ಲಿಸಿದ ನಕಲಿ ಅರ್ಜಿಗಳು ಹಾಗೂ ಭಾಲ್ಕಿ ಕ್ಷೇತ್ರದಲ್ಲಿ ಒಬ್ಬನೇ ವ್ಯಕ್ತಿ 30ಕ್ಕೂ ಹೆಚ್ಚು ಅರ್ಜಿಗಳನ್ನು ಸಲ್ಲಿಸಿರುವುದು ಪತ್ತೆಯಾಗಿರುವುದು ಈ ಸಂಚಿನ ಭೀಕರತೆಯನ್ನು ಬಿಚ್ಚಿಡುತ್ತದೆ. ಈ ರೀತಿಯ ಅಕ್ರಮ ಆಕ್ಷೇಪಣಾ ಅರ್ಜಿ ಸಲ್ಲಿಕೆಗಳು ರಾಜ್ಯಾದ್ಯಂತ ನಡೆದಿದೆ. ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಹೇಳಿರುವಂತೆ, ರಾಜ್ಯದಲ್ಲಿ ಒಟ್ಟು 45ರಿಂದ 50 ಲಕ್ಷ ಮತದಾರರನ್ನು ಡಿಲೀಟ್ ಮಾಡಲು ಫಾರ್ಮ್–7 ಅರ್ಜಿಗಳನ್ನು ಬಿಜೆಪಿ ದುರುಪಯೋಗ ಮಾಡಿಕೊಂಡಿದೆ.

**ಮತದಾರರ ಪಟ್ಟಿಯಿಂದ ಕೆಲವೊಂದು ಸಮುದಾಯದವರ ಹೆಸರುಗಳನ್ನು ಅಳಿಸಲಾಗುತ್ತಿದೆ ಎಂಬ ಗಂಭೀರ ಆರೋಪದ ಹಿನ್ನೆಲೆಯಲ್ಲಿ ಭಾರತದ ಚುನಾವಣಾ ಆಯೋಗವು ನಮೂನೆ 7ರ ನೈಜತೆಯ ಪರಿಶೀಲನೆಗೆ ಮುಂದಾಗಿದೆ. ದೂರು ಸಲ್ಲಿಸಿ ಸುಳ್ಳು ಘೋಷಣೆ ಮಾಡಿದ ಅರ್ಜಿದಾರರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ವಿ. ಅನ್ಬುಕುಮಾರ್ ಅವರು ಎಲ್ಲಾ ಜಿಲ್ಲಾ ಚುನಾವಣಾಧಿಕಾರಿಗಳು, ಜಿಲ್ಲಾ ಉಪ ಚುನಾವಣಾ ಆಯುಕ್ತರು, ಹೆಚ್ಚುವರಿ ಚುನಾವಣಾಧಿಕಾರಿಗಳು, 224 ವಿಧಾನಸಭಾ ಕ್ಷೇತ್ರಗಳ ಚುನಾವಣಾ ನೋಂದಣಾಧಿಕಾರಿಗಳು, ಜಿಬಿಎ ವ್ಯಾಪ್ತಿಯ ಮುಖ್ಯ ಚುನಾವಣಾ ಆಯುಕ್ತರು, ನಗರ ಪಾಲಿಕೆಗಳ ಆಯುಕ್ತರಿಗೆ ನಿರ್ದೇಶನ ನೀಡಿದ್ದಾರೆ.**

**ಇದರ ಬೆನ್ನಲ್ಲೇ ಸಂಬಂಧಪಡದವರು ನಮೂನೆ 7 ಅನ್ನು ಸಲ್ಲಿಸಿ ಬಿಎಲ್‌ಓಗಳಿಗೆ ತಪ್ಪು ಮಾಹಿತಿ ನೀಡಿದ ಆರೋಪವಿರುವ ಹಾಗೂ ಸಾಮೂಹಿಕವಾಗಿ ನಮೂನೆಗಳನ್ನು ಸಲ್ಲಿಸಿದ ಆರೋಪಕ್ಕೆ ಒಳಗಾಗಿರುವವರ ವಿರುದ್ಧ ರಾಜ್ಯದ ಕೆಲವೆಡೆ ಕಾನೂನು ರೀತಿ ಕ್ರಮ ಕೈಗೊಳ್ಳಲಾಗುತ್ತಿದೆ.**

**ಎಸ್‌ಐಆರ್ ಪ್ರಕ್ರಿಯೆ ಶುರುವಾದ ಸಂದರ್ಭದಲ್ಲಿ ಕಲ್ಯಾಣಮಂಟಪ, ಸಮುದಾಯ ಭವನಗಳಲ್ಲಿ ಮತದಾರರನ್ನು ಸೇರಿಸಿ ಕಾಂಗ್ರೆಸ್ ಪಕ್ಷ ಮುಖಂಡರು ಅರ್ಜಿಗಳನ್ನು ವಿತರಿಸಿದ್ದು, ಅದರ ಬಗ್ಗೆ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಜೆಡಿಎಸ್ ಚುನಾವಣಾ ಆಯೋಗಕ್ಕೆ ದೂರು ನೀಡಿತ್ತು. ಅಲ್ಲದೆ, ಭಾರತದ ಚುನಾವಣಾ ಆಯೋಗಕ್ಕೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಸೇರಿದಂತೆ ಎನ್‌ಡಿಎನ ನಾಯಕರು ದೂರು ನೀಡಿ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದರು.**

# ಕೆಪಿಎಸ್‌ಸಿ ನೇಮಕಾತಿ ಪ್ರಕರಣ: ಇ.ಡಿ. ಅಧಿಕಾರಿಗಳಿಂದ ವಿವಿಧೆಡೆ ಮಹಜರು




**ಬೆಂಗಳೂರು, ಅ.2:** ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಪಶುವೈದ್ಯಾಧಿಕಾರಿಗಳ ನೇಮಕಾತಿ ಪರೀಕ್ಷಾ ಅಕ್ರಮ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳಾದ ಐಎಎಸ್ ಅಧಿಕಾರಿ ಜ್ಞಾನೇಂದ್ರ ಕುಮಾರ್ ಗಂಗ್ವಾರ್ ಹಾಗೂ ಮಧ್ಯವರ್ತಿ ಬಸವರಾಜ್ ಕನ್ನಾಳೆ ಅವರನ್ನು ಜಾರಿ ನಿರ್ದೇ ಶನಾಲಯ (ಇಡಿ) ಅಧಿಕಾರಿಗಳು ಕೆಪಿಎಸ್‌ಸಿ ಕಚೇರಿ ಸೇರಿದಂತೆ ವಿವಿಧ ಸ್ಥಳಗಳಿಗೆ ಕರೆದೊಯ್ದು ಸ್ಥಳ ಮಹಜರು ನಡೆಸಿ ತನಿಖೆಯನ್ನು ತೀವ್ರ ಗೊಳಿಸಿದ್ದಾರೆ.

ಸಿಐಡಿ ತನಿಖೆ ಬಳಿಕ ಇಬ್ಬರು ಆರೋಪಿಗಳು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿದ್ದರು. ಪ್ರಕರಣದಲ್ಲಿ ಅಕ್ರಮ ಹಣ ವರ್ಗಾವಣೆ ನಡೆದಿರುವ ಆರೋಪದ ಹಿನ್ನೆಲೆಯಲ್ಲಿ ಇಡಿ ಅಧಿಕಾರಿಗಳು ಮನಿ ಲಾಂಡರಿಂಗ್ ಕೋನದಲ್ಲಿ ತನಿಖೆ ನಡೆಸುತ್ತಿದ್ದು, ಇಬ್ಬರನ್ನೂ ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಆರೋಪಿಗಳನ್ನು ಕೆಪಿಎಸ್‌ಸಿ ಕಚೇರಿಗೆ ಗುರುವಾರ ಕರೆದೊಯ್ದ ಇ.ಡಿ ಅಧಿಕಾರಿಗಳು ಪ್ರಶ್ನೆ ಪತ್ರಿಕೆ ಇರಿಸಲಾಗಿದ್ದ ಸ್ಟ್ರಾಂಗ್ ರೂಂನಲ್ಲಿ ಸ್ಥಳ ಮಹಜರು ನಡೆಸಿದರು. ಬಳಿಕ ನಗರದ ಹೊರವಲಯದಲ್ಲಿರುವ ರೆಸಾರ್ಟ್ ಸೇರಿದಂತೆ ಇತರ ಸ್ಥಳಗಳಲ್ಲೂ ಮಹಜರು ನಡೆಸಲಾಗಿದೆ. ಸಂಪೂರ್ಣ ಪ್ರಕ್ರಿಯೆಯನ್ನು ವಿಡಿಯೋ ಚಿತ್ರೀಕರಣ ಮಾಡಿಕೊಳ್ಳಲಾಗಿದೆ. ತನಿಖೆಯ ಪ್ರಕಾರ, ಪರೀಕ್ಷೆ ನಡೆಯುವ ಒಂದು ದಿನ ಮುಂಚಿತವಾಗಿ ಪ್ರಶ್ನೆಪತ್ರಿಕೆ ಮಧ್ಯವರ್ತಿ ಬಸವರಾಜ್ ಕನ್ನಾಳೆಗೆ ತಲುಪಿಸಲಾಗಿತ್ತು ಎಂಬ ಆರೋಪವಿದೆ. ಕನ್ನಾಳೆ ಅಭ್ಯರ್ಥಿಗಳಿಗೆ ಪ್ರಶ್ನೆ ಪತ್ರಿಕೆಗಳನ್ನು ನೀಡಿ ಉತ್ತರಗಳನ್ನು ಕಂಠಪಾಠ ಮಾಡಿಸಿದ್ದರೆಂಬ ಆರೋಪವೂ ಇದೆ. ಈ ಹಿನ್ನೆಲೆಯಲ್ಲಿ ಪ್ರಶ್ನೆ ಪತ್ರಿಕೆ ಸಂಗ್ರಹಿಸಲಾಗಿದ್ದ ಸ್ಥಳ ಹಾಗೂ ಅಭ್ಯರ್ಥಿಗಳಿಗೆ ಪ್ರಶ್ನೆಪತ್ರಿಕೆ ನೀಡಲಾಗಿದೆ ಎನ್ನಲಾದ ಸ್ಥಳಗಳಲ್ಲಿ ಇಡಿ ಅಧಿಕಾರಿಗಳು ಮಹಜರು

## ಇ.ಡಿ. ಕೈಸೇರಿದ ಆರ್‌ಟಿಓ ಡೈರಿ

ಕರ್ನಾಟಕ ಲೋಕಸೇವಾ ಆಯೋಗದ ನೇಮಕಾತಿ ಅಕ್ರಮ ಪ್ರಕರಣದ ತನಿಖೆ ಮುಂದುವರಿದಿರುವ ಬೆನ್ನಲ್ಲೇ, ಆರ್‌ಟಿಓ ಇಲಾಖೆಯಲ್ಲಿನ ವ್ಯವಹಾರಕ್ಕೆ ಸಂಬಂಧಿಸಿದೆ ಎನ್ನಲಾದ ಡೈರಿಯೊಂದು ಜಾರಿ ನಿರ್ದೇಶನಾಲಯ ಅಧಿಕಾರಿಗಳ ಕೈ ಸೇರಿದೆ.

ಆರೋಪಿಯೊಬ್ಬರಿಂದ ವಶಪಡಿಸಿಕೊಳ್ಳಲಾಗಿದೆ ಎನ್ನಲಾದ ಡೈರಿಯಲ್ಲಿ 2016ರಲ್ಲಿ ಮೋಟಾರ್ ವೆಹಿಕಲ್ ಇನ್ಸ್‌ಪೆಕ್ಟರ್ ಹುದ್ದೆಗೆ ಆಯ್ಕೆಯಾಗಿದ್ದ ಹರೀಶ್, ಗೋವರ್ಧನ್, ಮಂಜುನಾಥ್, ಪೂಜಾ, ಪದ್ಮಾವತಿ, ಅಶ್ವಿನ್, ಸಂಗಮೇಶ್ ಹಾಗೂ ಮೋಹನ್ ಕುಮಾರ್ ಅವರ ಹೆಸರುಗಳಿವೆ.

2016ರಲ್ಲಿ ಎಂವಿಐ ಹುದ್ದೆಗಳ ಆಯ್ಕೆ ಪ್ರಕ್ರಿಯೆ ನಡೆದಿದ್ದರೂ, ವಿವಿಧ ಕಾನೂನು ತೊಡಕುಗಳ ಹಿನ್ನೆಲೆಯಲ್ಲಿ ನೇಮಕಾತಿ ಪ್ರಕ್ರಿಯೆ ನ್ಯಾಯಾಲಯದ ಮೆಟ್ಟಿಲೇರಿತ್ತು. ಬಳಿಕ 2023ರಲ್ಲಿ ಹೈಕೋರ್ಟ್ ನೀಡಿದ ಆದೇಶದ ಹಿನ್ನೆಲೆಯಲ್ಲಿ ಅಭ್ಯರ್ಥಿಗಳು ಕರ್ತವ್ಯಕ್ಕೆ ಸೇರ್ಪಡೆಯಾಗಿದ್ದರು ಎನ್ನಲಾಗಿದೆ.

ಆ ಸಂದರ್ಭದಲ್ಲಿ ಕೆಪಿಎಸ್‌ಸಿ ಪರೀಕ್ಷಾ ನಿಯಂತ್ರಕರಾಗಿ ಕೃಷ್ಣ ಭಾಜಪೇಯಿ ಕಾರ್ಯ ನಿರ್ವಹಿಸಿದ್ದರು.

ಇದೀಗ ಡೈರಿಯಲ್ಲಿ ಉಲ್ಲೇಖವಾಗಿರುವ ಹೆಸರುಗಳು ಮತ್ತು ನೇಮಕಾತಿ ಪ್ರಕ್ರಿಯೆಯ ನಡುವಿನ ಯಾವುದೇ ಸಂಬಂಧವಿದೆಯೇ ಎಂಬುದನ್ನು ಇ.ಡಿ ಪರಿಶೀಲಿಸುತ್ತಿದೆ.

ಇದಕ್ಕೆ ಸಂಬಂಧಿಸಿದಂತೆ, ಡೈರಿಯಲ್ಲಿ ಹೆಸರುಗಳಿರುವ ಎಂವಿಐಗಳು ತಮಗೂ ಆರೋಪಿಯಾಗಿರುವ ವ್ಯಕ್ತಿಗೂ ಯಾವುದೇ ಸಂಬಂಧವಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಡೈರಿಯಲ್ಲಿ ಹೆಸರು ಉಲ್ಲೇಖವಾಗಿರುವುದೇ ಅಕ್ರಮ ವ್ಯವಹಾರದಲ್ಲಿ ಭಾಗಿಯಾಗಿರುವುದಕ್ಕೆ ಪುರಾವೆಯಲ್ಲ ಎಂಬುದನ್ನೂ ತನಿಖೆಯ ಸಂದರ್ಭದಲ್ಲಿ ಪರಿಗಣಿಸಬೇಕಿದೆ.

ಡೈರಿಯಲ್ಲಿರುವ ಮಾಹಿತಿಯ ಸತ್ಯಾಸತ್ಯತೆ, ಹಣಕಾಸಿನ ವ್ಯವಹಾರಗಳ ವಿವರ ಹಾಗೂ ನೇಮಕಾತಿ ಪ್ರಕ್ರಿಯೆಯೊಂದಿಗೆ ಅದರ ಸಂಬಂಧದ ಕುರಿತು ಇಡಿ ತನಿಖೆಯಿಂದ ಮತ್ತಷ್ಟು ಮಾಹಿತಿ ಹೊರಬರಬೇಕಿದೆ.

## ಪಿತೃಪ್ರಧಾನತೆಯ ಲಕ್ಷ್ಮಣರೇಖೆ ದಾಟಿ ಮಹಿಳೆಯರು ಮುಂದೆ ಸಾಗಬೇಕು



**ಬೆಂಗಳೂರು, ಅ.2:** ಮಹಿಳೆಯರು ನಮ್ಮ ಕಾಲಿನ ಮುಳ್ಳನ್ನು ನಾವೇ ತೆಗೆಯಬೇಕು. ಪಿತೃಪ್ರಧಾನತೆಯ ಭೀತಿ ಮೀರಿ, ಲಕ್ಷ್ಮಣ ರೇಖೆ ದಾಟಿ ಮುಂದೆ ಸಾಗಬೇಕು. ನಾವೆಲ್ಲರೂ ಒಗ್ಗಟ್ಟಾಗಿದ್ದರೆ ಮಾತ್ರ ನಾವು ಈ ಭಯವನ್ನು ಮುರಿಯಲು ಸಾಧ್ಯ. ನಾವು ಒಂದಾಗದೆ ಪಿತೃಪ್ರಧಾನತೆಯನ್ನು ಮುಖಾಮುಖಿಯಾಗಲು ಸಾಧ್ಯವಿಲ್ಲ ಎಂದು ಕರ್ನಾಟಕ ಲೇಖಕಿಯರ ಸಂಘದ ನೂತನ ಅಧ್ಯಕ್ಷೆ ಆರ್.ಸುನಂದಮ್ಮ ಹೇಳಿದ್ದಾರೆ.

ಕರ್ನಾಟಕದ ನಾವೆದ್ದು ನಿಲ್ಲದಿದ್ದರೆ ಸಂಘಟನೆಯು ಆರಂಭಿಸಿರುವ ಧರ್ಮಸ್ಥಳದಲ್ಲಿ ಮಹಿಳೆಯರನ್ನು ಕೊಂದವರು ಯಾರು ಎಂಬ ರಾಜ್ಯವ್ಯಾಪಿ ಅಭಿಯಾನದ ಭಾಗವಾಗಿ, ಅಕ್ಟೋಬರ್ 2ರಂದು ಬೆಂಗಳೂರಿನ ಶಿವಾಜಿನಗರದ ಕಾಮರಾಜ್ ರಸ್ತೆಯಲ್ಲಿರುವ ಸಭಾ ಸಭಾಂಗಣದಲ್ಲಿ ರಾಷ್ಟ್ರೀಯ ವಿಚಾರ ಸಂಕಿರಣ ನಡೆಸಲಾಗುತ್ತಿದೆ.

ಈ ವಿಚಾರ ಸಂಕಿರಣದ ಮೊದಲ ಗೋಷ್ಠಿ ಅಪರಾಧಿಗಳ ನಿರ್ಭೀತಿ: ಪ್ರಶ್ನಿಸುವುದು, ಉತ್ತರಕ್ಕಾಗಿ ಆಗ್ರಹಿಸುವುದು ಮತ್ತು ಪುಸ್ತಕ ಬಿಡುಗಡೆ ವೇಳೆ ಮಾತನಾಡಿದ ಸುನಂದಮ್ಮ ಅವರು, ವಚನಕಾರ್ತಿ ಅಮುಗೆ ರಾಯಮ್ಮ ಅವರ ವಚನ ಹೇಳುವ ಮೂಲಕ ಗೋಷ್ಠಿಯಲ್ಲಿ ತಮ್ಮ ವಿಚಾರ ಮಂಡನೆ ಆರಂಭಿಸಿದರು.



ಧಾರವಾಡದಲ್ಲಿ ಶುಕ್ರವಾರ ನಡೆದ ರಾಷ್ಟ್ರೀಯ ವನ್ಯಜೀವಿ ಸಪ್ತಾಹದ ಮೆರವಣಿಗೆಯಲ್ಲಿ ಕೋಲಿ ಬುಡಕಟ್ಟು ಸಮುದಾಯದ ಜನರು ಸಾಂಪ್ರದಾಯಿಕ ನೃತ್ಯವನ್ನು ಪ್ರದರ್ಶಿಸಿದರು.

# ಡಿಸಿಸಿ ಬ್ಯಾಂಕ್ ಅಧ್ಯಕ್ಷರ ವಜಾಕ್ಕೆ ಭಗವಂತ ಖೂಬಾ ಆಗ್ರಹ

**ಬೀದರ್, ಅ. 2:** ಬೀದರ್ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸ್ಥಾನದಿಂದ ಅಮರ್ ಕುಮಾರ್ ಖಂಡ್ರೆ ಅವರನ್ನು ವಜಾಗೊಳಿಸಬೇಕು ಎಂದು ಕೇಂದ್ರದ ಮಾಜಿ ಸಚಿವರೂ ಆದ ಬಿಜೆಪಿ ಮುಖಂಡ ಭಗವಂತ ಖೂಬಾ ಅವರು ಆರ್‌ಬಿಐ ಗವರ್ನರ್‌ಗೆ ಪತ್ರ ಬರೆದು ಆಗಹಿಸಿದ್ದಾರೆ.

ಈ ಸಂಬಂಧ ಮಾಧ್ಯಮಗಳಿಗೆ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದ ಅವರು, ಕಳೆದ ಎರಡೂವರೆ ವರ್ಷಗಳಿಂದ ಬೀದರ್ ಜಿಲ್ಲೆಯ ಸಹಕಾರ ಇಲಾಖೆಗೆ, ರೈತರಿಗೆ, ಬೀದರ್ ಸಹಕಾರ ಸಕ್ಕರೆ ಕಾರ್ಖಾನೆಗೆ, ಸ್ವ-ಸಹಾಯ ಸಂಘಗಳಿಗೆ, ಕಾರ್ಮಿಕರಿಗೆ ಅಮರ್ ಖಂಡ್ರೆ ಕಂಟಕವಾಗಿದ್ದಾರೆ ಎಂದು ಟೀಕಿಸಿದ್ದಾರೆ.

ಮೂರು ವರ್ಷಗಳ ಹಿಂದೆ ನಡೆದ ಡಿಸಿಸಿ ಬ್ಯಾಂಕ್ ಚುನಾವಣೆ ಸಂದರ್ಭದಲ್ಲಿ ಈ ಚುನಾವಣೆಯೂ ಸಹಕಾರ ಮತ್ತು ಸಾಹುಕಾರ ಮಧ್ಯೆ ನಡೆಯುತ್ತಿದೆ. ಅಮರ್



ಖಂಡ್ರೆ ಸಾಹುಕಾರ್ ಇದ್ದಾರೆ. ಇವರು ಬಡ್ಡಿ ವ್ಯವಹಾರದವರಂತೆ ವರ್ತಿಸುತ್ತಾರೆ.

ಯಾವುದೇ ಕಾರಣಕ್ಕೂ ಅಮರ್ ಖಂಡ್ರೆ ಪೆನಾಲ್‌ಗೆ ಮತ ನೀಡಬಾರದು. ಇವರ ಕೈಗೆ ಅಧಿಕಾರ ಹೋದರೆ ಡಿಸಿಸಿ ಬ್ಯಾಂಕ್ ಹಾಗೂ ಬಿಎಸ್‌ಎಸ್‌ಕೆ ಉಳಿಯುವುದಿಲ್ಲ ಎಂದು ಹೇಳಿದ್ದೆ. ಆ ಭವಿಷ್ಯ ಈಗ ನಿಜವಾಗುತ್ತಿದೆ ಎಂದಿದ್ದಾರೆ.

ಅಮರ್ ಖಂಡ್ರೆ ಅಧ್ಯಕ್ಷರಾದ ಮೇಲೆ ಬ್ಯಾಂಕಿನಿಂದ ರೈತರಿಗೆ, ಸ್ವ-ಸಹಾಯ ಸಂಘದವರಿಗೆ ಹೊಸ ಸಾಲ ಕೊಟ್ಟಿಲ್ಲ. ಈ ಅಧ್ಯಕ್ಷರು ಬಡ್ಡಿ ವ್ಯವಹಾರ ಮಾಡುವವರಂತೆ ಕೇವಲ ಸಾಲ ವಸೂಲಿ ಕೆಲಸಕ್ಕೆ ಮುಂದಾಗಿ ದ್ದಾರೆ. ಜಿಲ್ಲೆಯ ಸಹಕಾರ ರಂಗಕ್ಕೆ, ರೈತರಿಗೆ, ಕೂಲಿ ಕಾರ್ಮಿಕರಿಗೆ ಇವರಿಂದ ಮುಕ್ತಿ ಸಿಗಬೇಕಾಗಿದೆ ಎಂದು ಹೇಳಿದ್ದಾರೆ.

ರೈತರ ಜೀವನಾಡಿಯಾಗಿರುವ ಬಿಎಸ್‌ಎಸ್‌ಕೆ ಯಿಂದ ರಾಜಕೀಯವಾಗಿ ಬೆಳೆದ ಖಂಡ್ರೆ ಪರಿವಾರ, ಇಂದು ಸಾಲದ ನೆಪವೊಡ್ಡಿ ಕಾರ್ಖಾನೆಯನ್ನು ನುಂಗಲು ಹೊಂಚು ಹಾಕುತ್ತಿದೆ. ಅವರ ಕುಟುಂಬದ ಮಹಾತ್ಮ ಗಾಂಧಿ ಸಕ್ಕರೆ ಕಾರ್ಖಾನೆ ಮೇಲೂ ಅಸಲು, ಬಡ್ಡಿ ಸೇರಿ ಒಟ್ಟು 398 ಕೋಟಿ ಸಾಲವಿದೆ. ಇದರ ವಿರುದ್ಧ ಯಾವುದೇ ಕ್ರಮವಾಗಿಲ್ಲ. ರೈತರ ಕಾರ್ಖಾನೆಯಾಗಿರುವ ಬಿಎಸ್‌ಎಸ್‌ಕೆ ಮೇಲೆ ಕ್ರಮಕ್ಕೆ ಮುಂದಾಗುತ್ತಿರುವುದು ಇವರ ಸ್ವಾರ್ಥ ಮತ್ತು ಅಹಂಕಾರದ ಪ್ರತೀಕ ಎಂದು ತಿಳಿಸಿದ್ದಾರೆ.

> ರೈತರ ಹಿತವನ್ನು ನಿರ್ಲಕ್ಷಿಸಿರುವ ಈ ಖಂಡ್ರೆ ಪರಿವಾರವನ್ನು ಧಿಕ್ಕರಿಸಿ, ರೈತರ, ಸಹಕಾರಿ ಇಲಾಖೆಯ ಮತ್ತು ಸಕ್ಕರೆ ಕಾರ್ಖಾನೆಗಳ ಉಳಿವಿಗಾಗಿ ಅಮರ್ ಖಂಡ್ರೆ ಅವರನ್ನು ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸಲು ಕ್ರಮ ಕೈಗೊಳ್ಳಬೇಕು ಎಂದು ಪತ್ರದಲ್ಲಿ ಮನವಿ ಮಾಡಿದ್ದಾರೆ. ಸ್ವ-ಸಹಾಯ ಸಂಘದವರಿಗೆ ಅಮರ್ ಕುಮಾರ್ ಖಂಡ್ರೆಯವರ ಈ ದುರಾಡಳಿತದಿಂದ ಮುಕ್ತಿ ಸಿಗಬೇಕಾದರೆ ಇವರನ್ನು ಅಧ್ಯಕ್ಷ ಸ್ಥಾನದಿಂದ ಕೆಳಗೆ ಇಳಿಸುವುದು ಅವಶ್ಯಕ.
>
> – ಭಗವಂತ ಖೂಬಾ ಕೇಂದ್ರದ ಮಾಜಿ ಸಚಿವ

# ಮನೆ ಮುಂದೆ ಹಳ್ಳದ ರೀತಿಯಲ್ಲಿ ನಿಂತ ನೀರು ನೀರು ಹೊರಹಾಕಲು ಹರಸಾಹಸ ಪಟ್ಟ ಜನರು

**ಬಳ್ಳಾರಿ ಅ 02.** ಮಳೆ ನಿಂತು ಹಲವು ದಿನಗಳು ಕಳೆದರೂ ನಗರದ ವಾರ್ಡ್ ಗಳಲ್ಲಿ ಹಲವು ರಸ್ತೆಗಳಲ್ಲಿನ ಮಳೆ ನೀರು ಹೊರಹೋಗದೆ ನಿಂತಿದ್ದು, ನಾಗರಿಕರು ತೀವ್ರ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.



ಬಳ್ಳಾರಿ ನಗರದ ತಾಳುರು ರಸ್ತೆಯಾ ಭಗತ್ ಸಿಂಗ್ ನಗರ ಕೆಲ ರಸ್ತೆ ಗಳಪಾಡು, ಪ್ರಥಮ ಮಹಾ ಪೌರರ ವಾರ್ಡ್ ಕಥೆ, ಜನರ ಆಕ್ರೋಶ, ಅವರ ಬಾಯಿಂದ ಕೇಳಬೇಕು. ರಸ್ತೆ ಗಳಲ್ಲೇ ನೀರು ಸಂಗ್ರಹವಾಗಿರುವುದರಿಂದ ಜನರ ಓಡಾಟಕ್ಕೆ ತೊಂದರೆಯಾಗುವುದರ ಜೊತೆಗೆ, ಸೊಳ್ಳೆಗಳ ಕಾಟ ಹೆಚ್ಚಾಗಿ ರೋಗರುಜಿನಗಳ ಭೀತಿಯೂ ಎದುರಾಗಿದೆ.

ಚರಂಡಿ ವ್ಯವಸ್ಥೆ ಸಮರ್ಪಕ ವಾಗಿಲ್ಲದಿರುವುದು ಹಾಗೂ ನೀರು ಸರಾಗವಾಗಿ ಹರಿದುಹೋಗಲು ಅಗತ್ಯ ಕ್ರಮ ಕೈಗೊಳ್ಳದಿರುವುದೇ ಸಮಸ್ಯೆಗೆ ಕಾರಣ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಸಮಸ್ಯೆ ಬಗ್ಗೆ ಹಲವು ಬಾರಿ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ಗಮನಕ್ಕೆ ತಂದರೂ ಸೂಕ್ತ ಕ್ರಮ ಕೈಗೊಂಡಿಲ್ಲ ಎಂದು ನಿವಾಸಿಗಳು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಮಳೆ ಬಂದಾಗ ನೀರು ನಿಲ್ಲುವುದು ಅರ್ಥವಾಗುತ್ತದೆ,ಆದರೆ ಮಳೆ ನಿಂತು ದಿನಗಳಾದರೂ ನೀರು ಹೊರ ಹೋಗದಿರುವುದು ಯಾರ ನಿರ್ಲಕ್ಷ್ಯ' ಎಂದು ಪ್ರಶ್ನಿಸಿರುವ ನಾಗರಿಕರು, ಸಮಸ್ಯೆ ಬಗೆಹರಿಸದ ಜನಪ್ರತಿನಿಧಿಗಳ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನೀರಿನ ಸಂಗ್ರಹದಿಂದ ಸೊಳ್ಳೆಗಳ ಉತ್ಪತ್ತಿ ಹೆಚ್ಚಾಗಿ ಡೆಂಗ್ಯೂ, ಮಲೇರಿಯಾ ಸೇರಿದಂತೆ ವಿವಿಧ ರೋಗಗಳ ಭೀತಿ ಎದುರಾಗಿದ್ದು, ಕೂಡಲೇ ರಸ್ತೆ ಮತ್ತು ಚರಂಡಿ ವ್ಯವಸ್ಥೆಯನ್ನು ಸರಿಪಡಿಸಿ ನಿಂತಿರುವ ನೀರನ್ನು ತೆರವುಗೊಳಿಸಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಕೊನೆಗೆ ವಾರ್ಡ್ ಮಹಿಳೆ ಯರು ರಸ್ತೆ ಮೇಲೆ ನಿಂತ ಗಲೀಜ್ ನೀರು, ಹೊರಗಡೆ ಹಾಕಲು ಮುಂದೆ ಆಗಿದ್ದಾರೆ. ಸರ್ಕಾರಕ್ಕೆ ನಾಚಿಕೆ ಆಗುವ ಕೆಲಸ ಮಾಡಿದ್ದಾರೆ. ಸುಳ್ಳು ಮಾತುಗಳಿಂದ, ಜನರಿಗೆ ನಾಮ ಹಾಕಿದರೆ, ಜನರ ಶಾಪ ಅವರ ಬಾಯಿಂದ ಕೇಳಬೇಕು.

# ರಾಜ್ಯ ಯುವ ಆಯೋಗ ಸ್ಥಾಪನೆಗೆ ಒತ್ತಾಯ

**ರಾಯಚೂರು, ಅ. 2:** ರಾಜ್ಯದಲ್ಲಿ ಯುವ ಆಯೋಗ ಸ್ಥಾಪನೆ ಹಾಗೂ ಯುವಕರು ಎದುರಿಸುತ್ತಿರುವ ಸಮಸ್ಯೆ ಗಳ ಕುರಿತು ಸಾಲಿಡಾರಿಟಿ ಯೂತ್ ಮೂವ್‌ಮೆಂಟ್‌ನ ಮುಖಂಡರು ವಿಧಾನ ಪರಿಷತ್ ಸದಸ್ಯ ಬಸನಗೌಡ ಬಾದರ್ಲಿ ಅವರನ್ನು ಭೇಟಿ ಮಾಡಿ ಚರ್ಚಿಸಿ, ಮನವಿ ಸಲ್ಲಿಸಿದರು.

ಕಲ್ಪಿಸುವುದು, ಸರ್ಕಾರದ ಯೋಜನೆಗಳು ಯುವಕರಿಗೆ ಪರಿಣಾಮಕಾರಿಯಾಗಿ ತಲುಪುವಂತೆ ಮಾಡಲು, ಯುವಜನರ ಅಭಿವೃದ್ಧಿಗೆ ಸೂಕ್ತ ವೇದಿಕೆ ಕಲ್ಪಿಸಲು ರಾಜ್ಯ ಮಟ್ಟದಲ್ಲಿ ಯುವ ಆಯೋಗ ಸ್ಥಾಪಿಸುವುದು ಅಗತ್ಯ. ಸಿಂಧನೂರು ನಗರದ ಅಭಿವೃದ್ಧಿ ಹಾಗೂ ಯುವಕರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ



ರಾಜ್ಯದ ಯುವಕರು ಎದುರಿಸುತ್ತಿರುವ ಶಿಕ್ಷಣ, ಉದ್ಯೋಗ, ಕೌಶಲಾಭಿವೃದ್ಧಿ, ಉದ್ಯೋಗಾವಕಾಶ, ಯುವ ಸಬಲೀಕರಣ ಹಾಗೂ ಯುವಕರ ಭವಿಷ್ಯಕ್ಕೆ ಸಂಬಂಧಿಸಿದ ಸಮಸ್ಯೆಗಳ ಕುರಿತು ಚರ್ಚಿಸಿದರು.

ಯುವಕರ ಸಮಸ್ಯೆಗಳನ್ನು ಗುರುತಿಸಿ ಅವುಗಳಿಗೆ ಸೂಕ್ತ ಪರಿಹಾರ ಚರ್ಚಿಸಿದರು. ಈ ಸಂದರ್ಭದಲ್ಲಿ ಬಸನಗೌಡ ಬಾದರ್ಲಿ, 'ನಗರದ ಅಭಿವೃದ್ಧಿ ಹಾಗೂ ಯುವಕರ ಭವಿಷ್ಯಕ್ಕಾಗಿ ಅಗತ್ಯ ಸಹಕಾರ ಮತ್ತು ಬೆಂಬಲ ನೀಡಲಾಗುವುದು. ಯುವ ಆಯೋಗ ಸ್ಥಾಪನೆ ಕುರಿತು ಸರ್ಕಾರದ ಮೇಲೆ ಒತ್ತಡ ಹಾಕಲಾಗುವುದು ಎಂದರು.

# ಮತದಾರರ ಹೆಸರು ಅಳಿಸಲು ಸಂಚು: ಭಾಲ್ಕಿ ಠಾಣೆಯಲ್ಲಿ 32 ಮಂದಿ ವಿರುದ್ಧ ದೂರು ದಾಖಲು

**ಬೀದರ್, ಅ.2:** ಯಾವುದೇ ಆಧಾರವಿಲ್ಲದೇ ಸುಳ್ಳು ಆಕ್ಷೇಪಣಾ ಅರ್ಜಿಗಳನ್ನು ಸಲ್ಲಿಸಿ, ಅರ್ಹ ಅಲ್ಪಸಂಖ್ಯಾತ ಮುಸ್ಲಿಂ ಮತದಾರರ ಹೆಸರುಗಳನ್ನು ಅಳಿಸಲು ಒಳಸಂಚು ರೂಪಿಸಿದ್ದಾರೆ ಎಂಬ ದೂರಿನ ಮೇರೆಗೆ ಭಾಲ್ಕಿ ನಗರ ಠಾಣೆಯಲ್ಲಿ 32 ಜನರ ವಿರುದ್ಧ ಪ್ರಕರಣ ದಾಖಲಾಗಿದೆ.

ಭಾಲ್ಕಿಯ ಮಾಸುಮ ಪಾಶಾ ಕಾಲೊನಿಯ ನಿವಾಸಿ ಮುಹಮ್ಮದ್ ಅತೀಕ್ ಅಹಮ್ಮದ್ ಎಂಬುವರು ಗುರುವಾರ (ಸೆ.1) ಭಾಲ್ಕಿ ನಗರ ಠಾಣೆಗೆ ದೂರು ಕೊಟ್ಟಿದ್ದರು. ಇದನ್ನು ಆಧರಿಸಿ ಪೊಲೀಸರು ಪ್ರಕರಣ ದಾಖಲಿಸಿ ಕೊಂಡಿದ್ದಾರೆ. ಸ್ಥಳಾಂತರ, ಗೈರು ಹಾಜರಿ ಎಂದು ಫಾರ್ಮ್ 7ರಲ್ಲಿ ಸುಳ್ಳು ಮಾಹಿತಿ ಸೇರಿಸಿದ್ದರಿಂದ ನಾನು ಸೇರಿದಂತೆ ಒಟ್ಟು 3,244 ಮತದಾರರು ಸ್ಥಳಾಂತರ, ಗೈರುಹಾಜರಿ ಎಂದು ನಮೂದಿಸಿದ್ದಾರೆ. ಬಳಿಕ ಕ್ಷೇತ್ರದ ಮತದಾರರ ನೋಂದಣಾಧಿಕಾರಿ ಕಚೇರಿಯಿಂದ ದಾಖಲೆಗಳ ಸಮೇತ ಹಾಜರಾಗುವಂತೆ ನೋಟಿಸ್ ನೀಡಿದ್ದರು.

ಇದಾದ ನಂತರ ಭಾಲ್ಕಿಯ ಶಿವರಾಜ ಕಾಶಿನಾಥಪ್ಪ ಗಂದಗೆ, ದೀಪಕ್ ಕೇರಬಾ ಶಿಂಧೆ, ಅಮರ್ ಬಾಬುರಾವ್ ಸೇರಿದಂತೆ 32 ಜನರು ಆಕ್ಷೇಪಣೆಗಳನ್ನು ಸಲ್ಲಿಸಿ ದ್ದಾರೆ ಎಂದು ದೂರಿನಲ್ಲಿ ಆರೋಪಿಸಿದ್ದಾರೆ.

ತಹಶೀಲ್ದಾರ್ ಕಚೇರಿಯಲ್ಲಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿದಾಗ ನಮೂನೆ 7ರ ಮೂಲಕ ಒಟ್ಟು 3,244 ಅರ್ಜಿಗಳನ್ನು ಫೋರ್ಜರಿ ಮಾಡಿ, ಸುಳ್ಳು ಸಹಿ ಮಾಡಿದ್ದಾರೆ. 3,243 ಅರ್ಹ ಮತದಾರರ ಗಮನಕ್ಕೆ ತರದೆ ಅರ್ಜಿಗಳು ಸಲ್ಲಿಕೆಯಾಗಿವೆ. ಇದು ಮತದಾರರ ಪಟ್ಟಿಯಿಂದ ಹೆಸರು ಅಳಿಸಿ ಹಾಕುವ ಒಳಸಂಚು. ಸುಳ್ಳು ಅರ್ಜಿ ಸಲ್ಲಿಸಿದವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ದೂರಿನಲ್ಲಿ ಒತ್ತಾಯಿಸಿದ್ದಾರೆ.

# 6.60 ಲಕ್ಷ ಪಡಿತರದಾರರ ಇ–ಕೆವೈಸಿ ನೋಂದಣಿ ಪೂರ್ಣ

**ರಾಯಚೂರು, ಅ. 2:** ಪಡಿತರ ವ್ಯವಸ್ಥೆಯಲ್ಲಿ ನಡೆಯಬಹುದಾದ ದುರ್ಬಳಕೆ ತಡೆದು, ಅರ್ಹ ಫಲಾನುಭವಿಗಳಿಗೆ ಮಾತ್ರ ಸರ್ಕಾರದ ಆಹಾರ ಧಾನ್ಯಗಳು ಸಮರ್ಪಕವಾಗಿ ತಲುಪಿಸುವ ಉದ್ದೇಶದಿಂದ ಜಿಲ್ಲೆಯಲ್ಲಿ ಪಡಿತರ ಚೀಟಿದಾರರ ಇ–ಕೆವೈಸಿ ಪ್ರಕ್ರಿಯೆಗೆ ವೇಗ ನೀಡಲಾಗಿದೆ. ಜಿಲ್ಲೆಯ ಒಟ್ಟು 9,50,029 ಪಡಿತರದಾರರ ಪೈಕಿ ಈವರೆಗೆ 6,60,513 ಮಂದಿಯ ಇ–ಕೆವೈಸಿ ಪೂರ್ಣಗೊಂಡಿದ್ದು, ಜಿಲ್ಲೆ ಶೇ.69.53ರಷ್ಟು ಪ್ರಗತಿ ಸಾಧಿಸಿದೆ.



ಇ–ಕೈವೈಸಿ ಪ್ರಕ್ರಿಯೆಯಲ್ಲಿ ಸಿಂಧನೂರು ತಾಲ್ಲೂಕು ಜಿಲ್ಲೆಯಲ್ಲಿ ಮೊದಲ ಸ್ಥಾನದಲ್ಲಿದೆ. ಇಲ್ಲಿ 1,85,764 ಪಡಿತರ ಸದಸ್ಯರ ಪೈಕಿ 1,40,995 ಮಂದಿಯ ಇ–ಕೆವೈಸಿ ಪೂರ್ಣ ಗೊಂಡಿದ್ದು, ಶೇ 75.90ರಷ್ಟು ಪ್ರಗತಿ ದಾಖಲಾಗಿದೆ. ಸಿರವಾರ ತಾಲ್ಲೂಕು ಶೇ.73.32ರಷ್ಟು ಪ್ರಗತಿ ಯೊಂದಿಗೆ ಎರಡನೇ ಸ್ಥಾನದಲ್ಲಿದ್ದರೆ, ಮಾನ್ವಿ ತಾಲ್ಲೂಕು ಶೇ 70.81ರಷ್ಟು ಪ್ರಗತಿ ಸಾಧಿಸಿದೆ.

ರಾಯಚೂರು ತಾಲ್ಲೂಕಿನಲ್ಲಿ ಒಟ್ಟು 2,22,940 ಪಡಿತರ ಸದಸ್ಯರಿದ್ದು, 1,46,472 ಮಂದಿಯ ಇ–ಕೆವೈಸಿ ಪೂರ್ಣಗೊಂಡಿದೆ. ಶೇ 65.70ರಷ್ಟು ಪ್ರಗತಿ ದಾಖಲಾಗಿದ್ದು, ಇನ್ನೂ 76,468 ಸದಸ್ಯರ ಇ–ಕೆವೈಸಿ ಬಾಕಿಯಿದೆ.

ಲಿಂಗಸುಗೂರು ತಾಲ್ಲೂಕಿನಲ್ಲಿ 1,36,023 ಸದಸ್ಯರ ಪೈಕಿ 92,086 ಮಂದಿಯ ಪ್ರಕ್ರಿಯೆ ಪೂರ್ಣಗೊಂಡಿದ್ದು, ಶೇ 67.70ರಷ್ಟು ಪ್ರಗತಿ ಸಾಧಿಸಲಾಗಿದೆ.

ಮಸ್ಕಿ ತಾಲ್ಲೂಕಿನಲ್ಲಿ 1,05,491 ಸದಸ್ಯರ ಪೈಕಿ 73,231 ಮಂದಿಯ ಇ–ಕೆವೈಸಿ ಪೂರ್ಣಗೊಂಡಿದ್ದು, ಶೇ 69.42ರಷ್ಟು ಪ್ರಗತಿ ದಾಖಲಾಗಿದೆ. ಮಾನ್ವಿ ಯಲ್ಲಿ 88,972 ಸದಸ್ಯರ ಪೈಕಿ 62,998 ಮಂದಿಯ ಇ–ಕೆವೈಸಿ ಪೂರ್ಣಗೊಂಡಿದೆ. ದೇವದುರ್ಗದಲ್ಲಿ 80,285 ಸದಸ್ಯರ ಪೈಕಿ 51,675 ಮಂದಿ ಹಾಗೂ ಅರಕೇರಾದಲ್ಲಿ 62,332 ಸದಸ್ಯರ ಪೈಕಿ 43,039 ಮಂದಿಯ ಇ–ಕೆವೈಸಿ ಪೂರ್ಣ ಗೊಂಡಿದೆ. ರಾಜ್ಯ ಸರ್ಕಾರ ಪಡಿತರದಾರರಿಗೆ ಇ–ಕೆವೈಸಿ ಮಾಡಿಸಿಕೊಳ್ಳಲು ಅ.20 ರವರೆಗೆ ಅವಕಾಶ ಕಲ್ಪಿಸಿದೆ. ಹೀಗಾಗಿ ಬಾಕಿ ಉಳಿದಿರುವ ಫಲಾನುಭವಿಗಳು ನಿಗದಿತ ಅವಧಿಯೊಳಗೆ ಪ್ರಕ್ರಿಯೆ ಪೂರ್ಣಗೊಳಿಸುವಂತೆ ಆಹಾರ ಇಲಾಖೆ ಸೂಚಿಸಿದೆ. ಇ–ಕೆವೈಸಿ ಮಾಡಿಸಿಕೊಳ್ಳುವುದರಿಂದ ಪಡಿತರ ಚೀಟಿಯಲ್ಲಿರುವ ಸದಸ್ಯರ ವಿವರಗಳನ್ನು ದೃಢೀಕರಿಸಲು ಹಾಗೂ ಪಡಿತರ ವ್ಯವಸ್ಥೆಯಲ್ಲಿನ ಅಕ್ರಮಗಳನ್ನು ನಿಯಂತ್ರಿಸಲು ಸಹಕಾರಿಯಾಗಲಿದೆ.

**ನ್ಯಾಯಬೆಲೆ ಅಂಗಡಿಗಳಲ್ಲೇ ಅವಕಾಶ:**

ಪಡಿತರದಾರರ ಅನುಕೂಲಕ್ಕಾಗಿ ಜಿಲ್ಲೆಯ ನ್ಯಾಯಬೆಲೆ ಅಂಗಡಿಗಳಲ್ಲಿಯೇ ಇ–ಕೆವೈಸಿ ಮಾಡಿಕೊಳ್ಳಲು ವ್ಯವಸ್ಥೆ ಕಲ್ಪಿಸಲಾಗಿದೆ.

## ಮೂರ್ತಿ ಮರುಸ್ಥಾಪನೆಗೆ ಕುರುಬರ ಸಂಘ ಒತ್ತಾಯ

# ಸಿದ್ದರಾಮಯ್ಯ ಮೂರ್ತಿ ತೆರವು ಖಂಡಿಸಿ 'ಕಲಬುರಗಿ ಚಲೋ'

**ಕಲಬುರಗಿ, ಅ.2:** ನಗರದ ಹೈಕೋರ್ಟ್ ವೃತ್ತದಲ್ಲಿ ಸ್ಥಾಪಿಸಲಾಗಿದ್ದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೂರ್ತಿ ಹಾಗೂ ನಾಮಫಲಕ ವನ್ನು ತೆರವುಗೊಳಿಸಿರುವ ಕ್ರಮ ಖಂಡಿಸಿ ಕರ್ನಾಟಕ ಪ್ರದೇಶ ಕುರುಬರ ಸಂಘದ ಕಲಬುರಗಿ ಜಿಲ್ಲಾ ಶಾಖೆ ಕಲಬುರಗಿ ಚಲೋ ಮೂಲಕ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಿತು.



ಸಂಘದ ಅಧ್ಯಕ್ಷ ಭಗವಂತರಾಯ ಗೌಡ ಪಾಟೀಲ್ ನೇತೃತ್ವದಲ್ಲಿ ಪ್ರತಿಭಟನಾಕಾರರು ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಜಿಲ್ಲಾಧಿಕಾರಿಗಳು ಮನವಿ ಸ್ವೀಕರಿಸಿದರು.

ಸೆ.16ರಂದು ಅಫಜಲಪುರ ಮಾರ್ಗದ ಹೈಕೋರ್ಟ್ ವೃತ್ತದಲ್ಲಿ ಸಿದ್ದರಾಮಯ್ಯ ಅವರ 9 ಅಡಿ ಎತ್ತರದ ಮೂರ್ತಿಯನ್ನು ಸ್ಥಾಪಿಸಲಾಗಿತ್ತು. ಇದೇ ಸ್ಥಳದಲ್ಲಿ 2023ರಲ್ಲಿ ಸಿದ್ದರಾಮಯ್ಯ ವೃತ್ತ ಎಂಬ ನಾಮಫಲಕ ಅಳವಡಿಸಲಾಗಿತ್ತು ಎಂದು ಸಂಘ ತಿಳಿಸಿದೆ. ಆದರೆ ಸೆ.17ರಂದು ಬೆಳಗಾಗುವುದರೊಳಗೆ ಮಹಾನಗರ ಪಾಲಿಕೆ ಅಧಿಕಾರಿಗಳು ಸಮಾಜದ ಮುಖಂಡರಿಗೆ ಯಾವುದೇ ಮಾಹಿತಿ ನೀಡದೆ ಮೂರ್ತಿ ಹಾಗೂ ನಾಮಫಲಕ ತೆರವುಗೊಳಿಸಿದ್ದಾರೆ ಎಂದು ಆರೋಪಿಸಿದರು.

ಮೂರ್ತಿಯನ್ನು ಪೌರಕಾರ್ಮಿಕರ ಮೂಲಕ ಪಾಲಿಕೆಯ ಕಸದ ವಾಹನ ದಲ್ಲಿ ಸಾಗಿಸಿರುವುದು ಸಮಾಜದ ಭಾವನೆಗಳಿಗೆ ಧಕ್ಕೆ ತಂದಿದೆ ಎಂದು ಸಂಘದ ಮುಖಂಡರು ಆಕ್ಷೇಪಿಸಿದರು.

ಮೂರ್ತಿ ಸ್ಥಾಪನೆಗೆ ಸಂಬಂಧಿಸಿ ದಂತೆ ಕಾನೂನು ಅಥವಾ ಆಡಳಿತಾತ್ಮಕ ಸಮಸ್ಯೆಗಳಿದ್ದರೆ ಸಮಾಜದ ಮುಖಂಡ ರೊಂದಿಗೆ ಚರ್ಚಿಸಿ ಗೌರವಯುತವಾಗಿ ತೆರವುಗೊಳಿಸಬಹುದಾಗಿತ್ತು. ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

### ಗೌರವಾನ್ವಿತ ನಾಯಕರು



ಸಿದ್ಧರಾಮಯ್ಯ ಅವರು ನಮ್ಮ ಗೌರವಾನ್ವಿತ ಮಾಜಿ ಮುಖ್ಯಮಂತ್ರಿಗಳು. ನಮ್ಮೆಲ್ಲರ ನಾಯಕರು. ಅವರ ಪ್ರತಿಮೆಯನ್ನೂ ಕೂಡ ಗೌರವಯುತವಾಗಿಯೇ ಅನುಮತಿ ಪಡೆದು, ಪಾಲಿಕೆಯಲ್ಲಿ ಗೊತ್ತುವಳಿ ಅಂಗೀಕರಿಸುವ ಮೂಲಕ ಎಲ್ಲ ವಿಧಿ ವಿಧಾನಗಳೊಂದಿಗೆ ಸ್ಥಾಪಿಸಬೇಕೇ ವಿನಃ ರಾತೋರಾತ್ರಿ ಅಕ್ರಮವಾಗಿ ಸ್ಥಾಪಿಸುವುದನ್ನು ನಾನೂ ಕೂಡ ವಿರೋಧಿಸುವೆ. ಗೌರವಯುತವಾಗಿ ಅನುಮತಿಯೊಂದಿಗೆ ಸ್ಥಾಪಿಸಿದರೆ ನಾನೇ ಉದ್ಘಾಟನೆಗೆ ಬರುತ್ತೇನೆ.

–ಪ್ರಿಯಾಂಕ್ ಖರ್ಗೆ,
ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರು.

ಹೈಕೋರ್ಟ್ ವೃತ್ತದಲ್ಲಿಯೇ ಜಿಲ್ಲಾಡಳಿತದ ವತಿಯಿಂದ ಸಿದ್ದ ರಾಮಯ್ಯ ಅವರ ಮೂರ್ತಿಯನ್ನು ಗೌರವಯುತವಾಗಿ ಮರುಸ್ಥಾಪಿಸಬೇಕು ಎಂದು ಸಂಘ ಆಗ್ರಹಿಸಿತು.

ಸರ್ಕಾರ ಬೇಡಿಕೆಗೆ ಸ್ಪಂದಿಸದಿದ್ದರೆ ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟ ಹಾಗೂ ಕರ್ನಾಟಕ ಪ್ರದೇಶ ಕುರುಬರ ಸಂಘದ ವತಿಯಿಂದ ರಾಜ್ಯಾದ್ಯಂತ ಹೋರಾಟ ನಡೆಸುವುದಾಗಿ ಮುಖಂಡರು ಎಚ್ಚರಿಕೆ ನೀಡಿದರು.

## ವಿಜಯಪುರದಲ್ಲಿ ಮಹಾತ್ಮ ಗಾಂಧಿ- ಲಾಲಬಹಾದ್ದೂರ್ ಶಾಸ್ತ್ರೀ ಜಯಂತಿ ಆಚರಣೆ

# ಪ್ರಬಂಧ ಸ್ಪರ್ಧೆಯ್ಲ್ಲ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ, ಪ್ರಮಾಣಪತ್ರ ಪ್ರದಾನ

**ವಿಜಯಪುರ,ಅ.2(:** ಜಿಲ್ಲಾಡಳಿತ ಹಾಗು ಜಿಲ್ಲಾ ಪಂಚಾಯತಿ ವತಿ ಯಿಂದ ನಗರದ ಗಾಂಧಿ ಭವನದಲ್ಲಿ ಶುಕ್ರವಾರ ಹಮ್ಮಿಕೊಳ್ಳಲಾದ ಮಹಾತ್ಮ ಗಾಂಧೀಜಿ– ಲಾಲ್‌ಬಹದ್ದೂರ ಶಾಸ್ತ್ರೀ ಜಯಂತಿ ಕಾರ್ಯಕ್ರಮದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಅಂಗವಾಗಿ ಜಿಲ್ಲಾಮಟ್ಟದಲ್ಲಿ ಪ್ರೌಢಶಾಲೆ, ಪದವಿಪೂರ್ವ ಹಾಗೂ ಪದವಿ–ಸ್ನಾತಕೋತ್ತರ ಪದವಿ ವಿಭಾಗದ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಲಾದ ಬಾಪೂಜಿ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಿಗೆ ಬಹುಮಾಆನ ಪ್ರಮಾಣ ಪತ್ರ ವಿತರಿಸಲಾಯಿತು.

ಪ್ರಬಂಧ ಸ್ಪರ್ಧೆಯ ಪ್ರೌಢಶಾಲಾ ವಿಭಾಗದಲ್ಲಿ ಸಿಂದಗಿ ತಾಲ್ಲೂಕಿನ ಸುರಗಿಹಳ್ಳಿ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ ಪ್ರೇಮಾ ಕೆ. ಬಿರಾದಾರ ಪ್ರಥಮ, ವಿಜಯಪುರದ ಜಲನಗರ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ ರೇಣುಕಾ ಎಂ. ಕೆಸ್ಕಾರ ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದ ಕೆರೂಟಗಿಯ ಪಿ.ಎಂ.ಶ್ರೀ ಕರ್ನಾಟಕ ಪಬ್ಲಿಕ್ ಶಾಲೆಯ ವಿದ್ಯಾರ್ಥಿನಿ ಸೃಷ್ಟಿ ಬಿರಾದಾರ ಅವರಿಗೆ ಬಹುಮಾನ ಹಾಗೂ ಪ್ರಮಾಣ ಪತ್ರ ವಿತರಿಸಲಾಯಿತು.




## ಬಳ್ಳಾರಿ ಮಹಿಳಾ ಪೊಲೀಸ್ ಠಾಣೆ ವಿರುದ್ಧ ಗಂಭೀರ ಆರೋಪ

# ವರಿಷ್ಠ ಅಧಿಕಾರಿಗಳ ಕರ್ತವ್ಯ ಏನು? ಜನರ ಆಕ್ರೋಶ

**ಬಳ್ಳಾರಿ ಅ 02.** ಬಳ್ಳಾರಿ ಮಹಿಳಾ ಪೊಲೀಸ್ ಠಾಣೆಯಲ್ಲಿ ಹಲವು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ಪೊಲೀಸ್ ಅಧಿಕಾರಿಯೊಬ್ಬರ ಕಾರ್ಯವೈಖರಿ ಹಾಗೂ ಠಾಣೆಯಲ್ಲಿನ ಸಾರ್ವಜನಿಕ ರೊಂದಿಗೆ ನಡೆದುಕೊಳ್ಳುವ ರೀತಿಯ ಕುರಿತು ಗಂಭೀರ ಆರೋಪಗಳು ಕೇಳಿ ಬಂದಿವೆ.



ದಳಿತ ಮಹಿಳೆಯೊಬ್ಬರು ಮತ್ತೊಬ್ಬ ವ್ಯಕ್ತಿಯೊಂದಿಗೆ ಪರಾರಿಯಾಗಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ, ಕೆಲ ದಿನಗಳು ಹಿಂದೆ ನ್ಯಾಯ ಒದಗಿಸುವಂತೆ ಮನವಿ ಮಾಡಲು ಠಾಣೆಗೆ ಬಂದಿದ್ದ ಪೋಷಕರರೊಂದಿಗೆ, ಸಂಬಂಧಿಸಿದ ಪೊಲೀಸ್ ಅಧಿಕಾರಿ ವಾಗ್ವಾದ ನಡೆಸಿದ್ದಾರೆ, ಎಂಬ ಆರೋಪ ಕೇಳಿಬಂದಿದೆ. ಇದೇ ಸಂದರ್ಭದಲ್ಲಿ, ತಮ್ಮ ಮಗಳು ಮನೆಯಿಂದ ತೆರಳಿದ ಘಟನೆಯ ಕುರಿತು ದೂರು ನೀಡಲು ಬಂದಿದ್ದ ವ್ಯಕ್ತಿಯೊಂದಿಗೆ ಅವಹೇಳನಕಾರಿಯಾಗಿ ನಿಮ್ಮ ಹುಡಿಗಿ, ಹೋಗುವ ಸಂದರ್ಭದಲ್ಲಿ ಭಡ್ಡಿ ಕಾವಲು ಇರಬೇಕು, ಅನ್ನುವ ರೀತಿಯಲ್ಲಿ ಮಾತನಾಡಲಾಗಿದೆ ಎಂಬ ಆರೋಪವೂ ಕೇಳಿಬಂದಿದೆ. ಸಾರ್ವ ಜನಿಕರು ಹಾಗೂ ದೂರುದಾರ ರೊಂದಿಗೆ ಪೊಲೀಸರು ಗೌರವಯುತವಾಗಿ ನಡೆದು ಕೊಳ್ಳಬೇಕು ಎಂಬ ನಿರೀಕ್ಷೆಯಿರುವ ಸಂದರ್ಭದಲ್ಲಿ ಇಂತಹ ಆರೋಪಗಳು ಕೇಳಿಬಂದಿರುವುದು ಚರ್ಚೆಗೆ ಕಾರಣವಾಗಿದೆ. ವಿಶೇಷವಾಗಿ ಮಹಿಳೆಯರು ಹಾಗೂ ಅಸಹಾಯಕ ಸ್ಥಿತಿ ಯಲ್ಲಿರುವ ದೂರುದಾರರು ನ್ಯಾಯಕ್ಕಾಗಿ ಪೊಲೀಸ್ ಠಾಣೆಯ ಮೊರೆ ಹೋಗುವಾಗ, ಅವರಿಗೆ ಸೂಕ್ತ ಮಾರ್ಗದರ್ಶನ ಮತ್ತು ಮಾನವೀಯ ಸ್ಪಂದನೆ ದೊರೆಯಬೇಕೆಂಬ ಆಗ್ರಹ ವ್ಯಕ್ತವಾಗಿದೆ.

ಈ ಹಿನ್ನೆಲೆಯಲ್ಲಿ ವರಿಷ್ಠ ಪೊಲೀಸ್ ಅಧಿಕಾರಿಗಳು ಬಳ್ಳಾರಿ ಮಹಿಳಾ ಪೊಲೀಸ್ ಠಾಣೆಯ ಕಾರ್ಯವೈಖರಿ ಕುರಿತು ಪರಿಶೀಲನೆ ನಡೆಸಬೇಕು ಎಂದು ನೊಂದವರು ಹಾಗೂ ಸಾರ್ವಜನಿಕರು ಮನವಿ ಮಾಡಿದ್ದಾರೆ. ಮಹಿಳಾ ಪೊಲೀಸ್ ಠಾಣೆಯ ಕಾರ್ಯವೈಖರಿ ಮತ್ತು ದೂರುದಾರರೊಂದಿಗೆ ಅಧಿಕಾರಿಗಳ ವರ್ತನೆ ಕುರಿತು ವಾಸ್ತವಾಂಶ ತಿಳಿಯಲು, ವರಿಷ್ಠ ಅಧಿಕಾರಿಗಳು ನೊಂದ ಮಹಿಳೆಯರು ಹಾಗೂ ದೂರುದಾರರೊಂದಿಗೆ ನೇರವಾಗಿ ಸಮಾವೇಶ ನಡೆಸಿ ಅವರ ಅಹವಾಲುಗಳನ್ನು ಆಲಿಸಬೇಕು ಎಂಬ ಒತ್ತಾಯವೂ ಕೇಳಿಬಂದಿದೆ. ಠಾಣೆ ಯಲ್ಲಿ ಬಿಡಿ ಕಾಸು ಇಲ್ಲಾಂದ್ರೆ ಕೆಲಸ ಆಗಲ್ಲ. ಹಣ ಕೇಳೋದು ಠಾಣೆ ಸಂಪ್ರದಾಯ ಗೌರವ ಹುದ್ದೆ ಆಗಿದೆ. ಇದನ್ನು ಒಬ್ಬ ಉನ್ನತ ಮಟ್ಟದ ಅಧಿಕಾರಿಗಳ ಗಮನಕ್ಕೆ ತಂದರೆ ಸುಮ್ಮನೆ ಹೇಳಬೇಡಿ ಏನಾದರೂ ದಾಖಲೆ ಆದಾರ ಇದ್ದರೆ ಹೇಳಿ ಎಂದು ಬುದ್ಧಿಜೀವಿಯ ಮಾತು ಹೇಳಿದರು.

ಲಂಚ ಕೊಡುವುದನ್ನು ಬಹಿರಂಗವಾಗಿ ಕೊಡುವುದು ದೇಶ ಚರಿತ್ರೆಯಲ್ಲಿ ಎಲ್ಲೂ ಇಲ್ಲ ಇಂಥ ಸಂದರ್ಭದಲ್ಲಿ ಸಾಕ್ಷಿ ಕೊಡಿ ದಾಖಲೆ ಕೊಡಿ ಅಂತ ಕೇಳಿದ ಮೂರ್ಖ ಅಧಿಕಾರಿಗಳಿಗೆ ಏನಂತ ಹೇಳಬೇಕು ಎಂದು ಸಾರ್ವಜನಿಕರು ಚೀಮಾರಿ ಹಾಕುತ್ತಿದ್ದಾರೆ.

# ಮಹಿಳೆಯರು, ಯುವಕರು ಸಂಘಟಿತರಾದಾಗ ಬಲಿಷ್ಠ ಸಮಾಜ ನಿರ್ಮಾಣ: ಡಾ.ಕಜೆ ಅಭಿಮತ

**ಹವ್ಯಕ ಮಹಾಸಭಾ ಅಧ್ಯಕ್ಷರಾಗಿ ಡಾ.ಕಜೆ 12 ನೇ ಬಾರಿ ಪುನರಾಯ್ಕೆ**




ಬೆಂಗಳೂರು: ಸಂಘಸಂಸ್ಥೆಗಳು ಸಕ್ರಿಯವಾಗಿದ್ದಾಗ ಸಮಾಜದಿಂದ ಸಹಜವಾಗಿ ಬೆಂಬಲ ವ್ಯಕ್ತವಾಗುತ್ತದೆ ಎಂದು ಡಾ.ಗಿರಿಧರ ಕಜೆ ಹೇಳಿದ್ದಾರೆ.

ಬೆಂಗಳೂರಿನ ಮಲ್ಲೇಶ್ವರದಲ್ಲಿ ಶುಕ್ರವಾರ ನಡೆದ ಅಖಿಲ ಹವ್ಯಕ ಮಹಾಸಭೆಯ 83ನೆಯ ವರ್ಷದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಡಾ.ಕಜೆ, ಕಾರ್ಯಕ್ರಮಗಳು ಹೆಚ್ಚಾಗಿ ನಡೆದಾಗ ಸಮಾಜವು ನಮ್ಮನ್ನು ಗುರುತಿಸುತ್ತದೆ ಹಾಗೂ ನಾವು ಹೆಚ್ಚು ಜನರನ್ನು ತಲುಪಲು ಸಾಧ್ಯ. ಹವ್ಯಕ ಮಹಾಸಭೆಯು ಈ ದಿಶೆಯಲ್ಲಿ ಪ್ರಾದೇಶಿಕವಾಗಿಯೂ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದು, ಜಾತಿಯನ್ನೂ ಮೀರಿ ಸಮಷ್ಟಿ ಸಮಾಜಕ್ಕೆ ಉಪಕಾರಿಯಾದ ಅನೇಕ ಕಾರ್ಯಕ್ರಮಗಳನ್ನು ನಡೆಸುತ್ತಿದೆ ಎಂದರು.

ಮಹಿಳೆಯರು ಸಕ್ರಿಯರಾದಾಗ ಮಾತ್ರ ಸಮಗ್ರ ಸಮಾಜದ ಜಾಗೃತಿ ಸಾಧ್ಯ. ಈ ಹಿನ್ನೆಲೆಯಲ್ಲಿ ಮಹಿಳಾ ಸಂಘಟನೆಯನ್ನು ಬಲಗೊಳಿಸಲಾಗುತ್ತಿದ್ದು, ಹವ್ಯಕರು ಹೆಚ್ಚಿನ ಸಂಖ್ಯೆಯಲ್ಲಿರುವ 83 ಪ್ರಾಂತ್ಯಗಳಲ್ಲಿ ಹವ್ಯಕ ಮಹಿಳಾ ವೇದಿಕೆಯನ್ನು ಪ್ರಾರಂಭಿಸಲಾಗುತ್ತಿದೆ. ಡಿಸೆಂಬರ್ 20 ರಂದು ಬೃಹತ್ ಹವ್ಯಕ ಮಹಿಳಾ ಸಮಾವೇಶ ಆಯೋಜಿಸಲಾಗುವುದು. ಮುಂದಿನ ವರ್ಷ ಯುವಕರ ಸಂಘಟನೆಗೆ ಯೋಜಿಸಲಾಗಿದ್ದು, ದೇಶ – ಹೊರದೇಶಗಳ 84 ಪ್ರಾಂತ್ಯಗಳಲ್ಲಿ ಹವ್ಯಕ ಯುವ ವೇದಿಕೆ ಕಾರ್ಯಾರಂಭ ಮಾಡಲಿದೆ. ಮಹಿಳೆಯರು ಹಾಗೂ ಯುವಕರು ಸಂಘಟಿತರಾದಾಗ ಬಲಿಷ್ಠ ಸಂಘಟನೆ ನಿರ್ಮಾಣವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ವೈವಾಹಿಕ ಸಮಸ್ಯೆಗಳು ಸೇರಿದಂತೆ ಸಮಾಜದ ಅನೇಕ ಜ್ವಲಂತ ಸಮಸ್ಯೆಗಳಿಗೆ ಸಂಘಟನೆಯೇ ಪರಿಹಾರವಾಗಿದ್ದು, ಸಂಘಟನೆ ಬಲಿಷ್ಠವಾದಾಗ ಸಮಾಜ ಸುಭಿಕ್ಷೆಯಿಂದ ಇರಲು ಸಾಧ್ಯ ಎಂದರು.

ನಮ್ಮ ಮೂಲನೆಲೆಗಳು ನದಿ ತಿರುವು ಯೋಜನೆ, ಪರಿಸರ ಹಾನಿ ಮುಂತಾದ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದು, ಅ.10 ರಂದು ಈ ಕುರಿತಾಗಿ ಬೃಹತ್ ಪ್ರತಿಭಟನೆ ನಡೆಯಲಿದೆ. ಇದರಲ್ಲಿ ನಾವೆಲ್ಲರೂ ಕೈಜೋಡಿಸೋಣ ಎಂದು ಕರೆನೀಡಿದರು.

ವಾರ್ಷಿಕ ಮಹಾಸಭೆಯಲ್ಲಿ ಪದಾಧಿಕಾರಿಗಳು ಹಾಗೂ ಸಾಗರ, ಮಂಗಳೂರು, ಬೆಂಗಳೂರು, ಉತ್ತರ ಕನ್ನಡ, ಕಾಸರಗೋಡು ಸೇರಿದಂತೆ ಬೇರೆಬೇರೆ ಪ್ರಾಂತಗಳ ನಿರ್ದೇಶಕರು – ಸದಸ್ಯರು ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಭಾಗವಹಿಸಿದ್ದರು.

**ಡಾ.ಕಜೆ 12ನೇ ಬಾರಿಗೆ ಪುನರಾಯ್ಕೆ**

**ಅಖಿಲ ಹವ್ಯಕ ಮಹಾಸಭೆಯ ಅಧ್ಯಕ್ಷರಾಗಿ ಡಾ.ಗಿರಿಧರ ಕಜೆ 12 ನೇ ಬಾರಿಗೆ ಸರ್ವಾನುಮತದಿಂದ ಪುನರಾಯ್ಕೆಯಾದರು.**

**ನೂತನ ಆಡಳಿತ ಮಂಡಳಿ:**

**ಡಾ. ಗಿರಿಧರ ಕಜೆ – ಅಧ್ಯಕ್ಷರು**

**ಆರ್ ಎಂ ಹೆಗಡೆ ಬಾಳೆಸರ – ಉಪಾಧ್ಯಕ್ಷರು**

**ಶ್ರೀಧರ ಜೆ ಭಟ್ಟ ಕೆಕ್ಕಾರು – ಉಪಾಧ್ಯಕ್ಷರು**

**ಸಿ.ಎ. ವೇಣುವಿಘ್ನೇಶ ಸಂಪ – ಪ್ರಧಾನ ಕಾರ್ಯದರ್ಶಿ**

**ಪ್ರಶಾಂತ ಕುಮಾರ ಭಟ್ಟ ಮಲವಳ್ಳಿ – ಕಾರ್ಯದರ್ಶಿ**

**ಆದಿತ್ಯ ಹೆಗಡೆ ಕಲಗಾರು – ಕಾರ್ಯದರ್ಶಿ**

**ಕೃಷ್ಣಮೂರ್ತಿ ಎಸ್. ಭಟ್ ಯಲಹಂಕ – ಕೋಶಾಧಿಕಾರಿ**

### ನೌಬಾದ್‌ನಲ್ಲಿ ಬಸವೇಶ್ವರ ಮೂರ್ತಿ ಅನಾವರಣ

## ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸಿದ ಬಸವಣ್ಣ: ಡಾ.ಬೆಲ್ದಾಳೆ



**ಬೀದರ್, ಅ. 2:** ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವ ಬಸವಣ್ಣನವರು, ಅನುಭವ ಮಂಟಪದಲ್ಲಿ ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಪ್ರವೇಶ ಕಲ್ಪಿಸಿ ಸಾಮಾಜಿಕ ಸಮಾನತೆಯನ್ನು ಸಾರಿದ್ದರು ಎಂದು ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ ಹೇಳಿದರು.

ನಗರದ ಹೊರವಲಯದ ನೌಬಾದ ಕೆಐಎಡಿಬಿ ವಸತಿ ಲೇಔಟ್‌ನಲ್ಲಿ ಸ್ಥಾಪಿಸಿರುವ ಬಸವೇಶ್ವರರ ನೂತನ ಮೂರ್ತಿಯನ್ನು ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಅನಾವರಣಗೊಳಿಸಿ ಮಾತನಾಡಿದ ಅವರು, ಬಸವಣ್ಣನವರ ತತ್ವಗಳು ಜಾತಿ, ವರ್ಗ, ವರ್ಣ, ಲಿಂಗಭೇದವಿಲ್ಲದ ಸಮಾನತೆಯ ತತ್ವಗಳಾಗಿವೆ. ಬಸವ ಮಂಟಪ ನಿರ್ಮಾಣ ಕಾರ್ಯಕ್ಕೆ ವೈಯಕ್ತಿಕವಾಗಿ 1 ಲಕ್ಷ ಕೊಡುವುದಾಗಿ ಈ ಸಂದರ್ಭದಲ್ಲಿ ಘೋಷಣೆ ಮಾಡಿದರು.

ಶಾಸಕ ರಹೀಂಖಾನ್ ಮಾತನಾಡಿ, ಬಸವಣ್ಣನವರ ಏಕದೇವೋಪಾಸನೆ ತತ್ವವನ್ನು ಎಲ್ಲರೂ ಆಚರಣೆಯಲ್ಲಿ ತರಬೇಕು ಎಂದು ಹೇಳಿದರು.

ಲಿಂಗಾಯತ ಸಮಾಜ ಎಲ್ಲ ಕ್ಷೇತ್ರಗಳಲ್ಲೂ ಮುಂದುವರಿದಿದೆ. ವಿಶ್ವಗುರು ಬಸವಣ್ಣನವರನ್ನು ಧರ್ಮಗುರುವೆಂದು ನಂಬಿದ ಸಮಾಜದಲ್ಲಿ ಅವರ ತತ್ವಗಳ ಅನುಷ್ಠಾನ ನಿರೀಕ್ಷಿಸಿದಷ್ಟು ಆಗಿಲ್ಲ. ಧರ್ಮಗುರುಗಳ ಮಾರ್ಗದರ್ಶನದಲ್ಲಿ ಬಸವ ತತ್ವವನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವ ಕೆಲಸ ಆಗಬೇಕು ಎಂದರು.

ಇದಕ್ಕೂ ಮುನ್ನ ನೌಬಾದ್‌ನ ಬಸವೇಶ್ವರ ವೃತ್ತದಿಂದ ಬಸವ ಮಂಟಪದವರೆಗೆ ಅಲಂಕೃತ ಸಾರೋಟಿನಲ್ಲಿ ಬಸವಣ್ಣನವರ ಭಾವಚಿತ್ರದ ಮೆರವಣಿಗೆ ನಡೆಯಿತು. ಡಿ.ಜೆ, ಕಲಾ ತಂಡಗಳ ಪ್ರದರ್ಶನ, ಯುವಕರ ನರ್ತನ ಮೆರವಣಿಗೆ ಮೆರುಗು ಹೆಚ್ಚಿಸಿದವು. ಎಸ್‌ಎಸ್‌ಎಸ್‌ಕೆ ಅಧ್ಯಕ್ಷ ಸೂರ್ಯಕಾಂತ ನಾಗಮಾರಪಳ್ಳಿ ಮೆರವಣಿಗೆಗೆ ಚಾಲನೆ ನೀಡಿದರು.

**ಬೀದರ್‌ನ ನೌಬಾದ್ ಕೆಐಎಡಿಬಿ ವಸತಿ ಲೇಔಟ್‌ನಲ್ಲಿ ನಿರ್ಮಿಸಲು ಉದ್ದೇಶಿಸಿರುವ ನೂತನ ಬಸವ ಮಂಟಪಕ್ಕೆ 50 ಲಕ್ಷ ಅನುದಾನ ನೀಡುವೆ.**
–ರಹೀಂ ಖಾನ್ ಶಾಸಕ.



ಮೈಸೂರು ದಸರಾ ಅಂಗವಾಗಿ ಶುಕ್ರವಾರ ಮೈಸೂರಿನಲ್ಲಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಚಿತ್ರ ಸಂತೆ ಉದ್ಘಾಟಿಸಿದರು.

### ಮತಗಳ ಡಿಲೀಟ್ ಮಾಡಲು ಯತ್ನ

## ಬಿಜೆಪಿಯ ಶ್ರೀನಿವಾಸ್ ಮೋತ್ಕರ್ ಮತ್ತಿತರರ ವಿರುದ್ಧ ದೂರು ದಾಖಲು



**ಬಳ್ಳಾರಿ, ಅ.02:** ಕೇಂದ್ರ ಚುನಾವಣಾ ಆಯೋಗ ನಡೆಸುತ್ತಿರುವ ವಿಶೇಷ ಸಮಗ್ರ ಮತದಾರ ಪಟ್ಟಿಯ ಪರಿಷ್ಕರಣೆಯ ಸಮೀಕ್ಷಾ ಕಾರ್ಯದ (ಎಸ್‌ಐಆರ್) ಕರಡು ಮತದಾರರ ಪಟ್ಟಿಯಲ್ಲಿನ ಮತದಾರರ ಪೈಕಿ 7561 ಮತದಾರರ ಹೆಸರು ಡಿಲೀಟ್ ಮಾಡಲು ಯತ್ನಿಸಿದ ಬಿಜೆಪಿಯ ಬಿಎಲ್‌ಎ ಶ್ರೀನಿವಾಸ್ ಮೋತ್ಕರ್ ವಿರುದ್ಧ ಕಾಂಗ್ರೆಸ್ಸಿನ ಬಿಎಲ್‌ಎ ಗೌತಮ್ ಎಸ್ ಅವರು ಬ್ರೂಸಪೇಟೆ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಬಳ್ಳಾರಿ ನಗರ ವಿಧಾನಸಭಾ ಕ್ಷೇತ್ರದ ಕರಡು ಮತದಾರರ ಪಟ್ಟಿಯ ಪೈಕಿ 7561 ಮತದಾರರ ಹೆಸರು ಡಿಲೀಟ್ ಮಾಡುವಂತೆ ಆರಂಭದಲ್ಲಿ ಚುನಾವಣಾಧಿಕಾರಿಗಳಿಗೆ ಅಕ್ರಮವಾಗಿ, ಕಾನೂನು ಬಾಹಿರವಾಗಿ ಫಾರಂ7 ಸಲ್ಲಿಸಿ, ತದನಂತರ ಪ್ರತ್ಯೇಕ ದೂರು ಸಲ್ಲಿಸಿದ್ದರು. ಈ ದೂರಿನೊಂದಿಗೆ ನೀಡಿದ ಮತದಾರರ ಪಟ್ಟಿಯಲ್ಲಿ ಬಹುತೇಕ ಅಲ್ಪಸಂಖ್ಯಾತರು ಹಾಗೂ ಹಿಂದುಳಿದ, ದಲಿತ ಸಮುದಾಯಗಳ ಮತದಾರರನ್ನೇ ಕೇಂದ್ರೀಕರಿಸಲಾಗಿದೆ.

ದೂರು ಸ್ವೀಕಾರ ವಿಳಂಬ ಆದ ಹಿನ್ನೆಲೆಯಲ್ಲಿ ನಗರ ಶಾಸಕ ನಾರಾ ಭರತ್ ರೆಡ್ಡಿ ಠಾಣೆಗೆ ತೆರಳಿ ಪೊಲೀಸ್ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಘಟನೆ ತಡರಾತ್ರಿ ನಡೆದಿದೆ. ಶಾಸಕರು ಠಾಣೆಗೆ ಭೇಟಿ ನೀಡಿದ ನಂತರ ಹೆಚ್ಚುವರಿ ಎಸ್ಪಿ ನವೀನ್ ಕುಮಾರ್, ಡಿವೈಎಸ್ಪಿ ಸ್ಥಳಕ್ಕೆ ಬಂದರು.

ಸಿಪಿಐ ಮಹಾಂತೇಶ್ ದೂರು ದಾಖಲಿಸುವುದು ವಿಳಂಬ ಆಗಿದ್ದಕ್ಕೆ ವಿಷಾದ ವ್ಯಕ್ತಪಡಿಸಿದರು.

ಎಫ್‌ಐಆರ್ ದಾಖಲಾದ ನಂತರ ಶಾಸಕರು ತೆರಳಿದರು.

### ಕಲಬುರಗಿ ಜನರಿಗೆ ಸಿಹಿಸುದ್ದಿ, ಅಕ್ಟೋಬರ್ 10ರಿಂದ ಸಂಚಾರ

## ಬೆಂಗಳೂರು-ಮುಂಬಯಿ ವಂದೇ ಭಾರತ್ ಸ್ಲೀಪರ್ ಎಕ್ಸಪ್ರೆಸ್ ರೈಲು ಆರಂಭ



**ಕಲಬುರಗಿ, ಅ. 2:** ಕಲಬುರಗಿ ಮೂಲಕ ಸಂಚರಿಸಲಿರುವ ಬೆಂಗಳೂರಿನ ಕೆಎಸ್‌ಆರ್ ನಿಲ್ದಾಣ ಮತ್ತು ಮುಂಬಯಿ ನಡುವೆ ನೂತನ ವಂದೇ ಭಾರತ್ ಸ್ಲೀಪರ್ ಎಕ್ಸ್‌ಪ್ರೆಸ್ ರೈಲಿಗೆ ರೈಲ್ವೆ ಮಂಡಳಿ ಅನುಮೋದನೆ ನೀಡಿದೆ. ಅಕ್ಟೋಬರ್ 10ರಿಂದ ಆರಂಭವಾಗಲಿರುವ ರೈಲಿನ ಸಮಯ, ಪ್ರಮುಖ ನಿಲುಗಡೆ ವಿವರಗಳನ್ನು ಸೊಲ್ಲಾಪುರ ವಿಭಾಗೀಯ ರೈಲ್ವೆ ಕಚೇರಿಯ ವಾಣಿಜ್ಯ ಅಧಿಕಾರಿಗಳು ಬಿಡುಗಡೆ ಮಾಡಿದ್ದಾರೆ.

ಕರ್ನಾಟಕ, ಆಂಧ್ರ, ತೆಲಂಗಾಣ ಮತ್ತು ಮಹಾರಾಷ್ಟ್ರ ನಾಲ್ಕು ರಾಜ್ಯಗಳ ಮೂಲಕ ಸಂಚರಿಸುವ ಈ ರೈಲು ರಾಜ್ಯದ ರಾಜಧಾನಿ ಬೆಂಗಳೂರು ಮತ್ತು ದೇಶದ ಆರ್ಥಿಕ ರಾಜಧಾನಿ ಮುಂಬೈ ನಡುವೆ ಪ್ರಯಾಣಿಸುವ ಪ್ರಯಾಣಿಕರಿಗೆ ಭಾರತೀಯ ರೈಲ್ವೆ ತುಂಬ ಅನುಕೂಲವಾಗಲಿದೆ.

ಬಹುನಿರೀಕ್ಷಿತ ಕೆಎಸ್‌ಆರ್ ಬೆಂಗಳೂರು – ಮುಂಬಯಿ ಸಿಎಸ್‌ಎಂಟಿ ನಡುವಿನ ವಂದೇ ಭಾರತ್ ಸ್ಲೀಪರ್ ಎಕ್ಸ್‌ಪ್ರೆಸ್ ರೈಲಿನ ಸಂಚಾರ ಕುರಿತು ಬಿಡುಗಡೆ ಮಾಡಿರುವ ವೇಳಾಪಟ್ಟಿ ಅನ್ವಯ ರೈಲು ಸಂಖ್ಯೆ 27651 / 27652 ಹೆಸರಿನಲ್ಲಿ ವಾರಕ್ಕೆ 6 ದಿನ ವಂದೇ ಭಾರತ್ ಸ್ಲೀಪರ್ ರೈಲು ಸಂಚರಿಸಲಿದೆ.

ರೈಲು ಸಂಖ್ಯೆ 27652 (ಬೆಂಗಳೂರು–ಮುಂಬೈ): ಸೋಮವಾರ ಹೊರತುಪಡಿಸಿ ವಾರದ ಉಳಿದ 6 ದಿನ ಸಂಚಾರ. ರೈಲು ಸಂಖ್ಯೆ 27651 (ಮುಂಬೈ–ಬೆಂಗಳೂರು): ಮಂಗಳವಾರ ಹೊರತುಪಡಿಸಿ ವಾರದ ಉಳಿದ 6 ದಿನ ಸಂಚರಿಸಲಿದೆ.

ಬೆಂಗಳೂರು – ಮುಂಬಯಿ ರೈಲು ಸಂಖ್ಯೆ: 27652 : ಕೆಎಸ್‌ಆರ್ ಬೆಂಗಳೂರು ನಿಲ್ದಾಣದಿಂದ ರಾತ್ರಿ 10:00 ಗಂಟೆಗೆ (22:00) ಹೊರಟು, ಮರುದಿನ ಮಧ್ಯಾಹ್ನ 1:50ಕ್ಕೆ (13:50) ಮುಂಬಯಿನ ಛತ್ರಪತಿ ಶಿವಾಜಿ ಮಹಾರಾಜ್ ಟರ್ಮಿನಸ್ ತಲುಪಲಿದೆ. ಈ ರೈಲು ಸೋಮವಾರ ಹೊರತುಪಡಿಸಿ ವಾರದ ಉಳಿದ ಆರು ದಿನವೂ ಸಂಚರಿಸಲಿದೆ.

ಮುಂಬಯಿ – ಬೆಂಗಳೂರು (ರೈಲು ಸಂಖ್ಯೆ: 27651): ಮುಂಬೈನಿಂದ ರಾತ್ರಿ 10:30ಕ್ಕೆ (22:30) ಹೊರಡುವ ರೈಲು, ಮರುದಿನ ಮಧ್ಯಾಹ್ನ 2:50ಕ್ಕೆ (14:50) ಬೆಂಗಳೂರು ತಲುಪಲಿದೆ. ಈ ರೈಲು ಮಂಗಳವಾರ ಹೊರತುಪಡಿಸಿ ಉಳಿದ ಆರು ದಿನಗಳ ಕಾಲ ಸೇವೆ ನೀಡಲಿದೆ.

ಈ ರೈಲು ಬೆಂಗಳೂರು ನಂತರ ಧರ್ಮಾವರಂ, ಅನಂತಪುರಂ, ಗುಂತಕಲ್, ಮಂತ್ರಾಲಯ, ರಾಯಚೂರು, ವಾಡಿ ಮತ್ತು ಕಲಬುರಗಿ, ಸೊಲ್ಲಾಪುರ, ಪುಣೆ ಮತ್ತು ಕಲ್ಯಾಣ ಮಾರ್ಗವಾಗಿ ಮುಂಬಯಿ ಛತ್ರಪತಿ ಶಿವಾಜಿ ಟರ್ಮಿನಲ್ ತಲುಪಲಿದೆ. ಇದೇ ಮಾರ್ಗವಾಗಿಯೇ ರೈಲು ಮರಳಿ ಮುಂಬಯಿನಿಂದ ಬೆಂಗಳೂರಿಗೆ ಆಗಮಿಸಲಿದೆ. ಅತ್ಯಾಧುನಿಕ ಸೌಲಭ್ಯಗಳಿರುವ 2 ವಂದೇ ಭಾರತ್ ಸ್ಲೀಪರ್ ರೇಕ್‌ಗಳು ಈ ಮಾರ್ಗದಲ್ಲಿ ಕಾರ್ಯನಿರ್ವಹಿಸಲಿವೆ. ರಾತ್ರಿ ವೇಳೆ ಆರಾಮದಾಯಕ ನಿದ್ರೆಯೊಂದಿಗೆ ವೇಗದ ಪ್ರಯಾಣವನ್ನು ಈ ರೈಲು ಒದಗಿಸಲಿದ್ದು, ಐಟಿ ಉದ್ಯೋಗಿಗಳು, ವ್ಯಾಪಾರಿಗಳು ಹಾಗೂ ಪ್ರವಾಸಿಗರಿಗೆ ಅತ್ಯಂತ ಪ್ರಯೋಜನಕಾರಿಯಾಗಲಿದೆ.

ಈ ರೈಲು ಬೆಂಗಳೂರು–ಮುಂಬಯಿ ನಡುವಿನ ಪ್ರಯಾಣದ ಅವಧಿಯನ್ನು ಗಣನೀಯವಾಗಿ ತಗ್ಗಿಸಲಿದೆ. ಒಟ್ಟು 2 ರೇಕ್‌ಗಳೊಂದಿಗೆ ಈ ಮಾರ್ಗದಲ್ಲಿ ಕಾರ್ಯಾಚರಣೆ ಆರಂಭವಾಗಲಿದೆ. ಈಗಾಗಲೇ ಅಕ್ಟೋಬರ್ 10ರಂದು ಉದ್ಘಾಟನೆ ಎಂದು ನಿರ್ಧರಿಸಲಾಗಿದ್ದು, ಅನುಕೂಲಕ್ಕೆ ಅನುಗುಣವಾಗಿ 11ರಂದು ಉದ್ಘಾಟನೆಯೂ ಆಗಬಹುದು. ಇದಕ್ಕೂ ಮುಂಚೆ ಅಂದರೆ ಒಂದೆರಡು ದಿನಗಳಲ್ಲಿ ಟಿಕೆಟ್ ದರ ಕೂಡ ಪ್ರಕಟಿಸಲಾಗುವುದು ಎಂದು ಸೊಲ್ಲಾಪುರ ರೈಲ್ವೆ ವಿಭಾಗೀಯ ವಾಣಿಜ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಕುಲಪತಿ ಪ್ರೊ.ಶಶಿಕಾಂತ ಉಡಿಕೇರಿ ಕರೆ

## ಅಧ್ಯಾಪಕರ ಸಂಘದ ಆರ್ಥಿಕ ಬಲವರ್ಧನೆಗೆ ಅಧ್ಯಾಪಕರ ದೇಣಿಗೆ ಅತ್ಯಗತ್ಯ



**ಕಲಬುರಗಿ, ಅ. 2:** ಕನ್ನಡ ಅಧ್ಯಾಪಕರ ಸಂಘ ಸ್ಥಾಪಿಸಿರುವುದು ಬಹಳ ಸಂತೋಷ. ಸಂಘಗಳು ವಿತ್ತೀಯವಾಗಿ ಬಲಿಷ್ಠವಾಗಿರಬೇಕಾದರೆ, ಅಧ್ಯಾಪಕರು ಸಂಘಕ್ಕೆ ದೇಣಿಗೆ ನೀಡಿದಾಗ ಮಾತ್ರ ಈ ಸಂಘ ತನ್ನ ಕಾರ್ಯಚಟುವಟಿಕೆಗಳೊಂದಿಗೆ ಅಭಿವೃದ್ಧಿಯಾಗುತ್ತದೆ. ಸಂಘವು ಕನ್ನಡ ಭಾಷೆಯ ಪೋಷಣೆ ಉಳಿವಿಗಾಗಿ ಕೆಲಸ ಮಾಡಬೇಕು. ಬರಹಗಾರರಿಗೆ ಲೇಖಕರಿಗೆ ಸಂಘ ಪ್ರೋತ್ಸಾಹ ನೀಡಲಿ. ಸಂಘದ ವತಿಯಿಂದ ಬೇರೆ ಬೇರೆ ತರಹದ ಪುಸ್ತಕಗಳ ಪ್ರಕಟಣೆಯಾಗಲಿ ಎಂದು ಕಲಬುರಗಿ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಶಶಿಕಾಂತ ಉಡಿಕೇರಿ ಹೇಳಿದರು.

ಕೇಂದ್ರೀಯ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ. ವಿಕ್ರಮ ವಿಸಾಜಿ ಮಾತನಾಡಿ, ಕನ್ನಡ ಅಧ್ಯಯನ ಸಂಸ್ಥೆ ಪವಿತ್ರ ಬಹಳ ಸ್ಥಳ ವಾಗಿದೆ. ಅನೇಕ ಸಂಘಗಳು ಬೇಗನೆ ಹುಟ್ಟುತ್ತವೆ ಅಷ್ಟೇ ಬೇಗನೆ ಮರೆಯಾಗುತ್ತವೆ. ಈ ಸಂಘ ಗಟ್ಟಿಯಾಗಿ ಬೆಳೆದು ಉತ್ತಮ ಕಾರ್ಯನಿರ್ವಹಿಸಲಿ. ಕನ್ನಡ ಅಧ್ಯಾಪಕರ ಸಂಘ ಬೌದ್ಧಿಕ ವಿಕಾಸದ ವಾತಾವರಣ ನಿರ್ಮಾಣ ಮಾಡುವದಕೆ ಪ್ರಯತ್ನಿಸಲಿ.

ಇಂದು ಅಧ್ಯಯನ ಸೊರಗುತ್ತಿದೆ. ಅಧ್ಯಾಪಕರು ಆತ್ಮಾವಲೋಕನ ಮಾಡಿಕೊಳ್ಳಬೇಕು. ಪಾಲಕರು ತಮ್ಮ ಮಕ್ಕಳಿಗೆ ಕನ್ನಡ ಅಧ್ಯಯನ ಮಾಡಿಸುತ್ತಿಲ್ಲ. ಇಂದು ಅವಕಾಶಗಳು ಜಾಸ್ತಿಯಾಗುತ್ತಿವೆ, ಆದರೆ ಗುಣಮಟ್ಟ ಕುಸಿಯುತ್ತಿದೆ ಇದು ದುರಂತದ ಸಂಗತಿಯಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರು, ಕಲಾ ನಿಕಾಯದ ಡೀನರಾದ ಪ್ರೊ. ಎಚ್. ಟಿ. ಪೋತೆ ಮಾತನಾಡಿ, ಕನ್ನಡದ ಉಳಿವಿಗೆ ಬೆಳವಣಿಗೆಗೆ ಕನ್ನಡ ಅಧ್ಯಾಪಕರು ಸಂಘಟಿತರಾಗಬೇಕು. ಅಧ್ಯಾಪಕರಲ್ಲಿ ಪರಸ್ಪರ ಸಹಕಾರ, ಸಹೃದಯತೆ, ಗೌರವ, ಪ್ರೀತಿ, ವಿಶ್ವಾಸ ಇರಬೇಕು.

ಅಧ್ಯಾಪಕರು ಓದುವ ಬರೆಯುವ ಹವ್ಯಾಸ ಬೆಳೆಸಿಕೊಳ್ಳಬೇಕು. ಗುರಿ ಇಟ್ಟುಕೊಳ್ಳಬೇಕು. ಕನಸು ಕಟ್ಟಿಕೊಳ್ಳಬೇಕು. ಕನ್ನಡ ಕಟ್ಟುವ, ಸಂಘ ಕಟ್ಟುವ ಕೆಲಸಕ್ಕೆ ಎಲ್ಲರೂ ಕೈಜೋಡಿಸಬೇಕು ಎಂದು ಸಲಹೆ ನೀಡಿದರು.

## ಎಫ್‌ಐಆರ್ ಬೆದರಿಕೆಗಳಿಗೆ ನಾವ್ಯಾರೂ ಬೆದರುವುದಿಲ್ಲ: ಸೋಮಶೇಖರರೆಡ್ಡಿ



**ಬಳ್ಳಾರಿ, ಅ 02:** ಎಸ್‌ಐಆರ್ ವಿಚಾರದಲ್ಲಿ ಕಾಂಗ್ರೆಸ್ ನವರ ದಾಖಲಿಸಿರುವ ಎಫ್ ಐಆರ್‌ಗೆ ನಾವು ಯಾರು ಹೆದರೋ ಪ್ರಶ್ನೆಯೇ ಇಲ್ಲವೆಂದು ನಗರದ ಮಾಜಿ ಶಾಸಕ ಸೋಮಶೇಖರ್ ರೆಡ್ಡಿ ಹೇಳಿದ್ದಾರೆ.

ಗಾಂಧಿ ಜಯಂತಿ ಆಚರಿಸಿದ ನಂತರ ತಮ್ಮನ್ನು ಭೇಟಿ ಮಾಡಿ ಮಾಧ್ಯಮಗಳ ಜೊತೆ ಮಾತನಾಡಿದ ಅವರು ನ್ಯಾಯಾಂಗದ ಮೇಲೆ ಸಂಪೂರ್ಣ ನಂಬಿಕೆ ಇದೆ ಕಾನೂನು ಹೋರಾಟ ಮಾಡ್ತೇವೆ. ಮತದಾರರ ಹೆಸರು ತೆಗೆದು ಹಾಕುವ ವಿಚಾರಕ್ಕೆ ಸಂಬಂಧಿಸಿದಂತೆ ನಿನ್ನೆ ಕಾಂಗ್ರೆಸ್ ನವರು ಬಿಜೆಪಿಯ ಬಿಎಲ್ ಮತ್ತು ಕಾರ್ಪೋರೇಟರ್ ಶ್ರೀನಿವಾಸ್ ಮೋತ್ಕರ್ ವಿರುದ್ಧ ದೂರು ದಾಖಲಿಸಿದ್ದಾರೆ. ನಗರದಲ್ಲಿ ಈ ಹಿಂದೆ ಒಟ್ಟು 2.79 ಲಕ್ಷ ಮತದಾರರಿದ್ದರು. ಈ ಪೈಕಿ ಸುಮಾರು 76 ಸಾವಿರ ಮತಗಳನ್ನು ಪಟ್ಟಿಯಿಂದ ತೆಗೆದುಹಾಕಲಾಗಿದೆ. ಆಂಧ್ರದ ಮತದಾರರ ಪಟ್ಟಿಯಲ್ಲಿ ಹೆಸರು ಇರೋರು, ಮೃತಪಟ್ಟವರು ಹಾಗೂ ಬೇರೆಡೆಗೆ ವರ್ಗಾವಣೆ ಯಾದ ಹೆಸರುಗಳನ್ನು ಪರಿಶೀಲನೆ ಬಳಿಕ ಕೈಬಿಡಲಾಗಿದೆ. ಆದರೆ, ಮತದಾರರ ಪಟ್ಟಿಯಲ್ಲಿ ಇನ್ನೂ ಕೆಲವು ಗೊಂದಲಗಳು ಉಳಿದಿರೋ ಕಾರಣ ಬಿಜೆಪಿಯ ಬಿಎಲ್‌ಎ, ಶ್ರೀನಿವಾಸ ಮೋತ್ಕರ್ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿ ಪಟ್ಟಿ ನೀಡಿದ್ದರು. ಅಷ್ಟೆ. ಅವರೇನು ಫಾರಂ 7 ನೀಡಿಲ್ಲ. ಮತದಾರರ ಪಟ್ಟಿಯಲ್ಲಿನ ಲೋಪ ದೋಷಗಳನ್ನು ಸರಿಪಡಿಸುವುದು ಅಗತ್ಯವಾಗಿದೆ.ಯಾವ ಜಾತಿ ಜನಾಂಗದವರ ಮೇಲೆ ನಮಗೆ ವಿರೋಧ ಇಲ್ಲ.ಎಫ್‌ಐಆರ್ ಬಗ್ಗೆ ಆತಂಕಪಡುವ ಪ್ರಶ್ನೆಯೇ ಇಲ್ಲ. ಮುಂದಿನ ಚುನಾವಣೆಯಲ್ಲಿ ಸೋಲುವ ಭೀತಿಯಿಂದ ಕಾಂಗ್ರೆಸ್‌ನವರು ಇಂತಹ ಕೃತ್ಯಗಳು ಎಸಗುತ್ತಿದ್ದಾರೆ ಎಂದು ಆಗ್ರಹ ವ್ಯಕ್ತಪಡಿಸಿದರು.

## ರೈತರ ಕಲ್ಯಾಣಕ್ಕೆ ಕೇಂದ್ರ ಸರ್ಕಾರ ಬದ್ಧ ರಾಜ್ಯಸಭೆ ಮಾಜಿ ಸದಸ್ಯ ಈರಣ್ಣ ಕಡಾಡಿ



**ಬೆಳಗಾವಿ, ಅ.2:** ಕೇಂದ್ರ ಸರ್ಕಾರ ರೈತರ ಕಲ್ಯಾಣಕ್ಕೆ ಬದ್ಧವಾಗಿದೆ ಎಂದು ರಾಜ್ಯಸಭೆ ಮಾಜಿ ಸದಸ್ಯ ಈರಣ್ಣ ಕಡಾಡಿ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಅವರು, '2014ಕ್ಕೂ ಮೊದಲು ಯುಪಿಎ ಸರ್ಕಾರದ ಅವಧಿಯಲ್ಲಿ ರೈತರು ಕಬ್ಬಿನ ಹಣ ಪಡೆಯಲು ವರ್ಷಗಟ್ಟಲೆ ಕಾಯಬೇಕಿತ್ತು ಮತ್ತು ಸಕ್ಕರೆ ಕಾರ್ಖಾನೆಗಳು ಎಕ್ಸ್ ಮಿಲ್ ದರದಲ್ಲಿ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದ್ದವು. ಆದರೆ, ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಸುಮಾರು 16,600 ಕೋಟಿ ಬಾಕಿ ಪಾವತಿಗೆ ಕ್ರಮ ಕೈಗೊಂಡಿತು ಮತ್ತು ನೇರ ಪಾವತಿ ವ್ಯವಸ್ಥೆ ಜಾರಿಗೆ ತಂದಿತು ಎಂದರು.

ಈ ವರ್ಷವೂ ಎಫ್‌ಆರ್‌ಪಿ ಹೆಚ್ಚಳವಾಗಲಿದ್ದು, 2026ರ ಮೇ ತಿಂಗಳಲ್ಲಿ ಇದನ್ನು 365ಕ್ಕೆ ಹೆಚ್ಚಿಸಲಾಗಿದೆ. ಸಕ್ಕರೆ ಕಾರ್ಖಾನೆಗಳ ಆರ್ಥಿಕ ಸಬಲತೆಗಾಗಿ ಎಥೆನಾಲ್ ಉತ್ಪಾದನೆಗೆ ಒತ್ತು ನೀಡಲಾಗಿದ್ದು, ಹಿಂದೆ ಕೇವಲ 38 ಕೋಟಿ ಲೀಟರ್ ಇದ್ದ ಎಥೆನಾಲ್ ಖರೀದಿ ಈಗ 1200 ಕೋಟಿ ಲೀಟರ್‌ಗೆ ಏರಿಕೆಯಾಗಿದೆ. ಇದರ ಪರಿಣಾಮವಾಗಿ ಕಬ್ಬು ಬೆಳೆಗಾರರಿಗೆ ಒಂದು ತಿಂಗಳಲ್ಲೇ ಹಣ ಪಾವತಿಯಾಗುತ್ತಿದೆ ಎಂದು ವಿವರಿಸಿದರು.

**ಕಬ್ಬು ಬೆಳೆಗಾರರ ಸಮಸ್ಯೆ ಕುರಿತು ಚರ್ಚಿಸಲು ಅ.12ರಂದು ಸಭೆ**

ಎಂಎಸ್‌ಪಿ (ಕನಿಷ್ಠ ಬೆಂಬಲ ಬೆಲೆ) ಎಂದರೇ 'ಮಿನಿಮಮ್ ಸೆಲ್ಲಿಂಗ್ ಪ್ರೈಸ್' (ಕನಿಷ್ಠ ಮಾರಾಟ ಬೆಲೆ) ಎಂಬ ತಪ್ಪು ಅಭಿಪ್ರಾಯವಿದ್ದು, ಎಂಎಸ್‌ಪಿಗೂ ಹಾಗೂ ಎಫ್‌ಆರ್‌ಪಿಗೂ ಯಾವುದೇ ಸಂಬಂಧವಿಲ್ಲ' ಎಂದು ತಿಳಿಸಿದರು.

ಕರ್ನಾಟಕದ ಕಬ್ಬು ಬೆಳೆಗಾರರ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಅಕ್ಟೋಬರ್ 12ರಂದು ಕೇಂದ್ರ ಸಚಿವಾಲಯ, ಪೆಟ್ರೋಲಿಯಂ ಸಚಿವಾಲಯ ಹಾಗೂ ರೈತ ಮುಖಂಡರು ಮತ್ತು ರಾಜ್ಯ ಸರ್ಕಾರದೊಂದಿಗೆ ಮಹತ್ವದ ಸಭೆ ನಡೆಯಲಿದೆ. ರೈತರು ಪ್ರತಿಭಟನೆ ನಡೆಸುವ ಅಗತ್ಯವಿಲ್ಲದೆ, ದೆಹಲಿಗೆ ಬಂದು ಮುಕ್ತ ಚರ್ಚೆಯಲ್ಲಿ ಭಾಗವಹಿಸಿ ಸಮಸ್ಯೆ ಬಗೆಹರಿಸಿಕೊಳ್ಳಬಹುದು' ಎಂದು ಕಡಾಡಿ ಆಹ್ವಾನಿಸಿದರು. ರಾಜ್ಯ ಕಾಂಗ್ರೆಸ್ ಸರ್ಕಾರ ಪೆಟ್ರೋಲ್, ಡೀಸೆಲ್ ಹಾಗೂ ವಿದ್ಯುತ್ ಬೆಲೆ ಏರಿಕೆ ಮಾಡುತ್ತಿರುವುದನ್ನು ಖಂಡಿಸಿದ ಅವರು, 'ಕರ್ನಾಟಕ ಸರ್ಕಾರವೂ ಎಫ್‌ಆರ್‌ಪಿ ಜತೆಗೆ ಎಸ್‌ಎಪಿ (ರಾಜ್ಯ ಸಲಹಾ ಬೆಲೆ) ಜಾರಿಗೊಳಿಸಬೇಕು' ಎಂದೂ ಈರಣ್ಣ ಕಡಾಡಿ ಒತ್ತಾಯಿಸಿದರು.

### 47 ವರ್ಷಗಳ ಸಿಕ್ಯಾಬ್ ಸೇವೆಗೆ ಬಸವ ಪುರಸ್ಕಾರ

## ಈ ಗೌರವ ನನ್ನದಲ್ಲ, ಸಂಸ್ಥಾಪಕ ದಿ. ಡಾ. ಎಸ್.ಎ. ಪುಣೇಕರ್ ಅವರಿಗೆ ಅರ್ಪಣೆ: ಎ.ಎಸ್. ಪಾಟೀಲ ವಿನಮ್ರ ನುಡಿ




**ವಿಜಯಪುರ, ಅ.2–** ಸಿಕ್ಯಾಬ್ ಶಿಕ್ಷಣ ಸಂಸ್ಥೆಯಲ್ಲಿ ಕಳೆದ 47 ವರ್ಷಗಳಿಂದ ಸಲ್ಲಿಸುತ್ತಿರುವ ಸೇವೆಯನ್ನು ಗುರುತಿಸಿ, ಸಂಸ್ಥೆಯ ಕಾರ್ಯದರ್ಶಿ ಎ.ಎಸ್. ಪಾಟೀಲ ಅವರಿಗೆ ಬೆಂಗಳೂರಿನ ಬಸವ ಪರಿಷತ್‌ನ 'ಬಸವ ಪುರಸ್ಕಾರ ಪ್ರಶಸ್ತಿ 2026' ನೀಡಿ ಗೌರವಿಸಲಾಯಿತು.

ಬಸವ ಪುರಸ್ಕಾರ 2026ರ ಅಂಗವಾಗಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಸಾಧಕರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಸಿಕ್ಯಾಬ್ ಸಂಸ್ಥೆಯ ಮೂಲಕ ಸಲ್ಲಿಸುತ್ತಿರುವ ದೀರ್ಘಕಾಲದ ಸೇವೆ ಹಾಗೂ ಶೈಕ್ಷಣಿಕ ಕ್ಷೇತ್ರಕ್ಕೆ ನೀಡಿರುವ ಕೊಡುಗೆಯನ್ನು ಪರಿಗಣಿಸಿ ಎ.ಎಸ್. ಪಾಟೀಲ ಅವರಿಗೆ ಬಸವ ಪುರಸ್ಕಾರ ಪ್ರದಾನ ಮಾಡಲಾಯಿತು.

ಪುರಸ್ಕಾರ ಸ್ವೀಕರಿಸಿ ಮಾತನಾಡಿದ ಎ.ಎಸ್. ಪಾಟೀಲ ಅವರು, ?ನನಗೆ ದೊರೆತಿರುವ ಈ ಪುರಸ್ಕಾರವನ್ನು ವೈಯಕ್ತಿಕ ಗೌರವವೆಂದು ಪರಿಗಣಿಸುವುದಿಲ್ಲ. ಸಿಕ್ಯಾಬ್ ಶಿಕ್ಷಣ ಸಂಸ್ಥೆಯ ಸಂಸ್ಥಾಪಕರಾದ ದಿ. ಡಾ. ಎಸ್.ಎ. ಪುಣೇಕರ್ ಅವರು ಶಿಕ್ಷಣ ಕ್ಷೇತ್ರದಲ್ಲಿ ಬಿತ್ತಿದ ಸೇವಾ ಆಶಯದ ಫಲವೇ ಈ ಗೌರವ. ಆದ್ದರಿಂದ ಈ ಪುರಸ್ಕಾರವನ್ನು ಅವರ ಸ್ಮರಣೆಗೆ ಹಾಗೂ ಅವರ ಸೇವಾ ಪರಂಪರೆಗೆ ಅರ್ಪಿಸುತ್ತೇನೆ ಎಂದು ಹೇಳಿದರು. ಸಿಕ್ಯಾಬ್ ಸಂಸ್ಥೆಯಲ್ಲಿ 47 ವರ್ಷಗಳ ಕಾಲ ಸೇವೆ ಸಲ್ಲಿಸಿರುವುದು ನನ್ನ ಪಾಲಿನ ದೊಡ್ಡ ಜವಾಬ್ದಾರಿ ಮತ್ತು ಗೌರವ. ಸಂಸ್ಥಾಪಕ ದಿ. ಡಾ. ಎಸ್.ಎ. ಪುಣೇಕರ್ ಅವರ ಶೈಕ್ಷಣಿಕ ದೃಷ್ಟಿಕೋನ ಮತ್ತು ಸಮಾಜಮುಖಿ ಆಶಯಗಳನ್ನು ಮುಂದುವರಿಸಿಕೊಂಡು ಹೋಗುವುದೇ ಈ ಗೌರವಕ್ಕೆ ಸಲ್ಲಿಸುವ ನಿಜವಾದ ಗೌರವ ಎಂದು ಅವರು ತಿಳಿಸಿದರು. ಸಿಕ್ಯಾಬ್ ಶಿಕ್ಷಣ ಸಂಸ್ಥೆಯು ಹಲವು ವರ್ಷಗಳಿಂದ ಶೈಕ್ಷಣಿಕವಾಗಿ ಹಿಂದುಳಿದ ಹಾಗೂ ಬಡ ವಿದ್ಯಾರ್ಥಿಗಳಿಗೆ ಶಿಕ್ಷಣದ ಅವಕಾಶ ಕಲ್ಪಿಸುವುದರೊಂದಿಗೆ, ಗುಣಮಟ್ಟದ ಶಿಕ್ಷಣ ಮತ್ತು ವಿವಿಧ ಶೈಕ್ಷಣಿಕ ಚಟುವಟಿಕೆಗಳ ಮೂಲಕ ಸಮಾಜದಲ್ಲಿ ತನ್ನದೇ ಆದ ಸೇವಾ ಪರಂಪರೆಯನ್ನು ಬೆಳೆಸಿಕೊಂಡಿದೆ.

ಎ.ಎಸ್. ಪಾಟೀಲ ಅವರಿಗೆ ಸಂದ ಬಸವ ಪುರಸ್ಕಾರ 2026 ಅವರ 47 ವರ್ಷಗಳ ಸೇವೆಗೆ ಮಾತ್ರವಲ್ಲದೆ, ಸಿಕ್ಯಾಬ್ ಸಂಸ್ಥಾಪಕ ದಿ. ಡಾ. ಎಸ್.ಎ. ಪುಣೇಕರ್ ಅವರ ಶೈಕ್ಷಣಿಕ ಧ್ಯೇಯ ಹಾಗೂ ಸೇವಾ ಪರಂಪರೆಗೆ ಸಂದ ಗೌರವವೂ ಆಗಿದೆ.

ಸಂಸ್ಥೆಯ ಅಧ್ಯಕ್ಷ ಸಲಾವುದ್ದೀನ್ ಪುಣೇಕರ್ ಮಾತನಾಡಿ ನಮ್ಮ ಸಂಸ್ಥೆಯ ಕಾರ್ಯದರ್ಶಿಗಳಿಗೆ ಬಸವ ಪುರಸ್ಕಾರ ಪ್ರಶಸ್ತಿ ದೊರೆತಿರುವುದು ನಮ್ಮ ಸಂಸ್ಥೆಗೆ ಹೆಮ್ಮೆಯ ಸಂಗತಿ ಆಡಳಿತ ಮಂಡಳಿಯಿಂದ ಅಭಿನಂದನೆ ಸಿಸಿದರು.

## ಬೀದರ್ ಜಿಲ್ಲೆಯಲ್ಲಿ ಹಿಗ್ಗುತ್ತಿರುವ ಕಬ್ಬು ಬೆಳೆಯುವ ಪ್ರದೇಶ



**ಬೀದರ್, ಅ. 2:** ಜಿಲ್ಲೆಯಾದ್ಯಂತ ವರ್ಷದಿಂದ ವರ್ಷಕ್ಕೆ ಕಬ್ಬು ಬೆಳೆಯುವ ಪ್ರದೇಶ ಹೆಚ್ಚಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಜಿಲ್ಲೆಯಲ್ಲಿ 25 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ರೈತರು ಕಬ್ಬು ಬೆಳೆಸಿದ್ದಾರೆ. ಇದರಲ್ಲಿ ಶೇ.50ಕ್ಕೂ ಹೆಚ್ಚಿನ ಪ್ರದೇಶದಲ್ಲಿ ರೈತರು ನೀರಾವರಿ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಇನ್ನುಳಿದವರು ಮಳೆ ನೆಚ್ಚಿಕೊಂಡು ಕಬ್ಬು ಬೆಳೆಸುತ್ತಿದ್ದಾರೆ.

ಹಿಂದಿನ ಸಾಲಿನಲ್ಲಿ 22 ಸಾವಿರ ಹೆಕ್ಟೇರ್‌ನಲ್ಲಿ ಕಬ್ಬು ಬೆಳೆಸಿದ್ದರೆ, 2024ನೇ ಸಾಲಿನಲ್ಲಿ 18 ಸಾವಿರ ಹೆಕ್ಟೇರ್ ಪ್ರದೇಶ ಕಬ್ಬು ಆಕ್ರಮಿಸಿ ಕೊಂಡಿತ್ತು. ಜಿಲ್ಲೆಯ ಹೆಚ್ಚಿನ ಪ್ರದೇಶದಲ್ಲಿ ಸೋಯಾ ಅವರೆ ಬೆಳೆಸಲಾಗುತ್ತದೆ. ನಂತರದ ಸ್ಥಾನ ತೊಗರಿಗಿದೆ. ಮೂರನೇ ಸ್ಥಾನದಲ್ಲಿ ಕಬ್ಬು ಇದೆ.

ಆರಂಭದಿಂದಲೂ ಜಿಲ್ಲೆಯಲ್ಲಿ ಸೋಯಾ ಅವರೆ, ತೊಗರಿ ಸಾಮಾನ್ಯವಾಗಿ ಬೆಳೆಸಿಕೊಂಡು ಬರಲಾಗುತ್ತಿದೆ. ಆದರೆ, ಕಬ್ಬು ಮಾತ್ರ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಲೇ ಇದೆ. ಅತಿವೃಷ್ಟಿ ಹಾಗೂ ಅನಾವೃಷ್ಟಿ ನಡುವೆಯೂ ಈ ವಾಣಿಜ್ಯ ಬೆಳೆ ಬೆಳೆಯಬಹುದಾಗಿದೆ. ಮಾರುಕಟ್ಟೆಯಲ್ಲಿ ಯಾವಾಗಲೂ ಉತ್ತಮ ಬೆಲೆಯೂ ಇದಕ್ಕೆ ಸಿಗುತ್ತಿರುವು ದರಿಂದ ಹೆಚ್ಚಿನ ರೈತರು ಕಬ್ಬಿನತ್ತ ಮುಖ ಮಾಡಲು ಪ್ರಮುಖ ಕಾರಣ ಎನ್ನುತ್ತಾರೆ ಕೃಷಿ ಇಲಾಖೆಯ ಅಧಿಕಾರಿಗಳು.

ಸಹಕಾರ ಸಕ್ಕರೆ ಕಾರ್ಖಾನೆಗಳ ಜೊತೆಗೂ ಖಾಸಗಿ ಸಕ್ಕರೆ ಕಾರ್ಖಾನೆಗಳು ಕೂಡ ಜಿಲ್ಲೆಯಲ್ಲಿ ಆರಂಭಗೊಂಡಿದ್ದು, ಉತ್ತಮ ಬೆಲೆ ಕೂಡ ಕೊಡುತ್ತಿದ್ದಾರೆ. ಇದರಿಂದ ರೈತರಿಗೂ ಅನುಕೂಲ ವಾಗುತ್ತಿದೆ. ಹಾಗೂ ಕಾರ್ಖಾನೆಗಳಿಗೂ ಸಹಾಯ ವಾಗುತ್ತಿದೆ. ಈ ಹಿಂದೆ ರೈತರು ನೆರೆಯ ಮಹಾರಾಷ್ಟ್ರ ತೆಲಂಗಾಣ ರಾಜ್ಯದ ಕಾರ್ಖಾನೆಗಳಿಗೆ ಕಬ್ಬು ಸಾಗಿಸುತ್ತಿದ್ದರು. ಈಗ ಆ ತಾಪತ್ರಯ ಇಲ್ಲ ಎನ್ನುತ್ತಾರೆ ರೈತರು.

ರೈತರ ಹೋರಾಟದ ಪ್ರತಿಫಲವಾಗಿ ಈ ಹಿಂದೆ ಪ್ರತಿ ಟನ್ ಕಬ್ಬಿಗೆ ಕೊಡುತ್ತಿದ್ದ ಬೆಲೆಗೆ ಹೋಲಿಸಿದರೆ ತುಸು ಹೆಚ್ಚಾಗಿದೆ. ಸದ್ಯ ಜಿಲ್ಲೆಯಲ್ಲಿ ಪ್ರತಿ ಟನ್ ಕಬ್ಬಿಗೆ 2,900 ನೀಡಲಾಗುತ್ತಿದ್ದು, ಕನಿಷ್ಠ 3,500 ಕೊಡಬೇಕೆನ್ನುವುದು ಬೇಡಿಕೆಯಾಗಿದೆ. ಎಲ್ಲದರ ಬೆಲೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ ಎನ್ನುತ್ತಾರೆ ಹಿರಿಯ ರೈತ ಮುಖಂಡ ಸಿದ್ರಾಮಪ್ಪ ಆಣದೂರೆ.

'ಸಕ್ಕರೆ ಕಾರ್ಖಾನೆಗಳನ್ನು ನೆಚ್ಚಿಕೊಂಡು ರೈತರು ಕಬ್ಬು ಹೆಚ್ಚಾಗಿ ಬೆಳೆಸುತ್ತಿದ್ದಾರೆ. ಅವರಿಗೆ ಸಕಾಲಕ್ಕೆ ಹಣ ಪಾವತಿಸಬೇಕು. ಈ ಹಂಗಾಮಿನಲ್ಲಿ ಪ್ರತಿ ಟನ್ ಕಬ್ಬಿಗೆ ಸಕ್ಕರೆ ಕಾರ್ಖಾನೆಗಳು ಕನಿಷ್ಠ 3,500 ಬೆಲೆ ನಿಗದಿಪಡಿಸಬೇಕು. ಹಳೆಯ ಬಾಕಿ ಪಾವತಿಸಬೇಕು'
– ಸಿದ್ರಾಮಪ್ಪ ಆಣದೂರೆ



ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ಜನ್ಮದಿನವನ್ನು ಶುಕ್ರವಾರ ನವದೆಹಲಿಯ ಕರ್ನಾಟಕ ಭವನದಲ್ಲಿ ಆಚರಿಸಲಾಯಿತು. ಅಪರ ನಿವಾಸಿ ಆಯುಕ್ತೆ ಆಕೃತಿ ಬನ್ಸಾಲ್, ಸಹಾಯಕ ನಿವಾಸಿ ಆಯುಕ್ತ ಸಿ.ಮೋಹನ್ ಕುಮಾರ್, ಮುಖ್ಯಮಂತ್ರಿಯವರ ವಿಶೇಷ ಕರ್ತವ್ಯಾಧಿಕಾರಿ ಎಚ್.ಆಂಜನೇಯ, ಹಾಗೂ ಅಭಿಜಿತ್ ಗೌಡ ಹಾಗೂ ಕರ್ನಾಟಕ ಭವನದ ಸಿಬ್ಬಂದಿ ಹಾಜರಿದ್ದರು.

# ಏಷ್ಯನ್ ಕ್ರೀಡಾಕೂಟ: ಲವ್ಲಿನಾಗೆ ಐತಿಹಾಸಿಕ ಚಿನ್ನದ ಪದಕ

**ಐಚಿ–ನಗೋಯಾ, ಅ.2:** ಶುಕ್ರವಾರ ಇಲ್ಲಿ ನಡೆದ ಏಷ್ಯನ್ ಗೇಮ್ಸ್‌ನಲ್ಲಿ ಲವ್ಲಿನಾ ಬೊರ್ಗೊಹೈನ್ ಐತಿಹಾಸಿಕ ಸಾಧನೆ ಮಾಡಿದರು. ಮಹಿಳೆಯರ 75 ಕೆಜಿ ವಿಭಾಗದ ಫೈನಲ್‌ನಲ್ಲಿ ಚೀನಾದ ಬಾವೊ ಜಿಯಿ ಅವರನ್ನು ಸೋಲಿಸುವ ಮೂಲಕ ಅವರು ಚಿನ್ನದ ಪದಕ ಗೆದ್ದರು ಮತ್ತು ಏಷ್ಯನ್ ಗೇಮ್ಸ್ ಪ್ರಶಸ್ತಿಯನ್ನು ಗೆದ್ದ ಎರಡನೇ ಭಾರತೀಯ ಮಹಿಳಾ ಬಾಕ್ಸರ್ ಎನಿಸಿಕೊಂಡರು.



ಹಿಂದಿನ ಏಷ್ಯನ್ ಗೇಮ್ಸ್‌ನಲ್ಲಿ ಬೆಳ್ಳಿ ಪದಕಕ್ಕೆ ತೃಪ್ತಿಪಟ್ಟಿದ್ದ 28 ವರ್ಷದ ಭಾರತೀಯ ಬಾಕ್ಸರ್, ಇಲ್ಲಿನ ಫೈನಲ್‌ನಲ್ಲಿ ಸೋಲರಿಯದ ಚೀನೀ ಬಾಕ್ಸರ್ ವಿರುದ್ಧದ ತೀವ್ರ ಪೈಪೋಟಿಯ ನಡುವೆಯೂ ಸಂಯಮ ಕಾಯ್ದುಕೊಂಡು ಅಂತಿಮವಾಗಿ ಚಿನ್ನದ ಪದಕವನ್ನು ತಮ್ಮದಾಗಿಸಿಕೊಂಡರು. ಲವ್ಲಿನಾ ಆತ್ಮವಿಶ್ವಾಸದ ಆರಂಭವನ್ನು ಪಡೆದರು ಮತ್ತು ತೀರ್ಪುಗಾರರ ಅಂಕಪಟ್ಟಿಯಲ್ಲಿ ಮೊದಲ ಸುತ್ತನ್ನು 3–2 ಅಂತರದಿಂದ ತಮ್ಮ ಪರವಾಗಿಸಿಕೊಂಡರು.

ಎರಡನೇ ಸುತ್ತಿನಲ್ಲಿ ಬಾವೊ ಬಲವಾದ ತಿರುಗೇಟು ನೀಡಿದರು; ಅವರು ಅಂತರವನ್ನು ಕಡಿಮೆ ಮಾಡಿ 'ಅಪ್ಪರ್‌ಕಟ್'ಗಳ ಮೂಲಕ ದಾಳಿ ನಡೆಸಿದರು. ಆದರೆ ಲವ್ಲಿನಾ ಸುತ್ತಿನ ಅಂತ್ಯದಲ್ಲಿ ಚೇತರಿಸಿಕೊಂಡು ತಮ್ಮ ಮುನ್ನಡೆಯನ್ನು ಉಳಿಸಿಕೊಂಡರು; ಐವರು ತೀರ್ಪುಗಾರರ ಪೈಕಿ ನಾಲ್ವರು ಅವರ ಪರವಾಗಿ ಅಂಕ ನೀಡಿದರು.

ಉನ್ನತ ಗುಣಮಟ್ಟದ ಫೈನಲ್ ಎಂದು ನಿರೀಕ್ಷಿಸಲಾಗಿದ್ದ ಈ ಪಂದ್ಯದಲ್ಲಿ, ಭಾರತೀಯ ಬಾಕ್ಸರ್ ಉಳಿದ ಸುತ್ತುಗಳಲ್ಲೂ ಸಂಯಮ ಕಾಯ್ದುಕೊಂಡು ಚಿನ್ನದ ಪದಕವನ್ನು ಖಚಿತಪಡಿಸಿಕೊಂಡರು.

ಈ ಗೆಲುವು ಲವ್ಲಿನಾ ಅವರನ್ನು ಏಷ್ಯನ್ ಗೇಮ್ಸ್‌ನಲ್ಲಿ ಭಾರತೀಯ ಮಹಿಳಾ ಬಾಕ್ಸಿಂಗ್ ಚಾಂಪಿಯನ್‌ಗಳ ವಿಶೇಷ ಪಟ್ಟಿಗೆ ಸೇರಿಸಿದೆ. ಮೇರಿ ಕೋಮ್ ಈ ಪ್ರಶಸ್ತಿಯನ್ನು ಗೆದ್ದ ಮೊದಲ ಭಾರತೀಯ ಮಹಿಳೆಯಾಗಿದ್ದು, 2014ರಲ್ಲಿ ಚಿನ್ನದ ಪದಕವನ್ನು ಪಡೆದಿದ್ದರು. ಕಝಾಕಿಸ್ತಾನದ ನಟಾಲಿಯಾ ಬೊಗ್ದಾನೋವಾ ವಿರುದ್ಧ 3–2 ಅಂತರದ 'ಸ್ಪ್ಲಿಟ್–ಡಿಸಿಷನ್' (ವಿಭಜಿತ ತೀರ್ಪು) ಮೂಲಕ ರೋಚಕ ಗೆಲುವು ಸಾಧಿಸಿ ಲವ್ಲಿನಾ ಫೈನಲ್‌ಗೆ ಪ್ರವೇಶಿಸಿದ್ದರು. ಆ ಸೆಮಿಫೈನಲ್ ಪಂದ್ಯದ ಆರಂಭದಲ್ಲಿ ಅವರು ಹಿನ್ನಡೆಯಲ್ಲಿದ್ದರೂ, ನಂತರ ಚೇತರಿಸಿಕೊಂಡು ಚಿನ್ನದ ಪದಕದ ಸುತ್ತಿಗೆ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡಿದ್ದರು. ಹಿಂದಿನ ಗೇಮ್ಸ್‌ನಿಂದ ಬೆಳ್ಳಿ ಪದಕದೊಂದಿಗೆ ಮರಳಿದ್ದ ಲವ್ಲಿನಾಗೆ ಈ ಚಿನ್ನದ ಪದಕವು ವಿಶೇಷ ಮಹತ್ವದ್ದಾಗಿದೆ.

ಮಿಶ್ರ ರಿಕರ್ವ್ ತಂಡದ ಸ್ಪರ್ಧೆಯ ಫೈನಲ್‌ನಲ್ಲಿ ಚೀನಾ ವಿರುದ್ಧ ಸೋತ ನಂತರ ಕುಂಕುಮ್ ಮೊಹೋದ್ ಮತ್ತು ಧೀರಜ್ ಬೊಮ್ಮದೇವರಾ ಬೆಳ್ಳಿ ಪದಕ ಗೆದ್ದರು. ಇದಕ್ಕೂ ಮುನ್ನ ಅಂಕಿತಾ ಭಕತ್, ಕುಂಕುಮ್ ಮತ್ತು ಕೀರ್ತಿ ಶರ್ಮಾ ಮಹಿಳೆಯರ ರಿಕರ್ವ್ ತಂಡದ ಸ್ಪರ್ಧೆಯಲ್ಲಿ ಭಾರತಕ್ಕೆ ಮೊದಲ ಏಷ್ಯನ್ ಗೇಮ್ಸ್ ಚಿನ್ನದ ಪದಕವನ್ನು ತಂದುಕೊಟ್ಟಿದ್ದರು. ಆದಾಗ್ಯೂ, ಲವ್ಲಿನಾ ಅವರ ಚಿನ್ನದ ಪದಕವು ಅಂದಿನ ಭಾರತೀಯ ಬಾಕ್ಸಿಂಗ್‌ನ ಪ್ರಮುಖ ಸುದ್ದಿಯಾಯಿತು; ಏಕೆಂದರೆ ಈ ಹಿಂದೆ ಬೆಳ್ಳಿ ಪದಕ ಗೆದ್ದಿದ್ದ ಅವರು ಅಂತಿಮವಾಗಿ ಏಷ್ಯನ್ ಗೇಮ್ಸ್‌ನ ವಿಜೇತರ ವೇದಿಕೆಯ ಉನ್ನತ ಸ್ಥಾನಕ್ಕೇರಿದರು.

# ಭಾರತ–ಅಮೆರಿಕ ವ್ಯಾಪಾರ ಒಪ್ಪಂದ ಮಾತುಕತೆ ಅಂತಿಮ ಹಂತದಲ್ಲಿ: ಯುಎಸ್‌ಟಿಆರ್

**ನವದೆಹಲಿ, ಅ.2:** ಭಾರತ ಮತ್ತು ಅಮೆರಿಕ ನಡುವಿನ ವ್ಯಾಪಾರ ಮಾತುಕತೆಗಳು ಅಂತಿಮ ಹಂತವನ್ನು ತಲುಪಿವೆ. ಆದಾಗ್ಯೂ, ಇನ್ನೂ ಕೆಲವು ಬಗೆಹರಿಯದ ವಿಷಯಗಳ ಕುರಿತು ಎರಡೂ ಕಡೆಯವರು ಕೆಲಸ ಮಾಡುತ್ತಿರುವುದರಿಂದ ತಕ್ಷಣವೇ ಒಪ್ಪಂದವಾಗುವ ನಿರೀಕ್ಷೆಯಿಲ್ಲ ಎಂದು ಅಮೆರಿಕದ ವ್ಯಾಪಾರ ಪ್ರತಿನಿಧಿ ಜೇಮಿಸನ್ ಗ್ರೀರ್ ಹೇಳಿದ್ದಾರೆ.

ಮಿಲ್ವಾಕಿಯಲ್ಲಿ ನಡೆದ ಉ20 ವ್ಯಾಪಾರ ಸಚಿವರ ಸಭೆಯ ನಂತರ ಮಾತನಾಡಿದ ಗ್ರೀರ್, ಮಾತುಕತೆ ನಡೆಸುವವರು ಭಿನ್ನಾಭಿಪ್ರಾಯದ ಕ್ಷೇತ್ರಗಳನ್ನು ಕಡಿಮೆ ಮಾಡಿದ್ದಾರೆ ಮತ್ತು ಉಳಿದಿರುವ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿದರು. ಮಾತುಕತೆಗಳು ಮುಕ್ತಾಯದ ಹಂತದಲ್ಲಿವೆ ಎಂದು ಬಣ್ಣಿಸಿದ ಅವರು, ಅದೇ ಸಮಯದಲ್ಲಿ ತಕ್ಷಣವೇ ಒಪ್ಪಂದವಾಗುತ್ತದೆ ಎಂಬ ನಿರೀಕ್ಷೆಗಳ ಬಗ್ಗೆ ಎಚ್ಚರಿಕೆ ನೀಡಿದರು. ಮಾತುಕತೆಗಳ ಪ್ರಗತಿಯನ್ನು ಪರಿಶೀಲಿಸಲು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಪ್ರಧಾನಿ ನರೇಂದ್ರ ಮೋದಿ ಶೀಘ್ರದಲ್ಲೇ ಮತ್ತೊಮ್ಮೆ ಮಾತುಕತೆ ನಡೆಸಬಹುದು ಎಂಬ ಸುಳಿವನ್ನು ಗ್ರೀರ್ ನೀಡಿದರು. ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಅವರು ಪ್ರಸ್ತಾವಿತ ವ್ಯಾಪಾರ ಒಪ್ಪಂದವು "ಬಹುತೇಕ ಪೂರ್ಣಗೊಂಡಿದೆ" ಎಂದು ಹೇಳಿದ ಕೆಲವೇ ದಿನಗಳಲ್ಲಿ ಈ ಇತ್ತೀಚಿನ ಹೇಳಿಕೆಗಳು ಹೊರಬಿದ್ದಿವೆ. ಒಪ್ಪಂದವನ್ನು ಅಂತಿಮಗೊಳಿಸುವ ಮೊದಲು, ಇತರ ರಫ್ತು ಮಾಡುವ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತವು ಸ್ಪರ್ಧಾತ್ಮಕ ಸುಂಕದ ಸ್ಥಾನಮಾನವನ್ನು ಪಡೆಯಲು ಬಯಸುತ್ತಿದೆ ಎಂದು ಗೋಯಲ್ ಒತ್ತಿಹೇಳಿದ್ದರು. ಮಿಲ್ವಾಕಿಯಲ್ಲಿ ನಡೆದ ಜಿ20 ವ್ಯಾಪಾರ ಸಚಿವರ ಸಭೆಯ ಸಂದರ್ಭದಲ್ಲಿ ಗ್ರೀರ್ ಮತ್ತು ಗೋಯಲ್ ಭೇಟಿಯಾದರು; ಈ ವೇಳೆ ಭಾರತ–ಅಮೆರಿಕ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಚೌಕಟ್ಟಿನಡಿ ಮಧ್ಯಂತರ ವ್ಯಾಪಾರ ಒಪ್ಪಂದವನ್ನು ಶೀಘ್ರವಾಗಿ ಅಂತಿಮಗೊಳಿಸುವ ಕುರಿತು ಚರ್ಚೆಗಳು ನಡೆದವು.

ಗೋಯಲ್ ಅವರೊಂದಿಗಿನ ಚರ್ಚೆಯನ್ನು ರಚನಾತ್ಮಕ ಎಂದು ಬಣ್ಣಿಸಿದ ಗ್ರೀರ್, ಎರಡೂ ದೇಶಗಳ ಅಧಿಕಾರಿಗಳು ಮಾತುಕತೆಯನ್ನು ಮುಂದುವರಿಸಿದ್ದಾರೆ ಎಂದು ಹೇಳಿದರು. ಮತ್ತೊಂದೆಡೆ, ಗೋಯಲ್ ಈ ಭೇಟಿಯನ್ನು ಫಲಪ್ರದವೆಂದು ಕರೆದರು ಮತ್ತು ಪರಸ್ಪರ ಪ್ರಯೋಜನಕಾರಿ ಮಧ್ಯಂತರ ಒಪ್ಪಂದವನ್ನು ತಲುಪುವ ಗುರಿಯನ್ನು ಚರ್ಚೆಗಳು ಹೊಂದಿದ್ದವು ಎಂದು ಹೇಳಿದರು.

# ಫ್ಲೈದುಬೈ ವಿಮಾನದಲ್ಲಿ ಹಲ್ಲೆ ಪ್ರಕರಣ: ಒಬ್ಬನೇ ದಾಳಿಕೋರನೇ....? ತನಿಖೆಯಲ್ಲಿ ಹೊಸ ಶಂಕೆ



**ಟೆಲ್‌ಅವೀವ್,ಅ.2:** ದುಬೈನಿಂದ ಟೆಲ್‌ಅವೀವ್‌ಗೆ ತೆರಳುತ್ತಿದ್ದ ಫ್ಲೈದುಬೈ ವಿಮಾನದಲ್ಲಿ ಪೈಲಟ್ ಮೇಲೆ ಸಹ–ಪೈಲಟ್ ನಡೆಸಿದ ದಾಳಿ ಪ್ರಕರಣದ ತನಿಖೆ ಮತ್ತಷ್ಟು ತೀವ್ರಗೊಂಡಿದೆ. ದಾಳಿಕೋರ ಒಬ್ಬನೇ ಕಾರ್ಯಾಚರಿಸಿದ್ದನಾ ಅಥವಾ ಯಾವುದಾದರೂ ಸಂಘಟನೆಯ ನೆರವು ಪಡೆದಿದ್ದನಾ ಎಂಬುದರ ಕುರಿತು ತನಿಖಾ ಸಂಸ್ಥೆಗಳು ಪರಿಶೀಲನೆ ನಡೆಸುತ್ತಿವೆ.

ಇಸ್ರೇಲಿ ಮಾಧ್ಯಮಗಳ ವರದಿ ಪ್ರಕಾರ, ಆರೋಪಿತ ಸಹ–ಪೈಲಟ್ ಇತ್ತೀಚಿನ ವರ್ಷಗಳಲ್ಲಿ ಆತ್ಮಹತ್ಯಾ ದಾಳಿಗಳಿಗೆ ಪ್ರಚೋದನೆ ನೀಡುತ್ತಿದ್ದ ಎನ್ನಲಾದ ತೀವ್ರಗಾಮಿ ಧರ್ಮಪ್ರಚಾರಕನ ಪ್ರಭಾವಕ್ಕೆ ಒಳಗಾಗಿದ್ದನೆಂಬ ಮಾಹಿತಿ ತನಿಖೆಯಲ್ಲಿ ಬೆಳಕಿಗೆ ಬಂದಿದೆ. ಈ ಹಿನ್ನೆಲೆಯಲ್ಲಿ ಆತ ಏಕಾಂಗಿಯಾಗಿ ಕೃತ್ಯ ಎಸಗಿದ್ದಾನೆಯೇ ಅಥವಾ ಯಾವುದೇ ಉಗ್ರ ಸಂಘಟನೆಯ ಸಂಪರ್ಕ ಹೊಂದಿದ್ದಾನೆಯೇ ಎಂಬುದನ್ನು ಅಧಿಕಾರಿಗಳು ಪರಿಶೀಲಿಸುತ್ತಿದ್ದಾರೆ.

ಆರೋಪಿತ ಸಹ–ಪೈಲಟ್ ಸುಮಾರು 9 ತಿಂಗಳ ಹಿಂದಷ್ಟೇ ಫ್ಲೈದುಬೈನಲ್ಲಿ ಕೆಲಸಕ್ಕೆ ಸೇರಿದ್ದ ಎನ್ನಲಾಗಿದ್ದು, ಆತ ಯಾವುದಾದರೂ ನಿರ್ದಿಷ್ಟ ಉದ್ದೇಶ ಅಥವಾ ಯೋಜನೆಯ ಭಾಗವಾಗಿ ವಿಮಾನಯಾನ ಸಂಸ್ಥೆಗೆ ಸೇರಿದ್ದನಾ ಎಂಬ ಕೋನವನ್ನೂ ತನಿಖೆ ಮಾಡಲಾಗುತ್ತಿದೆ. ವಿಮಾನವು ಜೋರ್ಡಾನ್‌ನ ಮರುಭೂಮಿ ಪ್ರದೇಶದತ್ತ ವೇಗವಾಗಿ ಕೆಳಗಿಳಿದಿದ್ದ ಹಿನ್ನೆಲೆಯಲ್ಲಿ, ವಿಮಾನವನ್ನು ಅಲ್ಲಿ ಪತನಗೊಳಿಸುವ ಅಥವಾ ಯಾವುದಾದರೂ ಪ್ರಮುಖ ಗುರಿಗೆ ಡಿಕ್ಕಿ ಹೊಡೆಸುವ ಉದ್ದೇಶವಿತ್ತೇ ಎಂಬ ಅನುಮಾನವೂ ವ್ಯಕ್ತವಾಗಿದೆ.

**ಭದ್ರತಾ ವ್ಯವಸ್ಥೆಯಲ್ಲೂ ಲೋಪ?**

ಪ್ರಕರಣದಲ್ಲಿ ಇಸ್ರೇಲ್‌ನ ವಿಮಾನಯಾನ ಭದ್ರತಾ ನಿಯಮಗಳ ಜಾರಿಯ ಕುರಿತೂ ಪ್ರಶ್ನೆಗಳು ಎದ್ದಿವೆ. ಇಸ್ರೇಲ್ನೊಂದಿಗೆ ರಾಜತಾಂತ್ರಿಕ ಸಂಬಂಧ ಹೊಂದಿರದ ದೇಶಗಳ ಪೈಲಟ್ಗಳು ಟೆಲ್‌ಅವೀವ್ಗೆ ಹಾರಾಟ ನಡೆಸುವುದಕ್ಕೆ ನಿರ್ಬಂಧವಿದೆ ಎನ್ನಲಾಗಿದ್ದು, ಈ ನಿಯಮದ ಜವಾಬ್ದಾರಿಯನ್ನು ವಿಮಾನಯಾನ ಸಂಸ್ಥೆಗಳ ಮೇಲೆಯೇ ಬಿಡಲಾಗಿತ್ತು ಎಂದು ವರದಿ ತಿಳಿಸಿದೆ. ಒಮಾನ್ ಮತ್ತು ಇಸ್ರೇಲ್ ನಡುವೆ ರಾಜತಾಂತ್ರಿಕ ಸಂಬಂಧ ಇಲ್ಲದಿದ್ದರೂ, ಒಮಾನ್ನ ಪೈಲಟ್ಗಳು ಈ ಹಿಂದೆ ಟೆಲ್‌ಅವೀವ್‌ಗೆ ಹಾರಾಟ ನಡೆಸಿರುವುದು ತನಿಖೆಯ ಗಮನ ಸೆಳೆದಿದೆ. ಇದರಿಂದ ಇಸ್ರೇಲ್‌ನ ಭದ್ರತಾ ಪ್ರೋಟೋಕಾಲ್‌ಗೆ. ಪ್ರಕರಣದ ಬಳಿಕ ಸರ್ಕಾರವು ವಿಮಾನಯಾನ ಭದ್ರತೆ ಹಾಗೂ ಸಂಬಂಧಿತ ಸುರಕ್ಷತಾ ಕ್ರಮಗಳನ್ನು ಸಂಪೂರ್ಣವಾಗಿ ಪರಿಶೀಲಿಸುವಂತೆ ಸೂಚಿಸಿದೆ. ಈ ನಡುವೆ, ಯುಎಇ ಅಟಾರ್ನಿ ಜನರಲ್ ಪ್ರಕರಣದ ಕುರಿತು ತನಿಖೆಗೆ ಆದೇಶಿಸಿದ್ದು, ಘಟನೆಗೆ ಭಯೋತ್ಪಾದಕ ಉದ್ದೇಶ ಅಥವಾ ಪೂರ್ವಯೋಜನೆ ಇತ್ತೇ ಎಂಬುದನ್ನೂ ಪರಿಶೀಲಿಸಲಾಗುತ್ತಿದೆ.

# ಏಷ್ಯನ್ ಗೇಮ್ಸ್‌ನಲ್ಲಿ ಪದಕ ಗೆದ್ದವರಿಗೆ ಕರ್ನಾಟಕ ಇನ್ನೂ ಬೆಂಬಲವನ್ನೇ ಪ್ರಕಟಿಸಿಲ್ಲ



**ಮಂಗಳೂರು, ಅ.2:** ಏಷ್ಯನ್ ಗೇಮ್ಸ್‌ನಲ್ಲಿ ಪದಕ ಗೆದ್ದ ಇತರ ರಾಜ್ಯದ ಕ್ರೀಡಾಪಟುಗಳಿಗೆ ಅಲ್ಲಿನ ರಾಜ್ಯ ಸರ್ಕಾರಗಳು ಕೋಟಿಗಟ್ಟಲೇ ಮೊತ್ತದ ಬಹುಮಾನ ಘೋಷಿಸಿವೆ. ಕರ್ನಾಟಕ ಸರ್ಕಾರ ಇನ್ನೂ ಬೆಂಬಲ ಪ್ರಕಟಿಸದೇ ಇರುವುದು ಬೇಸರ ಉಂಟು ಮಾಡಿದೆ ಎಂದು ಏಷ್ಯನ್ ಗೇಮ್ಸ್ ನ ಮಹಿಳೆಯರ 4/400 ಮೀಟರ್ ರಿಲೆಯಲ್ಲಿ ಚಿನ್ನ ಗೆದ್ದ ತಂಡದ ಸದಸ್ಯೆ ಎಂ. ಆರ್ ಪೂವಮ್ಮ ಬೇಸರ ವ್ಯಕ್ತಪಡಿಸಿದರು.

ಪದಕ ಗೆದ್ದ ನಂತರ ಮಂಗಳೂರಿಗೆ ಬಂದ ಅವರು ವಿಮಾನ ನಿಲ್ದಾಣದಲ್ಲಿ ಪತ್ರಕರ್ತರ ಜೊತೆ ಮಾತನಾಡಿ, ಜಪಾನ್‌ನಲ್ಲಿ ಪದಕ ಗೆದ್ದಾಗ ತಂಡದ ಸದಸ್ಯರಿಗೆ ಅವರ ರಾಜ್ಯಗಳ ಮುಖ್ಯಮಂತ್ರಿ ಸೇರಿ ಅನೇಕರು ಕರೆ ಮಾಡಿ ಅಭಿನಂದನೆ ಸಲ್ಲಿಸುತ್ತಿದ್ದರು. ಆದರೆ ಕರ್ನಾಟಕದಿಂದ ನನಗೆ ಕರೆ ಬರಲೇ ಇಲ್ಲ. ತುಂಬ ಬೇಸರವಾಯಿತು ಎಂದು ಹೇಳಿದರು.

'ನನ್ನ ತಾಯಿ ಬೇಸರ ವ್ಯಕ್ತಪಡಿಸಿದ್ದನ್ನು ತಿಳಿದು ಗುರುವಾರ ಉಪಮುಖ್ಯಮಂತ್ರಿ ಪರಮೇಶ್ವರ್ ಅವರು ಕರೆಮಾಡಿ ಸರ್ಕಾರ ಗೌರವ ಸಲ್ಲಿಸಲಿದೆ ಎಂದು ಭರವಸೆ ನೀಡಿದರು. ನಗದು ಬಹುಮಾನದ ಕುರಿತು ಅವರ ಬಳಿ ಕೇಳಿದಾಗ ಎಲ್ಲ ವ್ಯವಸ್ಥೆ ಮಾಡಲಾಗುವುದು ಎಂದು ತಿಳಿಸಿದರು. ಏಷ್ಯನ್ ಗೇಮ್ಸ್‌ನಲ್ಲಿ ಪದಕ ಗೆದ್ದ ರಾಜ್ಯದ ಎಲ್ಲ ಅಥ್ಲೀಟ್‌ಗಳಿಗೂ ನಗದು ಬಹುಮಾನ ಘೋಷಿಸಲು ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಮುಂದಾಗಬೇಕು ಎಂದು ಪೂವಮ್ಮ ಹೇಳಿದರು.'ಮುಂದಿನ ಹಾದಿಯ ಬಗ್ಗೆ ಯಾವ ನಿರ್ಧಾರವನ್ನೂ ಕೈಗೊಳ್ಳಲಿಲ್ಲ. ಏಷ್ಯನ್ ಗೇಮ್ಸ್ ಸಮೀಪಿಸುವಾಗ ಪ್ರತಿ ಬಾರಿ ಯಾವ ಯೋಜನೆಯನ್ನೂ ಹಮ್ಮಿಕೊಳ್ಳುವುದಿಲ್ಲ. ಭವಿಷ್ಯದಲ್ಲಿ ಏನು ಎಂದು ಗೊತ್ತಿಲ್ಲ, ಕಾದು ನೋಡೋಣ' ಎಂದು ಅವರು ಹೇಳಿದರು.




# ಜನಕಪುರಿ ಕನ್ನಡ ಕೂಟ: ಐವತ್ತು ವರ್ಷಗಳ ಕನ್ನಡದ ಕಂಪು





ಲೇಖಕರು: ಡಾ.ಚಂದ್ರಶೇಖರ್
ಜಂಟಿ ನಿರ್ದೇಶಕರು
ಸಂಸತ್ ಭವನ, ನವದೆಹಲಿ

ಕನ್ನಡ ಸಂಸ್ಕೃತಿ ಚಿಂತನೆಯ ಒಂದು ವಿಶಿಷ್ಟ ಲಕ್ಷಣವೆಂದರೆ, ಅದು ತನ್ನ ಸಾಂಸ್ಕೃತಿಕ ಅಸ್ಮಿತೆಯನ್ನು ಭಾರತೀಯತೆ ಮತ್ತು ಕರ್ನಾಟಕತ್ವ ಎಂಬ ಎರಡು ಪರಿಕಲ್ಪನೆಗಳೊಂದಿಗೆ ನಿರಂತರವಾಗಿ ಅನುಸಂಧಾನ ಮಾಡಿಕೊಂಡು ಬಂದಿದೆ. ಒಂದು ಕಡೆ ರಾಷ್ಟ್ರದ ವಿಶಾಲ ಪರಿಕಲ್ಪನೆಯೊಳಗೆ ತನ್ನ ಸಂಸ್ಕೃತಿಯನ್ನು ಗುರುತಿಸಿಕೊಂಡರೆ, ಮತ್ತೊಂದೆಡೆ ತನ್ನ ಭಾಷೆ, ನೆಲ, ನುಡಿ ಮತ್ತು ಪರಂಪರೆಯ ಮೂಲಕ ಕರ್ನಾಟಕತ್ವವನ್ನು ಅರಿತುಕೊಳ್ಳುವ ಪ್ರಯತ್ನವನ್ನು ಮಾಡಿದೆ.

ನಮ್ಮ ಕವಿಗಳು, ಚಿಂತಕರು ಮತ್ತು ಸಾಹಿತಿಗಳು ಭಾರತ ಹಾಗೂ ಕರ್ನಾಟಕವನ್ನು ಬಹುಪಾಲು ತಾಯಿ–ಮಗಳ ಸಂಬಂಧದ ರೂಪಕದಲ್ಲಿ ಚಿತ್ರಿಸಿಕೊಂಡು ಬಂದಿದ್ದಾರೆ. ಬಿ. ಎಂ. ಶ್ರೀಕಂಠಯ್ಯನವರು 1914ರಲ್ಲಿ ರಚಿಸಿದ –ಭರತಮಾತೆಯೆ! ಭರತಮಾತೆಯೆ! ಎಂದು ನೀ ತಲೆಯೆತ್ತುವೆ ಎಂಬ ಕವನದಲ್ಲಿ ಕನ್ನಡದ ತಾಯಿಯನ್ನು ಭಾರತಾಂಬೆಯ ಹಿರಿಯ ಹೆಣ್ಣುಮಗಳಾಗಿ ಕಾಣುವ ಸಾಂಸ್ಕೃತಿಕ ದೃಷ್ಟಿಕೋನವನ್ನು ವ್ಯಕ್ತಪಡಿಸಿದ್ದಾರೆ. ಹಾಗೆಯೇ ರಾಷ್ಟ್ರಕವಿ ಕುವೆಂಪು ಅವರು 1930ರಲ್ಲಿ ರಚಿಸಿದ ಭಾರತ ಜನನಿಯ ತನುಜಾತೆ ಗೀತೆಯಲ್ಲಿ ಭಾರತಮಾತೆ, ಕರ್ನಾಟಕಮಾತೆ, ತಾಯ್ನಾಡು ಮತ್ತು ತಾಯ್ನುಡಿ ಮೊದಲಾದ ರೂಪಕಗಳ ಮೂಲಕ ರಾಷ್ಟ್ರೀಯತೆ ಮತ್ತು ಪ್ರಾದೇಶಿಕ ಅಸ್ಮಿತೆಯ ನಡುವಿನ ಸೌಹಾರ್ದ ಸಂಬಂಧವನ್ನು ಅತ್ಯಂತ ಅರ್ಥಪೂರ್ಣವಾಗಿ ಅಭಿವ್ಯಕ್ತಿಸಿದ್ದಾರೆ.

ಕವಿಗಳು, ಲೇಖಕರು ಮತ್ತು ಚಿಂತಕರು ತಮ್ಮ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ರೂಪಿಸಿದ ಈ ಭಾವನಾತ್ಮಕ ಅಸ್ಮಿತೆಗಳು ಕನ್ನಡಿಗರ ಸಾಮಾಜಿಕ ಬದುಕಿನ ಮೇಲೂ ಗಾಢವಾದ ಪ್ರಭಾವ ಬೀರಿದವು. ದೇಶದ ಸ್ವಾತಂತ್ರ್ಯ ಹೋರಾಟದ ಜೊತೆಯಲ್ಲೇ ಕನ್ನಡಿಗರು ಕನ್ನಡನಾಡಿನ ಏಕೀಕರಣದ ಹೋರಾಟಕ್ಕೂ ಟೊಂಕ ಕಟ್ಟಿದರು. ಭಾರತದ ಸ್ವಾತಂತ್ರ್ಯ ಮತ್ತು ಕರ್ನಾಟಕದ ಏಕೀಕರಣ ಇವೆರಡೂ ಕನ್ನಡಿಗರ ರಾಷ್ಟ್ರೀಯ ಹಾಗೂ ಪ್ರಾದೇಶಿಕ ಚೇತನೆಯನ್ನು ರೂಪಿಸಿದ ಎರಡು ಮಹತ್ವದ ಅಧ್ಯಾಯಗಳಾದವು. ಈ ಸಾಂಸ್ಕೃತಿಕ ಪ್ರಭಾವಕ್ಕೆ ವಿದ್ಯಾರ್ಥಿ ಜೀವನದಲ್ಲಿಯೇ ಒಳಗಾದ, ಭೌಗೋಳಿಕವಾಗಿ ಕನ್ನಡನಾಡಿನ ಹೊರಗಿದ್ದರೂ ಕನ್ನಡವನ್ನು ಉಸಿರಾಗಿಸಿಕೊಂಡಿದ್ದ ನೂರಾರು ಹೊರನಾಡ ಕನ್ನಡಿಗರು ಸಹಜವಾಗಿಯೇ ತಮ್ಮ ಬದುಕಿನುದ್ದಕ್ಕೂ ದೇಶದ ಸ್ವಾತಂತ್ರ್ಯ, ಕನ್ನಡ ನಾಡಿನ ಏಕೀಕರಣ ಮತ್ತು ಕನ್ನಡ ಭಾಷೆ–ಸಂಸ್ಕೃತಿಯ ಉಳಿವಿಗಾಗಿ ನಿರಂತರವಾಗಿ ಶ್ರಮಿಸಿದರು.

**ಹೊರನಾಡ ಕನ್ನಡಿಗರ ಕನ್ನಡ ಕಾಯಕ**

ಹೊರನಾಡ ಕನ್ನಡಿಗರು ತಾವಿರುವ ಕನ್ನಡೇತರ ಪರಿಸರದಲ್ಲಿ ವೈಯಕ್ತಿಕವಾಗಿಯೂ, ಸಂಘಟಿತವಾಗಿಯೂ ಕನ್ನಡ ಸಾಹಿತ್ಯ, ಕಲೆ, ಸಂಸ್ಕೃತಿ ಮತ್ತು ಭಾಷಾ ಚಟುವಟಿಕೆಗಳನ್ನು ನಡೆಸಿಕೊಂಡು ಬಂದಿದ್ದಾರೆ. ತಮ್ಮ ಬದುಕಿನ ಅನಿವಾರ್ಯತೆಗಳಿಂದ ನಾಡಿನಿಂದ ದೂರವಿದ್ದರೂ, ನುಡಿಯ ಮೂಲಕ ನಾಡಿನೊಂದಿಗೆ ಸಂಬಂಧವನ್ನು ಉಳಿಸಿಕೊಂಡರು.

ಆರಂಭದ ದಿನಗಳಲ್ಲಿ ಹತ್ತು ಕನ್ನಡಿಗರು ಒಟ್ಟಾಗಿ ಸೇರಿದ ಸ್ಥಳವೇ ಒಂದು ಕನ್ನಡ ಸಂಘವಾಗುತ್ತಿತ್ತು. ಹಬ್ಬ–ಹರಿದಿನಗಳ ಆಚರಣೆ, ವಿಚಾರ ವಿನಿಮಯ, ಸಾಹಿತ್ಯ ಚಟುವಟಿಕೆ, ನಾಟಕ, ಸಂಗೀತ, ಮಕ್ಕಳಿಗೆ ಕನ್ನಡ ಕಲಿಸುವ ಪ್ರಯತ್ನ, ಇವೆಲ್ಲವೂ ಅಂತಹ ಸಂಘಗಳ ಜೀವನಾಡಿಯಾಗಿದ್ದವು. ಇಂದು ಕೂಡ ಅನೇಕ ಸಂಘಗಳು ಯಾವುದೇ ಆಡಂಬರವಿಲ್ಲದೆ, ಸದ್ದಿಲ್ಲದೆ ಕನ್ನಡ ನುಡಿ ಮತ್ತು ಸಂಸ್ಕೃತಿಯ ದೀಪವನ್ನು ಬೆಳಗಿಸುತ್ತಿವೆ. ಹೊರನಾಡ ಕನ್ನಡಿಗರಲ್ಲಿ ಕನ್ನಡತನವನ್ನು ಜಾಗೃತವಾಗಿಡುವ, ಮುಂದಿನ ಪೀಳಿಗೆಗೆ ಅದನ್ನು ತಲುಪಿಸುವ ಮಹತ್ತರ ಹೊಣೆಗಾರಿಕೆಯನ್ನು ಈ ಸಂಸ್ಥೆಗಳು ನಿರ್ವಹಿಸುತ್ತಿವೆ.

ರಾಷ್ಟ್ರ ರಾಜಧಾನಿಯಲ್ಲಿ ಕನ್ನಡದ ಮೊದಲ ಸಂಘಟಿತ ಹೆಜ್ಜೆಯನ್ನು 1946ರಲ್ಲಿ ಸ್ಥಾಪನೆಯಾದ ದೆಹಲಿ ಕರ್ನಾಟಕ ಸಂಘ ಅಸ್ತಿತ್ವದ ಜೊತೆಗೆ ಗುರುತಿಸಬಹುದು.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ದೊರೆಯುವ ಮೊದಲೆ ರಾಷ್ಟ್ರ ರಾಜಧಾನಿಯಲ್ಲಿ ಕನ್ನಡಿಗರನ್ನು ಸಂಘಟಿಸಿದ ಪ್ರಮುಖ ಹೊರನಾಡ ಕನ್ನಡ ಸಂಸ್ಥೆಯಾಗಿ ದೆಹಲಿ ಕರ್ನಾಟಕ ಸಂಘ ಹೊರಹೊಮ್ಮಿತು.

ಸ್ವಾತಂತ್ರ್ಯ ಚಳುವಳಿ, ಕೇಂದ್ರ ಸರ್ಕಾರದ ವಿವಿಧ ಸೇವೆಗಳು, ಆಡಳಿತ, ಸೇನೆ, ಉದ್ಯೋಗ, ಉದ್ಯಮ ಮತ್ತು ವ್ಯಾಪಾರ ಮೊದಲಾದ ಕಾರಣಗಳಿಂದ ಕರ್ನಾಟಕದ ವಿವಿಧ ಭಾಗಗಳಿಂದ ದೆಹಲಿಗೆ ಆಗಮಿಸಿದ್ದ ಕನ್ನಡಿಗರನ್ನು ಒಂದೇ ಸಾಂಸ್ಕೃತಿಕ ಬಂಧದಲ್ಲಿ ಬೆಸೆಯುವ ಕಾರ್ಯವನ್ನು ಅದು ಕೈಗೊಂಡಿತು.

ಸ್ವಾತಂತ್ರ್ಯಾನಂತರ ಶಿಕ್ಷಣ, ಕೈಗಾರಿಕೆ, ನಗರೀಕರಣ, ಸಾರಿಗೆ ಮತ್ತು ಸಂಪರ್ಕ ವ್ಯವಸ್ಥೆಗಳ ಅಭಿವೃದ್ಧಿ ಹಾಗೂ 1956ರಲ್ಲಿ ಭಾಷಾವಾರು ರಾಜ್ಯಗಳ ಪುನರ್‌ರಚನೆಯ ಮೂಲಕ ಕರ್ನಾಟಕವು ಒಂದು ಆಡಳಿತ ಘಟಕವಾಗಿ ರೂಪುಗೊಂಡ ಪರಿಣಾಮವಾಗಿ ದೆಹಲಿಗೆ ಆಗಮಿಸುವ ಕನ್ನಡಿಗರ ಸಂಖ್ಯೆಯೂ ಹೆಚ್ಚುತ್ತಾ ಹೋಯಿತು. ಹೊಸ ಪರಿಸರದಲ್ಲಿ ಬೆಳೆಯುತ್ತಿದ್ದ ಕನ್ನಡ ಕುಟುಂಬಗಳ ಮಕ್ಕಳಿಗೆ ಕನ್ನಡ ಭಾಷೆಯನ್ನು ಕಲಿಸುವುದು, ಕನ್ನಡ ಸಂಸ್ಕೃತಿ ಮತ್ತು ಪರಂಪರೆಯನ್ನು ಪರಿಚಯಿಸುವುದು ಮತ್ತು ಮುಂದಿನ ಪೀಳಿಗೆಯಲ್ಲಿ ಕನ್ನಡದ ಬಾಂಧವ್ಯವನ್ನು ಉಳಿಸುವ ಅಗತ್ಯವನ್ನು ದೆಹಲಿಯ ಮೊದಲ ತಲೆಮಾರಿನ ಕನ್ನಡಿಗರು ಬಹಳ ಹಿಂದೆಯೇ ಮನಗಂಡಿದ್ದರು.

ಅದರ ಫಲವಾಗಿ 1959ರ ವೇಳೆಗೆ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ಸ್ಥಾಪನೆಯಾಯಿತು. ಇದು ದೆಹಲಿಯ ಹಿರಿಯ ತಲೆಮಾರಿನ ಕನ್ನಡಿಗರ ದೂರದೃಷ್ಟಿ, ನಾಡು–ನುಡಿಯ ಮೇಲಿನ ಕಾಳಜಿ ಮತ್ತು ಭವಿಷ್ಯದ ಪೀಳಿಗೆಯ ಕುರಿತ ಅವರ ಹೊಣೆಗಾರಿಕೆಯ ಅತ್ಯುತ್ತಮ ನಿದರ್ಶನವಾಗಿದೆ. ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಗಳು ಕೇವಲ ಸಂಘ ಸಂಸ್ಥೆಗಳಲ್ಲ; ಅವು ದೆಹಲಿಯ ಹಿರಿಯ ತಲೆಮಾರಿನ ಕನ್ನಡಿಗರ ಸಾಕ್ಷಿ ಪ್ರಜ್ಞೆಯಂತಿವೆ.

**ಹೊಸ ಕನ್ನಡ ಸಂಘಟನೆಗಳ ಉದಯ–**

ಈ ಸಾಂಸ್ಕೃತಿಕ ಪರಂಪರೆಯ ಮುಂದುವರಿಕೆಯಾಗಿ ದೆಹಲಿಯಲ್ಲಿ ಹುಟ್ಟಿಕೊಂಡ ಅನೇಕ ಸಂಸ್ಥೆಗಳಲ್ಲಿ ಅರವತ್ತರ ದಶಕದಲ್ಲಿ ಬಿ.ವಿ.ಕಾರಂತರ ನೇತೃತ್ವದಲ್ಲಿ ಹುಟ್ಟಿಕೊಂಡ ಕನ್ನಡ ಭಾರತಿ ಕನ್ನಡ ರಂಗಭೂಮಿ ಕ್ಷೇತ್ರದಲ್ಲಿ ಅನುಪಮ ಕೊಡುಗೆ ನೀಡಿದೆ.

1970ರ ದಶಕದಲ್ಲಿ ನಾಡು–ನುಡಿಯ ಸಂರಕ್ಷಣೆ ಮತ್ತು ಪ್ರವರ್ಧನೆಯ ಉದ್ದೇಶದಿಂದ ದೆಹಲಿಯಲ್ಲಿ ಮತ್ತಷ್ಟು ಕನ್ನಡ ಸಂಘಟನೆಗಳು ರೂಪುಗೊಂಡವು. ಅವುಗಳಲ್ಲಿ ಜನಕಪುರಿ ಕನ್ನಡ ಕೂಟ(1976), ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ಶರಾವತಿ ಕನ್ನಡ ಸಂಘ (1977) ಹಾಗೂ ಭಾರತೀಯ ತಂತ್ರಜ್ಞಾನ ಸಂಸ್ಥೆ, ದೆಹಲಿಯ ಅರಾವಳಿ ಕನ್ನಡ ಸಂಘ (1976) ಪ್ರಮುಖವಾದವು. ಐವತ್ತು ವರ್ಷಗಳ ಹಿಂದೆ ದೆಹಲಿಯ 1970 ರ ದಶಕದಲ್ಲಿ ದೆಹಲಿ ನಗರ ಅಭಿವೃದ್ಧಿ ಯೋಜನೆಯ ಭಾಗವಾಗಿ ಹೊಸದಾಗಿ ತಲೆಎತ್ತಿದ ಜನಕಪುರಿಯಲ್ಲಿ 1976ರ ನವೆಂಬರ್ 26ರಂದು ಹುಟ್ಟು ಪಡೆದ ಪುಟ್ಟ ಕನ್ನಡ ಕೂಟ ಇಂದು ನಾಲ್ಕು ತಲೆಮಾರುಗಳನ್ನು ತಲುಪಿರುವ ಒಂದು ಸಾಂಸ್ಕೃತಿಕ ವೃಕ್ಷವಾಗಿ ಬೆಳೆದಿದೆ. ಅದರ ನೆರಳಿನಲ್ಲಿ ಹಲವು ಕುಟುಂಬಗಳು ಬೆಳೆದಿವೆ; ಹಲವು ಪ್ರತಿಭೆಗಳು ಅರಳಿವೆ; ಹಲವು ಸ್ನೇಹಗಳು ಗಟ್ಟಿಯಾಗಿವೆ; ಹಲವು ನೆನಪುಗಳು ಹುಟ್ಟಿವೆ.

ದೆಹಲಿಯ ಕನ್ನಡ ಸಾಂಸ್ಕೃತಿಕ ಪರಂಪರೆಯ ಒಂದು ಮಹತ್ವದ ಕೊಂಡಿಯಾಗಿ ತಲೆ ಎತ್ತಿ ನಿಂತಿರುವ

ಜನಕಪುರಿ ಕನ್ನಡ ಕೂಟ ಸಂಖ್ಯೆಯಲ್ಲಿ ಚಿಕ್ಕದಾಗಿದ್ದರೂ ಆಶಯದಲ್ಲಿ ದೊಡ್ಡದಾಗಿತ್ತು. ಕನ್ನಡ ನಾಟಕಗಳಿಗೆ ಜೀವ ತುಂಬಿದ ದೆಹಲಿ ಕನ್ನಡಿಗರು ದೆಹಲಿಯಲ್ಲಿ ಕನ್ನಡ ಉಳಿಸಿ ಬೆಳೆಸುವ ಅನೇಕ ಪ್ರಯತ್ನಗಳಲ್ಲಿ ಕನ್ನಡ ನಾಟಕಗಳಿಗೆ ಗೆಜ್ಜೆ ಕಟ್ಟಿ ಹೆಜ್ಜೆ ಹಾಕಿದ ಕನ್ನಡಿಗರ ಪಾತ್ರ ಬಹಳ ದೊಡ್ಡದು. ಬಹಳಷ್ಟು ಜನ ನಟರಾಗಿ,

ನಿರ್ದೇಶಕರಾಗಿ, ಸಂಗೀತ ನೃತ್ಯ, ಮೇಳ ವಾದ್ಯಗಳ ಮೂಲಕ ಪ್ರೇಕ್ಷಕರ ಗಮನ ಸೆಳೆದಿದ್ದಾರೆ.

ಈ ನಿಟ್ಟಿನಲ್ಲಿ ದೆಹಲಿಗೆ 1950ರ ದಶಕದಲ್ಲಿಯೇ ಕೇಂದ್ರ ಸರ್ಕಾರದ ಸೇವೆಗೆ ಸೇರಿದ ಹಿರಿಯ ಕನ್ನಡಿಗ

ಎಚ್.ಎಸ್.ಕುಲಕರ್ಣಿ , ಅವರ ಪತ್ನಿ ಲಲಿತ ಕುಲಕರ್ಣಿ ಅವರು ಮತ್ತೊಬ್ಬ ಹಿರಿಯ ಕನ್ನಡಿಗ

ಎಚ್.ಎಸ್ ಪಾಟೀಲ್ ಅವರ ನಿರ್ದೇಶನದ ಪುರಂದರ ದಾಸ ನಾಟಕ ದಲ್ಲಿ ನಟನೆ ಮಾಡಿದ್ದಾರೆ ಎನ್ನುವುದು ಉಪಲಬ್ಧ ದಾಖಲೆಗಳಲ್ಲಿ ಕಂಡುಬಂದಿದೆ. ಮುಂದಿನ ಕೆಲವು ವರ್ಷಗಳಲ್ಲಿ ಪ್ರಾರಂಭವಾದ ಜನಕಪುರಿ ಕನ್ನಡ ಕೂಟದ ಬೆಳವಣಿಗೆಯಲ್ಲಿ ಸಕ್ರಿಯ ಪಾತ್ರ ವಹಿಸಿದ ಕನ್ನಡ ರಂಗಭೂಮಿಯ ಹಿರಿಯ ರಂಗಕರ್ಮಿ ಎಚ್. ಎಸ್. ಕುಲಕರ್ಣಿ , ಕೂಟದ 'ಭೀಷ್ಮ ಪಿತಾಮಹರು' ಎಂದು ಗೌರವದಿಂದ ಸ್ಮರಿಸಲ್ಪಡುವ ಕೆ. ಬಿ. ದೇಸಾಯಿ, ಪಿ.ಎಲ್. ಅಗ್ನಿಹೋತ್ರಿ, ನೇತ್ರಾವತಿ ಮಯ್ಯ, ಪಾರ್ವತಿ ಭವಾನಿ ಶಂಕರ್, ಎಚ್.ಎನ್.ಎಸ್. ರಾವ್, ಎಂ.ಕೆ.ಧೀರೇಂದ್ರ ರಾವ್, ಬಿ. ಎಸ್.ರಾಮಕೃಷ್ಣ ಸೇರಿದಂತೆ ಅನೇಕ ಹಿರಿಯರ ಮಾರ್ಗದರ್ಶನ, ಪರಿಶ್ರಮ ಮತ್ತು ನಿಸ್ವಾರ್ಥ ಸೇವೆಯ ಫಲವಾಗಿ ಕೂಟವು ಇಂದಿನ ಹಂತಕ್ಕೆ ಬೆಳೆದು ಬಂದಿದೆ. ಜನಕಪುರಿಯಲ್ಲಿ ನೆಲೆಸಿದ್ದ ಕನ್ನಡಿಗರ ಅಗಾಧ ಪ್ರತಿಭೆ ಅವರ ವೈವಿಧ್ಯಮಯ ಸಾಂಸ್ಕೃತಿಕ ಮಜಲುಗಳಲ್ಲಿ ಇಂದಿಗೂ ರಾರಾಜಿಸುತ್ತಿರುವುದು ಹೆಮ್ಮೆಯ ಸಂಗತಿ.

**ಕನ್ನಡ ಕೂಟದ ಸದಸ್ಯರು**

ಹಲವಾರು ನಾಟಕಗಳನ್ನು ನಿರ್ದೇಶಿಸಿ , ನಟಿಸಿ ಹೊರನಾಡ ಕನ್ನಡಿಗರಾದ ಮನದಾಳದಲ್ಲಿ ನೆಲೆಯೂರಿದ್ದಾರೆ.

ಸಾಹಿತ್ಯದ ಮೂಲಕ ಕವಿಗಳು ಮತ್ತು ಲೇಖಕರು ಕನ್ನಡದ ಕಂಪನ್ನು ಹರಡಿದ್ದಾರೆ.

ಸಮಾಜದ ವಿವಿಧ ಕ್ಷೇತ್ರಗಳಲ್ಲಿ ತಮ್ಮದೇ ಆದ ಛಾಪು ಮೂಡಿಸಿದ ವೈದ್ಯರು, ತಜ್ಞರು, ಉದ್ಯಮಿಗಳು ಹಾಗೂ ವಿವಿಧ ವೃತ್ತಿಪರರು?ಇಂತಹ ಬಹುಮುಖ ಪ್ರತಿಭೆಗಳಿಂದಾಗಿ ಜನಕಪುರಿ ಕನ್ನಡ ಕೂಟ ರಾಜಧಾನಿ ಕನ್ನಡಿಗರಲ್ಲಿ ಸಾಂಸ್ಕೃತಿಕ ಸಮೃದ್ಧಿಗೆ ಹೆಸರಾಗಿದೆ.

ಆರಂಭಿಕ ದಿನಗಳಲ್ಲಿ ಕೂಟವನ್ನು ಕಟ್ಟಿದ ಅನೇಕ ಹಿರಿಯ ಕನ್ನಡಿಗರ ಕುಟುಂಬಗಳು ತಾಯ್ನಾಡಿಗೆ ಮರಳಿವೆ. ಆದರೆ ಭಾರತದ ಸ್ವಾತಂತ್ರ್ಯದ ಸಂಭ್ರಮದ ಆರಂಭಿಕ ವರ್ಷಗಳಲ್ಲಿಯೇ ದೆಹಲಿಗೆ ಬಂದು ಇಲ್ಲಿ ನೆಲೆಯೂರಿದ ಕುಟುಂಬಗಳ ಅನೇಕ ಕನ್ನಡ ಕುಡಿಗಳು ಇಲ್ಲಿಯೇ ನೆಲೆಸಿದ್ದಾರೆ. ಉಮಾ ರಾವ್ ಅವರ ಕುಟುಂಬ, ಸವಿತಾ ಇನಾಂದಾರ್ ಅವರ ಕುಟುಂಬ, ರಾಜೂರಾವ್ ಅವರ ಕುಟುಂಬ, ನಯನಾ ಮನಕಾಪುರೆ ಅವರ ಕುಟುಂಬ ಸೇರಿದಂತೆ ಅನೇಕ ಕುಟುಂಬಗಳ ಮುಂದಿನ ತಲೆಮಾರುಗಳು ದೆಹಲಿಯಲ್ಲಿಯೇ ಕನ್ನಡದ ಬದುಕನ್ನು ಮುಂದುವರಿಸಿಕೊಂಡು ಬಂದಿವೆ. ಇಂದು ಕೆಲವು ಕುಟುಂಬಗಳ ಮೂರನೇ–ನಾಲ್ಕನೇ ತಲೆಮಾರುಗಳೂ ದೆಹಲಿಯಲ್ಲೇ ನೆಲೆಸಿರುವುದು ಕನ್ನಡ ಸಂಸ್ಕೃತಿಯ ಈ ಬೇರುಗಳು ಎಷ್ಟು ಆಳವಾಗಿ ಬೇರೂರಿವೆ ಎಂಬುದಕ್ಕೆ ಸಾಕ್ಷಿಯಾಗಿದೆ.

ಕನ್ನಡ ಭಾಷೆ, ಸಂಸ್ಕೃತಿ, ಕಲೆ ಮತ್ತು ಸಾಹಿತ್ಯದ ಸಂರಕ್ಷಣೆಗೆ ತನ್ನದೇ ಆದ ಕೊಡುಗೆ ನೀಡಿರುವ ಕೂಟವು ತನ್ನ ಸಾಧನೆಗಳನ್ನು ದಾಖಲಿಸುವ ಉದ್ದೇಶದಿಂದ ಸ್ಮರಣ ಸಂಚಿಕೆಗಳನ್ನೂ ಪ್ರಕಟಿಸಿದೆ. 'ಜನಕಪುರಿ ಕನ್ನಡ ಕೂಟ'ದ ಜೊತೆಗೆ ಬೆನ್ನೆಲುಬಾಗಿ ಜನಕಪುರಿ ಮಹಿಳಾ ಮಂಡಲಿಯೂ ಬೆಳೆದು, ಮಹಿಳೆಯರ ಸಕ್ರಿಯ ಪಾಲ್ಗೊಳ್ಳುವಿಕೆಗೆ ವೇದಿಕೆಯನ್ನು ಒದಗಿಸಿದೆ.

**ಸುವರ್ಣ ಮಹೋತ್ಸವದ ಹೊಸ್ತಿಲಲ್ಲಿ**

ಇಂದು ಜನಕಪುರಿ ಕನ್ನಡ ಕೂಟ ತನ್ನ ಐತಿಹಾಸಿಕ ಸುವರ್ಣ ಮಹೋತ್ಸವವನ್ನು ಆಚರಿಸುತ್ತಿರುವುದು ಕೇವಲ ಒಂದು ಸಂಸ್ಥೆಯ ಐವತ್ತು ವರ್ಷಗಳ ಸಾಧನೆಯ ಸಂಭ್ರಮವಲ್ಲ. ಇದು ದೆಹಲಿಯ ಕನ್ನಡಿಗರ ಐದು ದಶಕಗಳ ಒಗ್ಗಟ್ಟು, ನಾಡು–ನುಡಿಯ ಮೇಲಿನ ಪ್ರೀತಿ, ಸಾಂಸ್ಕೃತಿಕ ಬದ್ಧತೆ ಮತ್ತು ಮುಂದಿನ ಪೀಳಿಗೆಯ ಮೇಲಿನ ಹೊಣೆಗಾರಿಕೆಯ ಸಂಭ್ರಮ.

ಈ ಐತಿಹಾಸಿಕ ಸಂದರ್ಭದಲ್ಲಿ ಕೂಟದ ಅಧ್ಯಕ್ಷ ಡಾ.ಅಶೋಕ ಈಟಿ ಅವರ ನೇತೃತ್ವದಲ್ಲಿ,

ಕಾರ್ಯದರ್ಶಿ ಡಾ. ಬಸವರಾಜ, ಖಜಾಂಚಿ ಎಂ. ವಿ. ವೆಂಕಟೇಶ್, ಸೇರಿದಂತೆ ಕಾರ್ಯಕಾರಿ ಸಮಿತಿಯ ಸದಸ್ಯರು ಕೂಟದ ಚಟುವಟಿಕೆಗಳನ್ನು ಮುನ್ನಡೆಸುತ್ತಿದ್ದಾರೆ. ಜನಕಪುರಿ ಮಹಿಳಾ ಮಂಡಳಿಯ ಅಧ್ಯಕ್ಷೆ ರೂಪಶ್ರೀ ಈಟಿ ಹಾಗೂ ಪವಿತ್ರ ತಾಮಣ್ಕರ್ ಸೇರಿದಂತೆ ಮಹಿಳಾ ಮಂಡಳಿಯ ಸದಸ್ಯರು ತಮ್ಮದೇ ಆದ ಉತ್ಸಾಹದಿಂದ ಕಾರ್ಯಕ್ರಮಗಳಿಗೆ ಬೆಂಬಲ ನೀಡುತ್ತಿದ್ದಾರೆ.

ಸುವರ್ಣ ಮಹೋತ್ಸವ ಸಮಿತಿಯ ಸಂಚಾಲಕರಾದ ಬಿ.ಕೆ.ಬಸವರಾಜ ಅವರ ಸಮನ್ವಯದಲ್ಲಿ ಸುವರ್ಣ ಮಹೋತ್ಸವದ ಕಾರ್ಯಕ್ರಮಗಳು ರೂಪುಗೊಳ್ಳುತ್ತಿವೆ. ಈ ಐತಿಹಾಸಿಕ ಸಂದರ್ಭದಲ್ಲಿ ಪ್ರಕಟವಾಗುತ್ತಿರುವ ಸುವರ್ಣ ಸ್ಮರಣ ಸಂಚಿಕೆಯ ಸಂಪಾದನಾ ಕಾರ್ಯದಲ್ಲಿಯೂ ಅನೇಕರು ಶ್ರಮಿಸಿದ್ದಾರೆ. ಪ್ರಧಾನ ಸಂಪಾದಕರಾದ ಡಾ. ಎಸ್.ಎಲ್.ಭಂಡಾರ್ಕರ್, ಸಂಪಾದಕ ಮಂಡಳಿಯ ಸವಿತಾ ಇನಾಂದಾರ್, ಲಾವಣ್ಯ, ಕೃಷ್ಣರಾಜ್ ಹಾಗೂ ನನ್ನನ್ನೂ ಒಳಗೊಂಡ ಸಂಪಾದಕ ಮಂಡಳಿಯ ಪರಿಶ್ರಮದಿಂದ ಈ ಸ್ಮರಣ ಸಂಚಿಕೆ ರೂಪ ಪಡೆದು ಬಿಡುಗಡೆಗೆ ಸಿದ್ಧವಾಗಿದೆ

ಹೀಗೆ ಐವತ್ತು ವಸಂತಗಳನ್ನು ಪೂರೈಸುತ್ತಿರುವ ಜನಕಪುರಿ ಕನ್ನಡ ಕೂಟದ ಕನ್ನಡದ ಕಂಪು ಇನ್ನಷ್ಟು ದೂರ ಹರಡಲಿ. ಕನ್ನಡದ ಕಲರವ ಇನ್ನಷ್ಟು ಗಟ್ಟಿಯಾಗಿ ಮೊಳಗಲಿ. ಕನ್ನಡದ ಕಾಯಕ ಇನ್ನಷ್ಟು ಅರ್ಥಪೂರ್ಣವಾಗಲಿ. 'ಭಾರತ ಜನನಿಯ ತನುಜಾತೆ ಕರ್ನಾಟಕ ಮಾತೆ'ಯ ಕೀರ್ತಿ ರಾಷ್ಟ್ರ ರಾಜಧಾನಿಯಲ್ಲಿ ಸದಾ ಮೊಳಗುತ್ತಿರಲಿ.